ಸಂಪುಟ ೧೪ ಸಂಚಿಕೆ ೨ ಜೂನ್ 1993

ಬ್ಯಾಂಕಿಂಗ್ ಪ್ರಪಂಚ

ವಾರ್ಷಿಕ ಚಂದಾ : ರೂ. 20
ಆಜೀವ ಚಂದಾ : ರೂ. 200

ಈ ಸಂಚಿಕೆಯಲ್ಲಿ

ಸಮನ್ವಯ ಸಮಿತಿ (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್, ನಂ. ೨೨ ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೫೬೦೦೦೨

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ರೋಗಗ್ರಸ್ತ ಬ್ಯಾಂಕಿಂಗ್ ವ್ಯವಸ್ಥೆ

ಬಿ. ಎಸ್. ಚಂದ್ರಶೇಖರ
ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ನಗರ ಶಾಖೆ

ವೈದ್ಯನೇ ವ್ಯಾಧಿಗ್ರಸ್ತನಾದರೆ ಇನ್ನು ರೋಗಿಗಳನ್ನು ಯಾರು ರಕ್ಷಿಸಬೇಕು ? ಭಾರತದ ಆರ್ಥಿಕ ಪ್ರಗತಿಗೆ ಹಾದಿ ಮಾಡಿಕೊಡಬೇಕಾದ ಬ್ಯಾಂಕುಗಳೇ ಈಗ ಆರ್ಥಿಕವಾಗಿ ಸೊರಗಿಹೋಗಿವೆ! ಇದಕ್ಕೆ ಕಾರಣಗಳೇನು ? ಪರಿಹಾರ ಎಲ್ಲಿ ?

ಪ್ರಗತಿಯ ಮುನ್ಸೂಚಕಗಳೆಂದೂ ಅಭಿವೃದ್ಧಿಯ ವೇಗವರ್ಧಕಗಳೆಂದೂ ಒಂದೆರಡು ದಶಕಗಳ ಹಿಂದೆ ಭಾರತೀಯ ಬ್ಯಾಂಕುಗಳನ್ನು ಸ್ತುತಿಸಲಾಗಿತ್ತು. ಇಂಥ ಸ್ತುತಿಗಳು ಕೊಂಚ ಕಾವ್ಯಮಯವೆನ್ನಿಸಿದರೂ ಸತ್ಯಕ್ಕೆ ದೂರವೆನ್ನುವಂಥ ಪರಿಸ್ಥಿತಿ ಆಗ ಇರಲಿಲ್ಲ. ಈ ಎರಡು ದಶಕಗಳಲ್ಲಿ ಬ್ಯಾಂಕುಗಳಿಂದ ಸಾಕಷ್ಟು ನಿಧಿಗಳು ಹೊರಬಂದಿವೆ. ಬ್ಯಾಂಕಿಂಗ್ ವ್ಯವಸ್ಥೆಯ ಸ್ವರೂಪ ಬದಲಾಗದಿದ್ದರೂ ಅದರ ಮೇಲಣ ಪ್ರಭಾವಗಳು ಗಣನೀಯವಾಗಿ ಬದಲಾಗಿವೆ. ಎಲ್ಲ ಸಮರ್ಪಕವಾಗಿಲ್ಲವೆಂದು ಮೇಲ್ನೋಟಕ್ಕೂ ಮನವರಿಕೆಯಾಗುವಂಥ ವ್ಯಾಧಿಗಳು ಬ್ಯಾಂಕಿಂಗ್ ವ್ಯವಸ್ಥೆಯನ್ನು ಒಳಗಿಂದ ತೀವ್ರವಾಗಿ ಪೀಡಿಸುತ್ತಿವೆ. ಅರ್ಥವ್ಯವಸ್ಥೆಯ ದಿಕ್ಸೂಚಿ ಎನ್ನಬಹುದಾದ ಬ್ಯಾಂಕಿಂಗ್ ವ್ಯವಸ್ಥೆಗೆ ಇಂದು ಒದಗಿರುವ ದುಃಸ್ಥಿತಿ ಮತ್ತು ಅವುಗಳಿಗೆ ಕಾರಣಗಳನ್ನು ಕುರಿತ ವಿವೇಚನೆ ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಾಮುಖ್ಯ ಪಡೆದಿದೆ. ಇನ್ನು ಈ ಸ್ಥಿತಿಯನ್ನು ಬದಲಾಯಿಸಿ ವ್ಯವಸ್ಥೆಯನ್ನು ಸ್ವಾಸ್ಥ್ಯದತ್ತ ಒಯ್ಯುವ ಪರಿಹಾರೋಪಾಯಗಳನ್ನು ಕುರಿತು 'ಚಿಂತಿಸುವುದು' ವ್ಯಾವಹಾರಿಕ ಬ್ಯಾಂಕರುಗಳಿಗೆ ತಪ್ಪಿದ್ದಲ್ಲ.

ಹಲವು ವೈರುಧ್ಯಗಳು

"ಯಾವುದೇ ಒಂದು ವ್ಯವಸ್ಥೆಯನ್ನು ಉಚ್ಛ್ರಾಯಸ್ಥಿತಿಗೊಯ್ಯುವ ಬೆಳವಣಿಗೆಗಳ ಜತೆಜತೆಗೇ ಆ ವ್ಯವಸ್ಥೆಯ ಅವನತಿಯ ಅಂಶಗಳೂ ಸೇರಿಕೊಂಡಿರುತ್ತವೆ—ಎಂಬ ಹೇಳಿಕೆ ಭಾರತದ ಬ್ಯಾಂಕಿಂಗ್ ವ್ಯವಸ್ಥೆಗಂತೂ ಸಂಪೂರ್ಣವಾಗಿ ಹೊಂದುತ್ತದೆ" (ಪ್ರೊ॥ ಎಚ್ಚೆಸ್ಕೆ). ಇಲ್ಲಿ ನಡೆದಂಥ ಶಾಖಾ ವಿಸ್ತರಣಕಾರ್ಯ ವಿಶ್ವದಲ್ಲಿ ಬೇರೆಲ್ಲೂ ನಡೆಯಲಿಲ್ಲ. ಬಹುಶಃ ಭಾರತದ ಈಗಿನ ಅನುಭವದಿಂದ ಪಾಠ ಕಲಿಯುವುದೇ ಆದರೆ, ಮುಂದೆಂದೂ ಹೀಗೆ ನಡೆಯಲಾರದು. ಬ್ಯಾಂಕಿಂಗ್ ವ್ಯವಸ್ಥೆಯ ಸೇವೆಗಳನ್ನು ಹೆಚ್ಚು ಹೆಚ್ಚು ಜನರಿಗೆ ತಲಪಿಸುವ ಸ್ತುತ್ಯರ್ಹ ಉದ್ದೇಶದಿಂದ ದೇಶದ ಮೂಲೆಮೂಲೆಗಳಲ್ಲಿ ಸಹಸ್ರಾರು ಬ್ಯಾಂಕ್ ಶಾಖೆಗಳು ತೆರೆದವು. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೇ ಸಂಪೂರ್ಣವಾಗಿ ಮೀಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ಪ್ರತಿ ಜಿಲ್ಲೆಯಲ್ಲೂ ಸ್ಥಾಪಿತವಾದವು. ಲಾಭ ತರುವಷ್ಟು ವ್ಯವಹಾರವಿಲ್ಲದ್ದರಿಂದ ಅನೇಕ ಶಾಖೆಗಳು ತೀವ್ರ ನಷ್ಟಕ್ಕೆ ಗುರಿಯಾದವು.

ಅತಿಯಾಗಿ ಹೆಚ್ಚಿದ ಶಾಖಾಜಾಲದ ಪರಿಣಾಮವಾಗಿ ಸಿಬ್ಬಂದಿಯೂ ನಿಯಂತ್ರಣ ವ್ಯವಸ್ಥೆಯೂ ಹೆಚ್ಚುವುದು ಅನಿವಾರ್ಯವಾಯಿತು. ಕೆಲಸದ (ವ್ಯವಹಾರದ ?) ಗಾತ್ರಕ್ಕೆ ತಕ್ಕಂತೆ ಸಿಬ್ಬಂದಿ ಹೆಚ್ಚಳವಾಗುತ್ತಿಲ್ಲವೆಂಬ ನಿರಂತರ ದೂರಿನ ಜತೆಜತೆಗೇ ಸಿಬ್ಬಂದಿಯ ಸಂಖ್ಯೆ ಕ್ಷಿಪ್ರವಾಗಿ ಏರುತ್ತಿದ್ದರೂ ಈಚೆಗೆ ಸಿಬ್ಬಂದಿ ಕೊರತೆಯ ಸಮಸ್ಯೆ ತೀವ್ರವಾಗಿ ಬಾಧಿಸುತ್ತಿದೆ. ಬ್ಯಾಂಕುಗಳ ನಿಯಂತ್ರಣವ್ಯವಸ್ಥೆ ವಿಕೇಂದ್ರೀಕರಣಗೊಳ್ಳುವುದು ಅಗತ್ಯವಾಯಿತಲ್ಲದೆ ನಿಯಂತ್ರಣ ವೆಚ್ಚವೂ ಅಧಿಕವಾಗತೊಡಗಿತು. ಸಿಬ್ಬಂದಿ ಹೆಚ್ಚಳದ ಪರಿಣಾಮವಾಗಿ ಮೇಲ್ವೆಚ್ಚಗಳೂ ಗಣನೀಯವಾಗಿ ಏರುತ್ತಿವೆ. ಗಣಕೀಕರಣದಿಂದ ಸಿಬ್ಬಂದಿಖರ್ಚು ಮತ್ತಷ್ಟು ಹೆಚ್ಚುವುದನ್ನು ತಪ್ಪಿಸಬಹುದಾದರೂ ಅದು ಅಧಿಕ ವಿನಿಯೋಜನೆಯನ್ನು ಬೇಡುತ್ತದೆ. ಮೇಲಾಗಿ ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶದಲ್ಲಿ ಗಣಕೀಕರಣ ಸುಲಭವಲ್ಲ.

ಬ್ಯಾಂಕ್ ಮುಂಗಡಗಳಲ್ಲಿ ಆಗಿರುವ ಬೆಳವಣಿಗೆ ತಿಳಿದದ್ದೇ. ಸಣ್ಣ ಕೈಗಾರಿಕೆ, ಕೃಷಿ, ಸ್ವಯಂ ಉದ್ಯೋಗ—ಇವೇ ಮುಂತಾದ ಆದ್ಯತಾ ಕ್ಷೇತ್ರಗಳಿಗೆ ಸಾಲ ನೀಡಿಕೆ ಕಡ್ಡಾಯವಾಗಿದ್ದು ಈ ಸಾಲಗಳ ಮಂಜೂರಾತಿ, ಬಟವಾಡೆ, ದಸ್ತೈವಜುಪಾಲನೆ, ಖಾತಾ ನಿರ್ವಹಣೆ, ಉದರಿ ಉಸ್ತುವಾರಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ವಸೂಲಾತಿಗಳ ಸಂಬಂಧದಲ್ಲಿ ಮುಂಗಡಗಳ ಸಂಖ್ಯಾಸ್ಫೋಟದ ದೆಸೆಯಿಂದ ಅಪರಿಹಾರ್ಯವೆನ್ನಿಸುವ ಜಟಿಲ ಸಮಸ್ಯೆಗಳು ಹುಟ್ಟಿಕೊಂಡಿವೆಯೆಂಬುದು ಹಗಲ ಬೆಳಕಿನಂತೆ ಸ್ಪಷ್ಟ. ಕೈಗಾರಿಕಾ ಅಸ್ವಸ್ಥತೆ ಬಹುದೊಡ್ಡ ಸಮಸ್ಯೆಯಾಗಿದ್ದು, ಅದನ್ನು ಪರಿಹರಿಸುವ ದಾರಿ ಕಾಣುತ್ತಿಲ್ಲ. ಆದ್ಯತಾ ವಲಯದಲ್ಲಿ ಬರುವ ಸಣ್ಣ ಕೈಗಾರಿಕೆಗಳೇ ಅಲ್ಲದೆ ಬ್ಯಾಂಕುಗಳಿಂದ ದೊಡ್ಡ ಮೊತ್ತದ ಸಾಲಗಳನ್ನು ಪಡೆದ ನೂರಾರು ಬೃಹತ್ ಕೈಗಾರಿಕೆಗಳೂ ಅಸ್ವಸ್ಥವಾಗಿದ್ದು, ಸಂಬಂಧಿಸಿದ ಸಾಲಗಳು ಜಿಗಟಾಗಿವೆ (Sticky). ಪುನರುಜ್ಜೀವನ

(rehabilitation) ಬಹುತೇಕ ಸಂದರ್ಭಗಳಲ್ಲಿ ಯಶಸ್ವಿಯಾಗಿಲ್ಲ. ಕೃಷಿ ಸಾಲಗಳ ವಸೂಲಾತಿ ಹೆಚ್ಚುಕಡಿಮೆ ಸ್ಥಗಿತಗೊಂಡಿದ್ದ ಸಂದರ್ಭದಲ್ಲಿ ಅತ್ತ ಗಮನಹರಿಸುವ ಬದಲು ಗ್ರಾಮೀಣ ಜನತೆಯ (?) ತೃಪ್ತಿಗಾಗಿ 'ಋಣಪರಿಹಾರ' ಯಜ್ಞಕ್ಕೆ ಅಧ್ವರ್ಯುವಾಗಿ ನಿಲ್ಲಬೇಕಾದ ರಿಸರ್ವ್ ಬ್ಯಾಂಕಿನ ಸ್ಥಿತಿ ಶೋಚನೀಯ. (ಯಜ್ಞದ ಯಾಜಮಾನ್ಯ ಮಾತ್ರ ಆಳುವ ಸರಕಾರದ್ದೇ.) ಬ್ಯಾಂಕುಗಳಿಗೆ ಅವುಗಳ ಮುಂಗಡಗಳ ಮೇಲಣ ಹತೋಟಿ ತಪ್ಪಿಹೋಗಿರುವಂತೆ ಭಾಸವಾಗುತ್ತದೆ. ಈ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲದಂಥ ಪರಿಸ್ಥಿತಿಯೂ ಇದೆ.

ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ರಿಸರ್ವ್ ಬ್ಯಾಂಕಿನ ಹತೋಟಿ ತಪ್ಪಿ ಸರಕಾರದ ಹಸ್ತ ವ್ಯಾಪಕವಾಗಿ ಕಾಣತೊಡಗಿದೆ. ದುರ್ಬಲರಿಗೆ ಸಾಮಾಜಿಕನ್ಯಾಯ ದೊರಕಿಸಲು ಬ್ಯಾಂಕ್ ನಿಧಿಗಳನ್ನು ಬಳಸುವುದು ಯುಕ್ತವೇ ಸರಿ. ಆದರೆ ವಿವೇಚನಾಪೂರ್ಣ ನೀತಿಗಳ ಸ್ಥಾನವನ್ನು ರಾಜಕೀಯ ಲಾಭ—ನಷ್ಟ ಲೆಕ್ಕಾಚಾರ ಆಧರಿಸಿದ ದಿಢೀರ್ ನಿರ್ಣಯಗಳು ಆಕ್ರಮಿಸಿಕೊಳ್ಳತೊಡಗಿವೆ.

ಬಲವಂತ ಮಾಘಸ್ನಾನ

ಬ್ಯಾಂಕುಗಳು ಸಂಗ್ರಹಿಸಿದ ಠೇವಣಿಗಳ ಮೇಲಿನ ಬಡ್ಡಿದರಗಳು ಮತ್ತು ಅವು ನೀಡುವ ಮುಂಗಡಗಳ ಮೇಲಿನ ಬಡ್ಡಿದರಗಳು ರಿಸರ್ವ್ ಬ್ಯಾಂಕಿನಿಂದ ನಿರ್ಧರಿಸಲ್ಪಡುತ್ತವೆ. ಈ ನಿಟ್ಟಿನಲ್ಲಿ ಬ್ಯಾಂಕರುಗಳಿಗೆ ಸ್ವಾತಂತ್ರ್ಯವಿಲ್ಲ. ನಗದು ಮೀಸಲು ಹಾಗೂ ಪರಿನಿಯತ ದ್ರವತ್ವ ಮೀಸಲುಗಳಿಗಾಗಿ (cash reserve and statutory liquidity reserves) ಒಟ್ಟು ಠೇವಣಿಗಳ ಶೇ. 53.5ರಷ್ಟನ್ನು ತೆಗೆದಿಡಬೇಕಾದುದಲ್ಲದೆ ಮುಂಗಡಗಳಲ್ಲಿ ಶೇ. 40ರಷ್ಟನ್ನು ಆದ್ಯತಾವಲಯಗಳಿಗೇ ನೀಡಬೇಕೆಂಬ ನಿರ್ಬಂಧವೂ ಇದೆ. ಆದ್ಯತಾವಲಯಗಳಿಗೆ ನೀಡಲಾಗುವ ಸಾಲಗಳಿಗೆ ಬಡ್ಡಿದರ ಕಡಿಮೆಯಿರುವುದರಿಂದ ಬ್ಯಾಂಕುಗಳ ಲಾಭಪ್ರದತೆ ಕುಂಠಿತಗೊಂಡಿರುವುದು ತಿಳಿದ ವಿಷಯ. ಒಟ್ಟು ಸಾಲಗಳ ಶೇ. 18ರಷ್ಟನ್ನು ಕೃಷಿಗಾಗಿ ಮೀಸಲಿಡಬೇಕಾಗಿದೆ. ಕೃಷಿ ಸಾಲಗಳಲ್ಲಿ ಕಟಬಾಕಿ ಹೆಚ್ಚಾಗುತ್ತಿದೆ. ಕೃಷೀತರ ಸಾಲಗಳ ವಸೂಲಾತಿಯೂ ಮೊದಲಿದ್ದಷ್ಟು ತೃಪ್ತಿಕರವಾಗಿಲ್ಲ. ವಿಪರೀತ ಸಂಖ್ಯೆಯ ಸಣ್ಣ ಸಣ್ಣ ಸಾಲಗಳನ್ನು ನೀಡಲಾಗಿರುವುದರಿಂದ ಸಾಲಗಳ ಉಸ್ತುವಾರಿಯಲ್ಲಿ ತೊಡಕುಂಟಾಗಿರುವುದು ನಿಜ. ಬರ, ಪ್ರವಾಹ, ಕೀಟಹಾವಳಿ ಇಂಥಕಾರಣಗಳಿಂದ ಕೃಷಿ ಸಾಲಗಳು ಕೆಟ್ಟರೆ, ಅಸ್ವಸ್ಥತೆಯ ಕಾರಣದಿಂದ ಕೈಗಾರಿಕಾ ಋಣಗಳು ಕರಡಾಗಿವೆ. ಅಲ್ಪಪ್ರಮಾಣದ ಆದಾಯ ತರುವುದರಿಂದ ಸ್ವಯಂ ಉದ್ಯೋಗ ಸಾಲಗಳ ವಸೂಲಾತಿ ಕಠಿಣವೆನಿಸಿದೆ. ಸರಕಾರದ ಸಾಲ ಯೋಜನೆಗಳು ಸಾಲುಸಾಲಾಗಿ ವಿಫಲವಾಗುತ್ತಿವೆ. ಆದರೂ ಹಲವಾರು ಯೋಜನೆಗಳಡಿ ಸಾಲ ನೀಡಿಕೆ ಒಂದೇ ಸಮನೆ ಮುಂದುವರಿಯುತ್ತಿದೆ. ಪಟ್ಟಣಪ್ರದೇಶಗಳಿಗಾಗಿ ಇನ್ನೊಂದು ಸ್ವಯಂ ಉದ್ಯೋಗ ಯೋಜನೆ ರೂಪುಗೊಂಡಿದೆ. ಇಂಥ ಯೋಜನೆಗಳ ವೈಫಲ್ಯ ಮನವರಿಕೆಯಾಗಿದ್ದರೂ 'ಮರಳಿ ಯತ್ನವ ಮಾಡುವ' ಸರಕಾರದ ಪರಿ ಬ್ಯಾಂಕರುಗಳಿಗೆ ಪೇಚುಂಟುಮಾಡಿದೆ. ಕೆಲವು ಯೋಜನೆಗಳು ರಾಕ್ಷಸಗಾತ್ರ ಸ್ವರೂಪದವಾಗಿದ್ದು ಉಸ್ತುವಾರಿ ಸಾಧ್ಯವಾಗುತ್ತಿಲ್ಲವಾದ್ದರಿಂದ ಸಾಲದ ದುರುಪಯೋಗ ಕೂಡ ವ್ಯಾಪಕವಾಗಿಯೇ ಇದೆ. ಇವೆಲ್ಲ ದರ ಜತೆಗೆ ಮರುಪಾವತಿ ಮಾಡದಿದ್ದವರ ವಿರುದ್ಧ ಪರಿಣಾಮಕಾರಿ ಕ್ರಮ ಕೈಗೊಳ್ಳುವ ಸ್ಥಿತಿ ಇಲ್ಲದಿರುವುದರಿಂದ ಉದ್ದೇಶಪೂರ್ವಕ ಕಟಬಾಕಿಯೂ ಹೆಚ್ಚಿದೆ. ಈ ಮಾತುಗಳು ಕೃಷಿ, ಸಣ್ಣ ಕೈಗಾರಿಕೆ, ಸಣ್ಣ ವ್ಯವಹಾರ, ಸ್ವಯಂ ಉದ್ಯೋಗಗಳಿಗೆ ನೀಡುವ ಸಾಲಗಳಿಗೆ ಮಾತ್ರ ಅನ್ವಯವಾಗುವಂಥವೆಂದು ಭಾವಿಸಬಾರದು. ದೊಡ್ಡಸಾಲಗಳಲ್ಲಿಯೂ ಉದ್ದೇಶಪೂರ್ವಕ ಕಟಬಾಕಿ ಇದೆ. ಈ ಎಲ್ಲ ಸಂಗತಿಗಳು ಬ್ಯಾಂಕರುಗಳಿಗೆ ಮಾತ್ರವಲ್ಲದೆ ಈಗ ಸಾರ್ವಜನಿಕರಿಗೂ ವೇದ್ಯ.

ಬಾರದ ಬಾಕಿ

ವಸೂಲಾತಿ ಹೆಚ್ಚಿಸುವಲ್ಲಿ ಇರುವ ತೊಡಕುಗಳಿಗೆ ಕ್ಷೇತ್ರ ಸಿಬ್ಬಂದಿಯ ಕೊರತೆ, ತರಬೇತಿಯ ಅಭಾವ ಈ ಕಾರಣಗಳೂ ಸೇರಿಕೊಂಡಿವೆ. ಕರಡುಋಣಗಳೆಂದು ಪರಿಗಣಿಸಲಾಗಿರುವ ಸಾಲಗಳೇ ಗಾಬರಿಗೊಳಿಸುವಷ್ಟಿವೆ. ವಾಸ್ತವವಾಗಿ, ಕರಡಾಗಿದ್ದರೂ ಇನ್ನೂ ಹಾಗೆಂದು ಘೋಷಿಸಲ್ಪಡದಿರುವ ಸಾಲಗಳು ಮತ್ತೂ ಅಧಿಕವಾಗಿವೆ. ಸಾಲಗಳ ಸ್ವಾಸ್ಥ್ಯ ಸುಧಾರಿಸುವ ದೃಷ್ಟಿಯಿಂದ ಜಾರಿಗೆ ತಂದ ಸ್ವಾಸ್ಥ್ಯಸಂಕೇತ ವ್ಯವಸ್ಥೆ (Health Code System) ನಿಷ್ಕ್ರಿಯವಾಗಿದೆ. ಒಟ್ಟಾರೆ, ಬ್ಯಾಂಕುಗಳ ನಿಧಿ ಪ್ರವರ್ತನ ಚಕ್ರ ಉರುಳಬೇಕಾದಷ್ಟು ಸುಗಮವಾಗಿ ಉರುಳುತ್ತಿಲ್ಲ ಎಂಬುದೇ ಕೊರಗು.

ಬ್ಯಾಂಕುಗಳು ತಮ್ಮ ಆಸ್ತಿ ಹೊಣೆ ತಃಖ್ತೆಗೆ ಮೇಲ್ಮೆರುಗು (window-dressing) ನೀಡುವ ಪದ್ಧತಿ ಇರುವುದು ತಿಳಿಯದ ವಿಷಯ ಏನಲ್ಲ. ಜತೆಗೆ ಹಲವು ಅಂಶಗಳನ್ನು ಸಾರ್ವಜನಿಕರಿಂದ ಮರೆಮಾಚುವುದೂ ಇದೆ. ಕರಡುಸಾಲಗಳಿಗೆ ಯಥೋಚಿತ ಮೀಸಲುಗಳನ್ನು ಕಲ್ಪಿಸಿದರೆ ಈಗ ತೋರಿಸುತ್ತಿರುವಷ್ಟು ಲಾಭ ತೋರಿಸಲು ಸಾಧ್ಯವಾಗದು. ಇಷ್ಟಾಗಿಯೂ ವ್ಯವಹಾರದ ಗಾತ್ರಕ್ಕೆ ಹೋಲಿಸಿದರೆ ಬ್ಯಾಂಕುಗಳ ಲಾಭ ಕಡಿಮೆಯಾಗುತ್ತಿದೆ ಎಂದೇ ಹೇಳಬೇಕು. 31–3–1990ರಲ್ಲಿ ಅಂತ್ಯವಾದ ವರ್ಷದಲ್ಲಿ ಹನ್ನೆರಡು ವಾಣಿಜ್ಯ ಬ್ಯಾಂಕುಗಳು ನಷ್ಟ ಅನುಭವಿಸಿರುವುದಾಗಿ ತಿಳಿದುಬಂದಿದೆ. ಇವುಗಳಲ್ಲಿ ಮೊಟ್ಟಮೊದಲ ಬಾರಿಗೆ ಸರಕಾರಿ ಕ್ಷೇತ್ರದ ಎರಡು ಬ್ಯಾಂಕುಗಳೂ (ಯುಕೋ ಬ್ಯಾಂಕ್, ನ್ಯೂ ಬ್ಯಾಂಕ್ ಆಫ್ ಇಂಡಿಯಾ) ಸೇರಿದ್ದುದು ನಿಜಕ್ಕೂ ಕಳವಳಕಾರಿ. ಈಗ ಇನ್ನೂ ಕೆಲವು ಬ್ಯಾಂಕುಗಳು ಅಸ್ಥಿರವಾಗಿವೆ.

ಖಾತರಿಯಿಲ್ಲದ ಖಾತರಿ

ನಿಷ್ಕ್ರಿಯ ಆಸ್ತಿಗಳ ನಿರ್ವಹಣೆಯಲ್ಲಿಯೂ ತೊಡಕು. ವಸೂಲಾತಿಗಾಗಿ ಬ್ಯಾಂಕುಗಳು ಹೂಡಿದ ದಾವೆಗಳ ಪ್ರಗತಿ ಮಂದವಾಗಿದೆ. ಅನುಕೂಲಕರ ತೀರ್ಪು ಬಂದರೂ ಡಿಕ್ರಿಗಳ ಅಮಲ್ಜಾರಿ (execution of decrees) ಮಾಡುವುದಾಗಲಿ, ಬ್ಯಾಂಕಿಗೆ ಒತ್ತೆಯಿಟ್ಟ ಆಸ್ತಿಗಳನ್ನು ವಶಪಡಿಸಿಕೊಳ್ಳುವುದಾಗಲಿ ಸಾಧ್ಯವಾಗುತ್ತಿಲ್ಲ. ಈ ಎಲ್ಲ ಕಾನೂನಿಕ ಕ್ರಮಗಳ ಒಂದು ಖಚಿತವಾದ

ಪರಿಣಾಮವೆಂದರೆ–ಖರ್ಚು. ಈಗ ರಾಜೀ ಮೂಲಕ ಬಾಕಿಗಳನ್ನು ಇತ್ಯರ್ಥ ಮಾಡುವ ಪ್ರಯೋಗ ಆರಂಭವಾಗಿದ್ದು ಇದರ ಪ್ರಗತಿಯನ್ನು ನೋಡಬೇಕಾಗಿದೆ. ರಾಜಿಯಲ್ಲಿ ಬ್ಯಾಂಕಿನ ಕಡೆಯಿಂದ ಬಿಟ್ಟುಕೊಡಬೇಕಾಗುವುದೆಂಬುದಂತೂ ನಿಜ.

ಬ್ಯಾಂಕು ಆದ್ಯತಾವಲಯಗಳಿಗೆ ನೀಡುವ ಸಾಲಗಳಿಗೆ ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮದ ಖಾತರಿ ಇದೆ. ಆದರೆ ಈ ಖಾತರಿ ಭಾಗಶಃ ಮಾತ್ರ ಲಭ್ಯವಾಗುತ್ತದೆ. (ಗರಿಷ್ಠ ಶೇ. 60) ಬಹುತೇಕ ಸಾಲಗಳ ಸಂಬಂಧದಲ್ಲಿ ಖಾತರಿಯ ಪ್ರಮಾಣ ಶೇ. 50 ಅಥವಾ ಇನ್ನೂ ಕಡಿಮೆ. ಖಾತರಿಯ ಒಟ್ಟು ಮೊತ್ತವೂ ಮಿತಿಗೊಳಪಟ್ಟಿರುತ್ತದೆ. (ಉದಾ : ಟ್ರ್ಯಾಕ್ಟರ್ ಸಾಲಗಳಿಗೆ ಈ ಮಿತಿ ರೂ. 37,500). ಬ್ಯಾಂಕುಗಳ ಕ್ಲೇಮುಗಳನ್ನು ಪರಿಶೀಲಿಸಿ ಪಾವತಿ ಮಾಡುವಲ್ಲಿ ವಿಳಂಬವಾಗುತ್ತಿದೆಯೆಂಬ ದೂರು ಹಾಗಿರಲಿ, ಕ್ಲೇಮುಗಳ ಸಂಖ್ಯೆ, ಗಾತ್ರ ಅಧಿಕವಾಗಿ, ಖಾತರಿ ನಿಗಮವೇ ಮುಳುಗುವ ಸಂಭವವೇ ಅಧಿಕವೆನಿಸಿದೆ. ಸಂಸ್ಥೆಗೆ ನೀಡುವ ಖಾತರಿ ಶುಲ್ಕ ಬ್ಯಾಂಕುಗಳಿಗೆ ಹೊರೆ ಎನಿಸಿದೆ.

ಮಧ್ಯಸ್ಥಗಾರಿಕೆ ಚ್ಯುತಿ

ಬ್ಯಾಂಕ್ ಠೇವಣಿಗಳು ವರ್ಷೇ ವರ್ಷೇ ಏರುತ್ತಿದ್ದರೂ ಏರಿಕೆಯ ದರ ಕಡಿಮೆಯಾಗಿರುವುದನ್ನು ಮರೆಯುವಂತಿಲ್ಲ. ಬ್ಯಾಂಕುಗಳಲ್ಲಿ ಗ್ರಾಹಕಸೇವೆಯ ಗುಣಮಟ್ಟ ಇಳಿದಿರುವುದೆಂಬ ಸಾರ್ವಜನಿಕ ಭಾವನೆಯನ್ನು ಆಧಾರರಹಿತವೆನ್ನಲಾಗದು. ವರ್ಗ ಬ್ಯಾಂಕಿಂಗಿನಿಂದ ಸಮೂಹ ಬ್ಯಾಂಕಿಂಗಿನತ್ತ ನಡೆದಿರುವುದರಿಂದ ಠೇವಣಿದಾರರು 'ರಾಜ'ರಾಗಿ ಉಳಿದಿಲ್ಲ. ಹಿಂದೆ ದೊರೆಯುತ್ತಿದ್ದ ಸವಲತ್ತುಗಳನ್ನು ಠೇವಣಿದಾರರು ಇನ್ನೂ ಮರೆತಿಲ್ಲ. ಬ್ಯಾಂಕ್ ಸೇವೆಯ ದರಗಳೂ ಏರಿವೆ. ಈಚೆಗೆ ಈ ಏರಿಕೆಯ ಬಿಸಿ ಇನ್ನಷ್ಟು ತಾಕಿದೆ. ಬ್ಯಾಂಕುಗಳ ಠೇವಣಿಗಳ ಸಂಗ್ರಹಣೆಯ ಹಾದಿ ಏರು ದಾರಿ. ಠೇವಣಿ ಸಂಗ್ರಹಣೆಯ ವೆಚ್ಚ ಅಧಿಕವಾಗುವುದೆಂದು ನಿರೀಕ್ಷಿಸಬಹುದು (ಕೆಲವು ಬ್ಯಾಂಕುಗಳು ಅಧಿಕೃತವಾಗಿಯೋ ಅನಧಿಕೃತವಾಗಿಯೋ ಠೇವಣಿದಾರರಿಗೆ ಕಮಿಷನ್ ನೀಡುವುದೂ ಆರಂಭವಾಗಿದೆ). ಠೇವಣಿ ಆಧಾರಿತ ಮುಂಗಡಗಳನ್ನು ನಿರುತ್ತೇಜಿಸಬೇಕೆಂದರೂ ಠೇವಣಿಗಳನ್ನು ಆಕರ್ಷಿಸಲು ಬ್ಯಾಂಕರುಗಳು ಮುಂಗಡಗಳ ಆಮಿಷ ತೋರುವುದು ಸಾಮಾನ್ಯವಾಗಿದೆ. ಇಲ್ಲಿರುವ ನಷ್ಟಸಂಭಾವ್ಯತೆಯನ್ನು ಕಾಣುವುದು ಕಷ್ಟವಲ್ಲ.

ಠೇವಣಿದಾರರ ಹಾಗೂ ಸಾಲಗಾರರ ನಡುವೆ ಮಧ್ಯಸ್ಥಗಾರಿಕೆಯೇ ಬ್ಯಾಂಕುಗಳ ವ್ಯವಹಾರದ ಮೂಲಸ್ವರೂಪವಾಗಿದ್ದು ಬ್ಯಾಂಕುಗಳ ಮಧ್ಯಸ್ಥಗಾರಿಕೆಗೆ ಚ್ಯುತಿ (disintermediation) ಉಂಟಾಗಿದೆ. ಒಳ್ಳೆಯ ಕೆಲವು ಕಂಪನಿಗಳು ಸಾಲಕ್ಕಾಗಿ ಬ್ಯಾಂಕುಗಳಿಗೆ ಬರದೆ ಸಾರ್ವಜನಿಕರಿಂದ ನೇರವಾಗಿ ಹಣ ಸಂಗ್ರಹಿಸಿಕೊಳ್ಳುವುದರಿಂದ ಬ್ಯಾಂಕುಗಳ ಮುಂಗಡಗಳು ಅಷ್ಟರಮಟ್ಟಿಗೆ ಕಡಿಮೆಯಾಗುತ್ತವೆ. ಸಾರ್ವಜನಿಕರಿಂದ ಬ್ಯಾಂಕಿಗೆ ಬರಬಹುದಾಗಿದ್ದ ಠೇವಣಿಗಳೂ ಲಭ್ಯವಾಗುವುದಿಲ್ಲ ; ಒಳ್ಳೆಯ ಕಂಪನಿಗಳು ಸುಲಭವಾಗಿ ಸಾರ್ವಜನಿಕ ವಿನಿಯೋಜನೆಯನ್ನು ಆಕರ್ಷಿಸುತ್ತವೆ. ಆದ್ದರಿಂದ ಬ್ಯಾಂಕುಗಳಿಗೆ ನಷ್ಟವಾಗುವುದು ಒಳ್ಳೆಯ ವ್ಯವಹಾರ. ಸಾರ್ವಜನಿಕ ವಿನಿಯೋಜನೆಯನ್ನು ಆಕರ್ಷಿಸಲಾಗದ ದುರ್ಬಲ ಕಂಪನಿಗಳು ಬ್ಯಾಂಕ್ ಸಾಲ ಪಡೆಯಲು ಸರದಿಯಲ್ಲಿ ನಿಲ್ಲಬಹುದಾದರೂ ಮುಂಗಡಗಳ ಗುಣಮಟ್ಟ ಇಳಿಯುವ ಭೀತಿ ತಪ್ಪಿದ್ದಲ್ಲ. ವಾಣಿಜ್ಯ ಪತ್ರಗಳ (commercial papers) ನೀಡಿಕೆಗೆ ರಿಸರ್ವ್ ಬ್ಯಾಂಕ್ ಹಸಿರು ಬಾವುಟ ತೋರಿಸಿದ್ದರಿಂದ ಬ್ಯಾಂಕುಗಳ ಮಧ್ಯಸ್ಥಗಾರಿಕೆಗೆ ಇನ್ನೂ ಕೊಂಚ ಪೆಟ್ಟು. ಮಧ್ಯಸ್ಥಗಾರಿಕೆ ಚ್ಯುತಿಯ ಪರಿಣಾಮ ಸ್ಪಷ್ಟವಾಗಿಲ್ಲವೆಂದು ವಾದಿಸಿದರೂ ಬ್ಯಾಂಕುಗಳ ಸ್ಥಿತಿ ಮೊದಲಿಗಿಂತ ಉತ್ತಮವಾಗಿದೆ ಎಂದು ಯಾರೂ ಭಾವಿಸಲಾರರು.

ಬ್ಯಾಂಕುಗಳು ಅಧಿಕವಾಗಿ ಲಾಭ ಗಳಿಸುತ್ತಿರುವ ಕ್ಷೇತ್ರವೆಂದರೆ ವಿದೇಶಿ ವಿನಿಮಯ. ಆದ್ದರಿಂದ ವಿದೇಶಿ ವಿನಿಮಯ ವ್ಯವಹಾರಗಳನ್ನು ಮತ್ತಷ್ಟು ವರ್ಧಿಸಲು ಯತ್ನಿಸಲಾಗುತ್ತಿದೆ. ಇದು ಒಳ್ಳೆಯದೇ. ಬ್ಯಾಂಕುಗಳ ಆದಾಯದ ಶೇ. 80ಕ್ಕಿಂತಲೂ ಹೆಚ್ಚಿನ ಅಂಶ ಬಡ್ಡಿ ಅಂತರದಿಂದ ಲಭ್ಯವಾಗುವುದರಿಂದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಲಾಭಪ್ರದತೆಯನ್ನು ಮುಂದುವರಿಸಿಕೊಂಡು ಹೋಗುವುದು ಸಾಧ್ಯವಿಲ್ಲ. ಅಲ್ಲದೆ ವಿದೇಶಿ ವಿನಿಮಯ ವ್ಯವಹಾರದಿಂದ ಹೆಚ್ಚಿನ ಲಾಭ ಗಳಿಸುತ್ತಿರುವುದು ಮುಂಚೂಣಿಯಲ್ಲಿರುವ ಕೆಲವು ಬ್ಯಾಂಕುಗಳು ಮಾತ್ರ ; ಬಹುತೇಕ ಬ್ಯಾಂಕುಗಳು ತಮ್ಮ ವಿದೇಶಿ ವ್ಯವಹಾರ ಸಾಧನೆಯ ಬಗ್ಗೆ ಹೇಳಿಕೊಳ್ಳುವಂತಿಲ್ಲ. ಪ್ರವಾಸಿ ಚೆಕ್ಕುಗಳು, ಸುರಕ್ಷಾ ಕಪಾಟುಗಳೇ ಮುಂತಾದ ಸೇವೆಗಳಿಂದ ಲಭ್ಯವಾಗುವ ಆದಾಯ ಕಡಿಮೆ. ಬ್ಯಾಂಕುಗಳಿಗೆ ಲಾಭ ತರುವ ಅಂಶಗಳ ಪಟ್ಟಿಯಲ್ಲಿ 'ಸರಕಾರಿ ವ್ಯವಹಾರ'ವೂ ಸೇರುತ್ತದೆ. ಕೆಲಸದ ಗಾತ್ರವನ್ನು ಗಮನಿಸಿದರೆ ಈ ಲಾಭದ ಅಂಶ ಎಷ್ಟು ಅಲ್ಪ ಎಂಬುದು ಮನವರಿಕೆಯಾಗುತ್ತದೆ.

ಹೊಸ ನೋವುಗಳ ಅನ್ವೇಷಣೆ

ಮಧ್ಯಸ್ಥಗಾರಿಕೆ ಚ್ಯುತಿಯ ಹಿನ್ನೆಲೆಯಲ್ಲಿ ಬ್ಯಾಂಕುಗಳು ತಮ್ಮ ಚಟುವಟಿಕೆಗಳನ್ನು ವಿವಿಧೀಕರಿಸುತ್ತಿರುವುದಂತೂ ನಿಜ. ವಣಿಕ ಬ್ಯಾಂಕಿಂಗ್, ಲೀಸಿಂಗ್ ಮತ್ತು ಪರಸ್ಪರ ನಿಧಿಗಳು ಹೊಸ ಚಟುವಟಿಕೆಗಳಲ್ಲಿ ಮುಖ್ಯವಾದವು. ಈ ಚಟುವಟಿಕೆಗಳಿಗಾಗಿ ಪ್ರತ್ಯೇಕ ಉಪಸಂಸ್ಥೆಗಳನ್ನು ಕೆಲವು ಬ್ಯಾಂಕುಗಳು ಸ್ಥಾಪಿಸಿವೆ. ಈ ಕ್ಷೇತ್ರದಲ್ಲಿ ಕೆಲವು ಬ್ಯಾಂಕುಗಳು ಮಾತ್ರ ಪ್ರವೇಶಿಸಿದ್ದು ಇನ್ನೂ ಪ್ರಯೋಗದ ಹಂತದಲ್ಲೇ ಇರುವ ಈ ವಿವಿಧೀಕರಣ (Diversification) ಒಂದು ದುರ್ಬಲ ಆಶಾಕಿರಣವಷ್ಟೆ.

ವೇತನ ಪಡೆಯುವ ವರ್ಗಕ್ಕೆ ಸಾಲ ನೀಡಲು ಬ್ಯಾಂಕುಗಳು ಮುಂದಾಗುತ್ತಿವೆ. ಹೆಚ್ಚಿನ ಬಡ್ಡಿದರ ಮತ್ತು ಸುರಕ್ಷತೆಗಳು ಇಲ್ಲಿನ ಪ್ರಮುಖ ಆಕರ್ಷಣೆಗಳು. ಈ ಸಾಲಗಳು ಅಲ್ಪಪ್ರಮಾಣದವಾಗಿರುವುದರಿಂದಲೂ, ಬಹುಮಟ್ಟಿಗೆ ಪಟ್ಟಣ/ಅರೆಪಟ್ಟಣ ಪ್ರದೇಶಗಳಿಗೆ ಸೀಮಿತವಾಗಿರುವುದರಿಂದಲೂ ಲಾಭಪ್ರದತೆಯ ಮೇಲೆ ಹೆಚ್ಚು ಪರಿಣಾಮ ಬೀರಲಾರವು. ಇವುಗಳ ಉಸ್ತುವಾರಿ ವೆಚ್ಚವೂ ಅಧಿಕವಾಗಿರುವುದರಿಂದ ಬ್ಯಾಂಕುಗಳು ಹೆಚ್ಚಿನದೇನನ್ನೂ ನಿರೀಕ್ಷಿಸುವಂತಿಲ್ಲ.

ದಕ್ಷತೆ—ಎಲ್ಲಿದೆ ?

ಬ್ಯಾಂಕಿಂಗ್ ಕ್ಷೇತ್ರದಲ್ಲಿನ ದಕ್ಷತೆಯ ವಿಷಯವೂ ಚರ್ಚೆಗೆ ಅರ್ಹ. ಕೈಗಾರಿಕಾ ಬಾಂಧವ್ಯಕ್ಕೂ ದಕ್ಷತೆಗೂ ನಂಟು. ಹಾಗೆಯೇ ಬ್ಯಾಂಕಿಂಗಿನಂಥ ಕ್ಷೇತ್ರದಲ್ಲಿ ವೃತ್ತಿಪರತೆಗೂ ದಕ್ಷತೆಗೂ ಪರಸ್ಪರ ಸಂಬಂಧವಿದೆ. ಸರಕಾರದ ಹಸ್ತಕ್ಷೇಪದ ಬಗೆಗೆ ಆಕ್ಷೇಪವಿಲ್ಲದಿದ್ದರೂ ಆ ಹಸ್ತಕ್ಷೇಪ ಒಂದು ಮಿತಿಯನ್ನು ಮೀರದಿರಬೇಕೆಂಬುದನ್ನು ಎಲ್ಲರೂ ಒಪ್ಪಬೇಕು. ಮಿತಿಮೀರಿದ ಸರಕಾರೀ ಹಸ್ತಕ್ಷೇಪದಿಂದ ಬ್ಯಾಂಕುಗಳಲ್ಲಿ ಮೊದಲಿನ ವೃತ್ತಿಪರತೆ ಉಳಿದಿಲ್ಲ. ಸರಕಾರದ ಆಡಳಿತ ಸೂತ್ರ ಹಿಡಿದವರ ಕೈಗೊಂಬೆಗಳೇ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವಂತಾದರೆ ವೃತ್ತಿಪರತೆಯನ್ನೂ ದಕ್ಷತೆಯನ್ನೂ ನಿರೀಕ್ಷಿಸುವುದು ಹೇಗೆ ? ರಿಸರ್ವ್ ಬ್ಯಾಂಕಿನ ಸ್ಥಿತಿಯೂ ಇದೇ. ಆದ್ದರಿಂದ ಕಾರ್ಮಿಕರ ಬೇಡಿಕೆಗಳನ್ನು ಕುರಿತು ಬ್ಯಾಂಕುಗಳು ಸ್ವಂತ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ಕೈಗಾರಿಕಾ ಬಾಂಧವ್ಯ ಮೊದಲಿನಷ್ಟು ಹಿತವಾಗಿ ಉಳಿದಿಲ್ಲ. ಬ್ಯಾಂಕುಗಳು ತನ್ನತನ ಕಳೆದುಕೊಂಡು ಸರಕಾರಿ ಇಲಾಖೆಗಳ ಮಟ್ಟಕ್ಕೆ ಇಳಿದಿವೆ. ಬ್ಯಾಂಕ್ ಅಧಿಕಾರಿಗಳ, ನೌಕರರ ನೈತಿಕ ಸ್ಥೈರ್ಯ ಇಳಿಮುಖವಾಗಿದೆಯೆಂದರೆ ತಪ್ಪಲ್ಲ. ಇವೆಲ್ಲವನ್ನೂ ಮೀರಿ ಬ್ಯಾಂಕುಗಳು ಆಂತರಿಕವಾಗಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವ ಸೂಚನೆಗಳೇನೂ ಕಾಣುತ್ತಿಲ್ಲ.

ಮನ್ನಾ—ಮೇಳ

1990ರಲ್ಲಿ ರೈತರ ಸಾಲಮನ್ನಾ ಯೋಜನೆಯನ್ನು ಸರಕಾರ ಘೋಷಿಸಿದ್ದರಿಂದ ಬ್ಯಾಂಕಿಂಗ್ ವ್ಯವಸ್ಥೆಗೆ ಸಾಕಷ್ಟು ಧಕ್ಕೆಯುಂಟಾಯಿತು. "ಕೃಷಿ ಮತ್ತು ಗ್ರಾಮೀಣ ಋಣ ಪರಿಹಾರ ಯೋಜನೆ" (Agricultural and Rural Debt Relief Scheme)*ಯ ಉದ್ದೇಶ ಎಷ್ಟೇ ಶ್ಲಾಘನೀಯವೆಂದರೂ ಅದನ್ನು ಸಾರ್ವಜನಿಕವಾಗಿ ಘೋಷಿಸಿರುವ ಮತ್ತು ಜಾರಿಗೆ ತಂದಿರುವ ರೀತಿಗಳು ಪ್ರಶ್ನಾರ್ಹವಾಗಿಯೇ ಉಳಿಯುತ್ತವೆ. ದುರ್ಬಲ ವರ್ಗಗಳಿಗೆ ನೀಡಿದ ಸಾಲಗಳು ಕರಡಾದರೆ ಬ್ಯಾಂಕುಗಳ ಆಂತರಿಕ ವ್ಯವಸ್ಥೆಯಲ್ಲೇ ಪರಿಹಾರವಿತ್ತು. ಅದರಿಂದ ರಾಜಕೀಯ ಲಾಭವಿರಲಿಲ್ಲ, ಅಷ್ಟೆ. ಇಂಥ ಯೋಜನೆಗಳ ಹಿನ್ನೆಲೆಯಲ್ಲಿ ವಸೂಲಾತಿ ಮುಂದುವರಿದೀತೇ ? ಮುಂದೆಯೂ ಸಾಲಗಾರರು ಮರುಪಾವತಿಗೆ ಮನಸ್ಸು ಮಾಡುವರೆಂದು ನಂಬಬಹುದೇ ? ಇಂಥದೇ ಇನ್ನೊಂದು ಯೋಜನೆಗೆ ಅವರು ಕಾದು ಕುಳಿತುಕೊಳ್ಳಲಾರರೇ ? ಕೃಷಿಯೇತರ ಸಾಲಗಾರರೂ 'ಪರಿಹಾರ'ದ ಕನಸು ಕಾಣಬಹುದಷ್ಟೆ ? ಕೈಗಾರಿಕಾ ಸಾಲಗಾರರಿಗೂ ಸಮಸ್ಯೆಗಳಿದ್ದೇ ಇವೆ. ಅವರೂ ಪರಿಹಾರಕ್ಕಾಗಿ ಪಟ್ಟು ಹಿಡಿದರೆ ಆಶ್ಚರ್ಯವಲ್ಲ.

ಇದಕ್ಕೆ ಮೊದಲೇ 'ಸಾಲಮೇಳ'ಗಳು ಸಾಕಷ್ಟು ಅನಾಹುತ ನಡೆಸಿಯಾಗಿತ್ತು. ಬ್ಯಾಂಕಿಂಗ್ ವಿಭಾಗದ ಸಚಿವರು ಕರ್ನಾಟಕಕ್ಕೆ ಸೇರಿದವರಾದ್ದರಿಂದ ಕರ್ನಾಟಕದಲ್ಲಿ ಅದರ ಪರಿಣಾಮ ಹೆಚ್ಚಾಗಿತ್ತು. ಕುರಿಗಳಂತೆ ಜನರನ್ನು ಸೇರಿಸಿ ಲಕ್ಷಾಂತರ ಮಂದಿಗೆ ಉಪಾಹಾರ, ಪಾನೀಯ ವ್ಯವಸ್ಥೆ ಮಾಡಿ ಬ್ಯಾಂಕಿನ ಖರ್ಚಿನಲ್ಲಿ ಜಾತ್ರೆ ನಡೆಸಿ ಸಹಸ್ರಸಂಖ್ಯೆಯಲ್ಲಿ ಬ್ಯಾಂಕ್ ಸಾಲಗಳನ್ನು ವಿವೇಕರಹಿತವಾಗಿ ಹಂಚುವ ಕೆಲಸ ಒಂದೆರಡು ವರ್ಷ ಯಾವ ಅಡ್ಡಿಯೂ ಇಲ್ಲದೆ ನಡೆಯಿತು. ಸ್ಥಳೀಯ ಪುಢಾರಿಗಳು ಬ್ಯಾಂಕ್ ಅಧಿಕಾರಿಗಳನ್ನು ನಡುಗಿಸಿದರು. ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳ ಕೀಲುಗೊಂಬೆಯಾಗಲು ನಿರಾಕರಿಸಿದ ಬ್ಯಾಂಕ್ ಅಧಿಕಾರಿಗಳಿಗೆ ಸಾರ್ವಜನಿಕವಾಗಿ ತೇಜೋವಧೆ ಮಾಡಿದ ನಿದರ್ಶನಗಳೂ ಇವೆ. ಸಾಲನೀಡಿಕೆಯ ಮೂಲಭೂತ ಸೂತ್ರಗಳನ್ನು ಗಾಳಿಗೆ ತೂರಿ, ವಿರಳವಾದ ಬ್ಯಾಂಕ್ ಉದರಿಯನ್ನು ಮೇಳಗಳ ಹೆಸರಲ್ಲಿ ಪೋಲು ಮಾಡಲಾಯಿತು. ಹೀಗೆ ಚೆಲ್ಲಾಡಿದ ಸಾರ್ವಜನಿಕ ಹಣವನ್ನು ಮರುಪಾವತಿ ಮಾಡದೆಯೂ ಇರಬಹುದೆಂದು ಸಾಲಗಾರರು ಭಾವಿಸಲು ಸಾಧ್ಯವಾಗುವಂಥ ರೀತಿಯಲ್ಲಿ ವಿದ್ಯಮಾನಗಳು ನಡೆದವು.

ವಸೂಲಾತಿ ವ್ಯವಸ್ಥೆಯೇ ನಿಷ್ಕ್ರಿಯವಾಗುವಂತೆ ಮಾಡುವ ಇಂಥ ಕಾರ್ಯಕ್ರಮಗಳನ್ನು ಕೈಗೊಂಡವರಿಗೆ ಬಹುಶಃ ಇದರ ದುಷ್ಪರಿಣಾಮಗಳ ಅರಿವಾಗಲಾರದು. ಪರಿಣಾಮಗಳ ಅರಿವು ಇರುವವರಂತೂ ನಿರ್ಧರಿಸುವ ಸ್ಥಿತಿ ಇಲ್ಲ. ರಿಸರ್ವ್ ಬ್ಯಾಂಕ್ ಮತ್ತು ಎಲ್ಲ ಬ್ಯಾಂಕುಗಳಿಗೆ ಸ್ವಾಯತ್ತತೆ ಎಷ್ಟು ಅಗತ್ಯ ! ಆದರೆ ಇಂದಿನ ಸ್ಥಿತಿಯಲ್ಲಿ ಅದನ್ನು ಊಹಿಸಿಕೊಳ್ಳುವುದೂ ಎಷ್ಟು ಕಷ್ಟ !

ವಂಚನೆಯ ಪಿಡುಗು

1992 ಭಾರತದ ಬ್ಯಾಂಕಿಂಗ್ ಇತಿಹಾಸದಲ್ಲಿ ಕರಾಳ ವರ್ಷ. ದೇಶದ ಮತ್ತು ಪ್ರಾಯಶಃ ವಿಶ್ವದ ಇತಿಹಾಸದಲ್ಲೇ ಅತ್ಯಂತ ದೊಡ್ಡ ವಂಚನೆ ಪ್ರಕರಣ ನಡೆದುಹೋಯಿತು. ಅವ್ಯವಹಾರದ ಗಾತ್ರವೇ ಗಾಬರಿಗೊಳಿಸುವಂಥದು. 3,079 ಕೋಟಿ ರೂ. ಎಂದರೆ ದೇಶದ ರಾಷ್ಟ್ರೀಕೃತ ಬ್ಯಾಂಕುಗಳ ಒಟ್ಟು ವಾರ್ಷಿಕ ಲಾಭಕ್ಕಿಂತ ಅಧಿಕ ! ಬ್ಯಾಂಕುಗಳ ಪ್ರತಿಭೂತಿ ವ್ಯವಹಾರದಲ್ಲಿ (securities transactions) ಬಳಸಲಾಗುವ ಬ್ಯಾಂಕ್ ರಸೀತಿಗಳ ಮೂಲಕ ಭಾರೀ ಅವ್ಯವಹಾರ ನಡೆಯಿತು. ಹರ್ಷದ್ ಮೆಹತಾ, ಅಭಯ್ ನರೋತ್ತಮ್ ಎಂಬ ಇಬ್ಬರು ಪ್ರಮುಖ ಷೇರು ದಳ್ಳಾಳಿಗಳು ವ್ಯವಸ್ಥೆಯ ದೋಷಗಳ ಪೂರ್ಣ ಪ್ರಯೋಜನ ಪಡೆದು ಬ್ಯಾಂಕುಗಳನ್ನು ವಂಚಿಸಿ ಈ ಕೆಟ್ಟ ದಾಖಲೆ

---

*ಯೋಜನೆಯ ಸಾರಾಂಶವನ್ನು ಸ್ಥೂಲವಾಗಿ ಹೀಗೆ ತಿಳಿಸಬಹುದು :

ಬ್ಯಾಂಕಿಂಗ್ ವಲಯದಿಂದ ಗ್ರಾಮೀಣ ಪ್ರದೇಶಗಳಲ್ಲಿ ನೀಡಲಾದ ಕೃಷಿ ಮತ್ತು ಕೃಷಿ ಆಧಾರಿತ ಸಣ್ಣ ಕೈಗಾರಿಕೆ ಹಾಗೂ ಸಣ್ಣ ವ್ಯಾಪಾರ ಸಾಲಗಳಿಗೆ ಹತ್ತು ಸಾವಿರ ರೂಪಾಯಿಗಳವರೆಗೆ ಋಣ ಪರಿಹಾರ ನೀಡಬೇಕು. ಬರ(draught)ದ ಕಾರಣ ವಸೂಲಾತಿಯಾಗದ ಸಾಲಗಳಿಗೆ ಈ ರಿಯಾಯಿತಿ ಅನ್ವಯವಾಗುತ್ತದೆ. ಸಹಕಾರಿ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿ ನೀಡಿದ ಸಾಲಗಳು ಈ ಯೋಜನೆಯಡಿ ಬರುತ್ತವೆ. ಕೃಷಿಕರು, ಕೃಷಿ ಕಾರ್ಮಿಕ, ಸಣ್ಣ ವ್ಯಾಪಾರಿಗಳು ಈ ಯೋಜನೆಯ ಫಲಾನುಭವಿಗಳು. ಯೋಜನೆಯಲ್ಲಿ ನಿಗದಿಪಡಿಸಲಾದ ನಿರ್ದಿಷ್ಟ ಅವಧಿಯಲ್ಲಿ ನೀಡಲಾದ ಸಾಲಗಳಿಗೆ ಮಾತ್ರ ಪರಿಹಾರ. ಋಣಪರಿಹಾರದ ಮಿತಿ ರೂ. 10,000 ಆದರೂ ದೊಡ್ಡ ಮೊತ್ತದ ಸಾಲಗಳನ್ನು ಪಡೆದವರಿಗೂ ಈ ಪರಿಹಾರ ಲಭ್ಯ.

ಸ್ಥಾಪಿಸಿದರು. ಮೆಂಹತಾನ ವಿಚಾರಣೆ ಆರಂಭವಾಗುತ್ತಿದ್ದ ಹಾಗೆಯೇ ಇಡೀ ಬ್ಯಾಂಕಿಂಗ್ ವ್ಯವಸ್ಥೆಯೂ ವಿಚಾರಣೆಯ ಕಟಕಟೆಯಲ್ಲಿ ನಿಂತಂತಾಯಿತು. ಕೆಲವು ಬ್ಯಾಂಕುಗಳ ವರಿಷ್ಠ ಅಧಿಕಾರಿಗಳೂ ಹಗರಣದಲ್ಲಿ ಶಾಮೀಲಾಗಿದ್ದುದು ಅತ್ಯಂತ ವಿಷಾದದ ಸಂಗತಿ.

ಭಾರತೀಯ ಸ್ಟೇಟ್ ಬ್ಯಾಂಕ್, ನ್ಯಾಷನಲ್ ಹೌಸಿಂಗ್ ಬ್ಯಾಂಕ್, ಬ್ಯಾಂಕ್ ಆಫ್ ಕರಾಡ್, ಮೆಟ್ರೋಪಾಲಿಟನ್ ಕೋ ಆಪರೇಟಿವ್ ಬ್ಯಾಂಕ್, ಗ್ರಿಂಡ್ಲೇಸ್ ಬ್ಯಾಂಕ್, ಸ್ಟಾಂಡರ್ಡ್ ಚಾರ್ಟರ್ಡ್ ಬ್ಯಾಂಕ್—ಇವು ಅವ್ಯವಹಾರದಲ್ಲಿ ಪಾಲ್ಗೊಂಡಿದ್ದು, ಅನೇಕ ವಿವರಗಳು ಬೆಳಕಿಗೆ ಬಂದವು. ಈ ಹಗರಣದಲ್ಲಿ ಭರಿಸ ಲಾಗದ ನಷ್ಟ ಹೊಂದಿದ ಬ್ಯಾಂಕ್ ಆಫ್ ಕರಾಡ್ ಅವಸಾಯನ (Liquidation)ಕ್ಕೊಳಗಾಯಿತು. ಪ್ರತಿಭೂತಿಗಳ ಆಧಾರ ವಿಲ್ಲದೆ ತನ್ನ ಸಾಮರ್ಥ್ಯ ಮೀರಿ ಬ್ಯಾಂಕ್ ರಸೀತಿಗಳನ್ನು ನೀಡಿದ್ದ ಕ್ಕಾಗಿ ಅದಕ್ಕೆ ಇಂಥ ದುಃಸ್ಥಿತಿ ಒದಗಿತು. ಭಾರತೀಯ ಸ್ಟೇಟ್ ಬ್ಯಾಂಕಿನ ಉಪಮಹಾವ್ಯವಸ್ಥಾಪಕ ಶ್ರೀ ಸಿ. ಎಲ್. ಖೆಮಾನಿ ಯವರೂ ಸೇರಿದಂತೆ ಹಲವು ಬ್ಯಾಂಕ್ ಅಧಿಕಾರಿಗಳು ಬಂಧನ ಕ್ಕೊಳಗಾದರು. ಭಾರತೀಯ ಸ್ಟೇಟ್ ಬ್ಯಾಂಕ್ ತನಗೆ ಉಂಟಾದ ನಷ್ಟ ಭರಿಸಲು ಸುಮಾರು 600 ಕೋಟಿ ರೂ.ಗಳನ್ನು ತೆಗೆದಿರಿಸಿ ದರೆ, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್ 275 ಕೋಟಿ ರೂ. ತೆಗೆದಿರಿಸಿತು. ಅವ್ಯವಹಾರದ ವಿವರಗಳು ದಿನೇದಿನೇ ತೆರೆದು ಕೊಳ್ಳುತ್ತ ದೇಶದ ಜನತೆಯನ್ನು ತಲ್ಲಣಗೊಳಿಸಿದುವು. ಇಂಥ ಭಾರೀ ಹಗರಣದಿಂದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಂಬಿಕೆ ಸಡಿಲ ಗೊಳ್ಳದಿದ್ದೀತೇ ?

ಕಾವಲು ನಿದ್ದೆ

ಪ್ರತಿಭೂತಿ ಅವ್ಯವಹಾರ (Security scam) ಕುರಿತ ಹೆಚ್ಚಿನ ವಿವರಗಳು ಈ ಲೇಖನದ ವ್ಯಾಪ್ತಿಯನ್ನು ಮೀರಿದ್ದಾದರೂ, ಇಲ್ಲಿ ರಿಸರ್ವ್ ಬ್ಯಾಂಕಿನ ಪಾತ್ರ ಕುರಿತು ಚರ್ಚಿಸಲೇ ಬೇಕು. ಬ್ಯಾಂಕುಗಳ ಎಲ್ಲ ಪ್ರತಿಭೂತಿ ವ್ಯವಹಾರದ ಸಂಬಂಧದಲ್ಲಿ ದಾಖಲೆ ಗಳ ನಿರ್ವಹಣೆ ಇನ್ನಷ್ಟು ಉತ್ತಮವಾಗಿರುವಂತೆ ನೋಡಿಕೊಳ್ಳಲು ರಿಸರ್ವ್ ಬ್ಯಾಂಕಿಗೆ ಸಾಧ್ಯವಾಗಲಿಲ್ಲವೇ ? ರಿಸರ್ವ್ ಬ್ಯಾಂಕಿನ ಬ್ಯಾಂಕಿಂಗ್ ವಹಿವಾಟುಗಳ ಇಲಾಖೆಯಲ್ಲಿನ 'ಪರಿಣತರು' ಏನು ಮಾಡುತ್ತಿದ್ದರು ? (ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವೃತ್ತಿಪರತೆ ಉಳಿದಿದೆಯೇ ಎಂಬ ಪ್ರಶ್ನೆಯೂ ಇದೆ.) ರಿಸರ್ವ್ ಬ್ಯಾಂಕಿನ ಉಸ್ತುವಾರಿ ಸಮರ್ಪಕವಾಗಿದ್ದಿದ್ದರೆ ಬ್ಯಾಂಕ್ ಆಫ್ ಕರಾಡ್ ಮುಳುಗಡೆಯಾಗುವ ಸಂದರ್ಭ ಸೃಷ್ಟಿಯಾಗುತ್ತಿತ್ತೇ ? ಅದು ಹಾಗಿರಲಿ, ರಿಸರ್ವ್ ಬ್ಯಾಂಕಿನ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟ ಸಹಾಯಕ ಸಂಸ್ಥೆಯಾದ ನ್ಯಾಷನಲ್ ಹೌಸಿಂಗ್ ಬ್ಯಾಂಕು ಪೇರು ದಳ್ಳಾಳಿಗಳ ವ್ಯವಹಾರ ಜಾಲದಲ್ಲಿ ಸಿಲುಕಿಕೊಳ್ಳದಂತೆ ತಡೆಯಲು ಸಾಧ್ಯವಾಗಲಿಲ್ಲವೇ ?[1]

ಪಾರದರ್ಶಕತೆ

ಬ್ಯಾಂಕುಗಳ ಆಸ್ತಿ ಹೊಣೆ ತಃಖ್ತೆಗಳು ಪಾರದರ್ಶಕ (transparent)ವಾಗಿರಬೇಕೆಂಬ ವಾದಕ್ಕೆ ಈಗ ಬೆಂಬಲ ದೊರೆಯುತ್ತಿರುವುದು ಸ್ವಾಗತಾರ್ಹ. 1992–93ರ ಸಾಲಿನಿಂದ ಬ್ಯಾಂಕುಗಳ ಆಸ್ತಿ ಹೊಣೆ ತಃಖ್ತೆಯ ಸ್ವರೂಪ ಬದಲಾಗಿದೆ. ಈ ಸಾಲಿನಿಂದ ಬ್ಯಾಂಕುಗಳ ಆಸ್ತಿ ಹೊಣೆ ತಃಖ್ತೆಗಳಲ್ಲಿ ಹೆಚ್ಚಿನ ವಿವರಗಳು ಪ್ರಕಟವಾಗಲಿವೆ.

ಅನೇಕ ಬ್ಯಾಂಕ್ ಸಾಲಗಳ ಸಂಬಂಧದಲ್ಲಿ ಅಸಲಿನ ವಸೂಲಾತಿಯೇ ಸಂಶಯಾಸ್ಪದವಾಗಿದ್ದರೂ ಅವುಗಳ ಮೇಲೆ ಬಡ್ಡಿ ಲೆಕ್ಕ ಹಾಕಿ ಆದಾಯವೆಂದು ತೋರಿಸುವುದು ಈವರೆಗೆ ಸಾಮಾನ್ಯ ಪದ್ಧತಿಯಾಗಿತ್ತು. ಆದರೆ ಈ ಬಾರಿ ರಿಸರ್ವ್ ಬ್ಯಾಂಕ್ ಆದಾಯ ಗ್ರಹಣಕ್ಕೆ (income recognition) ಸ್ಪಷ್ಟ ಮಾನದಂಡಗಳನ್ನು ಸೂಚಿಸಿದೆ. ಹಾಗೇ, ಆಸ್ತಿಗಳ (ಬ್ಯಾಂಕ್ ಸಾಲಗಳ) ವರ್ಗೀಕರಣಕ್ಕೆ (Asset classification) ಸಂಬಂಧಿ ಸಿದ ಸೂಚನೆಗಳೂ ಸ್ವಾಗತಾರ್ಹ.[2] ಈ ಸೂಚನೆಗಳಂತೆ ಒಂದು ವರ್ಷಕ್ಕಿಂತ ಅಧಿಕ ಕಾಲ ಕ್ರಮರಹಿತವಾದ (irregular) ಸಾಲ ಗಳ, ಜಿಗಟಾದ ಸಾಲಗಳ (sticky loans) ಅಥವಾ ಸಂಶಯಾ ಸ್ಪದ ಸಾಲಗಳ (doubtful loans) ಮೇಲಣ ಬಡ್ಡಿಯನ್ನು ಆದಾಯವೆಂದು ಬ್ಯಾಂಕುಗಳು ಪರಿಗಣಿಸುವಂತಿಲ್ಲ. ಜತೆಗೆ ಸಾಲ ಗಳು ಎಷ್ಟು ಕಾಲದಿಂದ ಬಾಕಿಯಾಗಿವೆ ಎಂಬುದನ್ನಾಧರಿಸಿ ವ್ಯವಸ್ಥೆ ಮಾಡಬೇಕಾದ ಉಪಬಂಧವನ್ನು (Provisions) ಗಣ- ನೀಯವಾಗಿ ಏರಿಸಲಾಗಿದೆ.

ಈ ಕ್ರಮಗಳಿಂದ ಬ್ಯಾಂಕುಗಳು ಲಾಭ ತೋರಿಸುವುದು ಕಷ್ಟ ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್

---

1 ಈ ಹಗರಣವು 'ವ್ಯವಸ್ಥೆಯ ವೈಫಲ್ಯ'ದ ಫಲ ಎಂಬ ಕೇಂದ್ರ ಹಣಕಾಸು ಸಚಿವರ ಹೇಳಿಕೆ ತೀರ ಹಗುರವೆಂದು ತೋರಬಹುದಾದರೂ ಸತ್ಯ. ಆದರೆ ವ್ಯವಸ್ಥೆಯನ್ನು ನೇರ್ಪಡಿಸುವುದು ರಿಸರ್ವ್ ಬ್ಯಾಂಕಿನ ಮತ್ತು ಅರ್ಥಸಚಿವಾಲಯದ ಹೊಣೆಯೆಂಬುದನ್ನು ಮರೆಯುವಂತಿಲ್ಲ. ಈ ಹಗರಣ ನಡೆದ ಮೇಲೆ ಬ್ಯಾಂಕುಗಳ ಪ್ರತಿಭೂತಿ ವ್ಯವಹಾರಗಳನ್ನು ಕಟ್ಟೆಚ್ಚರದಿಂದ ನಿಯಂತ್ರಿಸಲಾಗುತ್ತಿದೆ. ರಿಸರ್ವ್ ಬ್ಯಾಂಕಿಗೆ ತನ್ನ ತಪ್ಪುಗಳ ಅರಿವಾಗಿರ ಬೇಕು. ಹಗರಣದಲ್ಲಿ ಪೆಟ್ಟುತಿಂದ ಭಾರತೀಯ ಸ್ಟೇಟ್ ಬ್ಯಾಂಕಿನ ಸೆಕ್ಯೂರಿಟೀಸ್ ಶಾಖೆ (ಮುಂಬೈ) ಸಂಪೂರ್ಣ ಗಣಕೀಕರಣಗೊಂಡಿದೆ. ಪ್ರತಿಭೂತಿಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಲೋಪರಹಿತವಾದ ವ್ಯವಸ್ಥೆ ಯೊಂದನ್ನು ರೂಪಿಸಲು ರಿಸರ್ವ್ ಬ್ಯಾಂಕ್ ಶ್ರಮಿಸುತ್ತದೆ.

2 ಬ್ಯಾಂಕ್ ಸಾಲಗಳನ್ನು Standard asset, Substand- ard assct, Doubtful asset ಮತ್ತು Loss asset (ಶಿಷ್ಟ ಆಸ್ತಿ, ಕಳಪೆ ಆಸ್ತಿ, ಸಂಶಯಾಸ್ಪದ ಆಸ್ತಿ ಮತ್ತು ನಷ್ಟ ಆಸ್ತಿ) ಎಂದು ವರ್ಗೀಕರಿಸಲಾಗುವುದು. ಶಿಷ್ಟೇತರ ಆಸ್ತಿಗಳ ಮೇಲೆ (non-stand- ard assets) ವಿಧಿಸಲಾದ ಬಡ್ಡಿಯನ್ನು ಆದಾಯವೆಂದು ಪರಿಗಣಿಸು ವಂತಿಲ್ಲ. ಒಳ್ಳೆಯ ಸಾಲಗಳು ಮಾತ್ರ Standard asset (ನಿಗದಿ ಆಸ್ತಿ) ಎಂದು ಪರಿಗಣಿಸಲ್ಪಡುತ್ತವೆ. ಒಂದು ವರ್ಷಕ್ಕಿಂತ ಹೆಚ್ಚುಕಾಲ ಕ್ರಮ ರಹಿತವಾದ (irregular) ಸಾಲಗಳು 'Substandard' (ಕಳಪೆ) ಎಂದೂ ಎರಡು ವರ್ಷಕ್ಕಿಂತ ಹೆಚ್ಚುಕಾಲ ಕ್ರಮರಹಿತವಾದ ಸಾಲಗಳು doubtful (ಸಂಶಯಾಸ್ಪದ) ಎಂದೂ ವರ್ಗೀಕರಿಸಲ್ಪಡುತ್ತವೆ. ವಸೂಲಾತಿಯೇ ಸಾಧ್ಯವಿಲ್ಲದಿರುವಂಥ ಕರಡು ಸಾಲಗಳು ನಷ್ಟ ಆಸ್ತಿ ಗಳ (Loss asset) ಗುಂಪಿಗೆ ಸೇರುತ್ತವೆ.

ಆಫ್ ಬರೋಡಾ, ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಇಂಥ ಕೆಲವೇ ಬ್ಯಾಂಕುಗಳನ್ನುಳಿದು ಇತರ ಬ್ಯಾಂಕುಗಳು ಬಹುಶಃ ಲಾಭ ತೋರಿಸಲಾರವೆಂದು ಭಾವಿಸಲಾಗಿದೆ. ಈ ಬ್ಯಾಂಕುಗಳ ಲಾಭದ ಅಂಕಿಗಳೂ ಕಳೆದ ವರ್ಷದ ಅಂಕಿಗಳಿಗೆ ಹೋಲಿಸಿದಂತೆ ಕಡಿಮೆಯಾಗಬಹುದೆಂದೂ ನಂಬಲಾಗಿದೆ. ಇದು ಹೇಗೇ ಇರಲಿ, ಬ್ಯಾಂಕಿನ ಲಾಭ ಮತ್ತು ಆಸ್ತಿಗಳ ವಾಸ್ತವಚಿತ್ರವನ್ನು ಗ್ರಹಿಸುವಲ್ಲಿ ರಿಸರ್ವ್ ಬ್ಯಾಂಕಿನ ಹೊಸ ಸೂಚನೆಗಳು ಸಹಕಾರಿಯಾಗಿವೆ.

ಬ್ಯಾಂಕಿಂಗ್ ವ್ಯವಸ್ಥೆಯ ಪುನರ್ರಚನೆ

ಸರಕಾರಿ ಮತ್ತು ಖಾಸಗಿ ಕ್ಷೇತ್ರದ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಗ್ರಾಮೀಣ—ಹೀಗೆ ಮೂರು ರೀತಿಯ ಬ್ಯಾಂಕುಗಳು ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪ್ರಮುಖವಾಗಿವೆ. ರಾಜ್ಯ ಹಣಕಾಸು ಸಂಸ್ಥೆಗಳೂ ಕೈಗಾರಿಕೆಗೆ ವ್ಯಾಪಕವಾಗಿ ಉದರಿ ನೀಡುತ್ತಿವೆ. ರಫ್ತಾವುದು ಬ್ಯಾಂಕ್ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳೂ ಇವೆ. ಇವೆಲ್ಲವುಗಳ ಕಾರ್ಯದ ಉಸ್ತುವಾರಿ, ನಿಯಂತ್ರಣ ನಡೆಸಬೇಕಾದ ಕೇಂದ್ರ ಬ್ಯಾಂಕ್ ಆದ ರಿಸರ್ವ್ ಬ್ಯಾಂಕಿನ ಹೊಣೆ ತುಂಬ ದೊಡ್ಡದು. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಪಾತ್ರ ಇನ್ನಷ್ಟು ಹಿರಿದಾಗುವ ನಿರೀಕ್ಷೆಯಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ (public sector) 28 ವಾಣಿಜ್ಯ ಬ್ಯಾಂಕುಗಳಿವೆ. ಅವುಗಳ ಶಾಖೆಗಳು ಸಹಸ್ರ ಸಂಖ್ಯೆಯಲ್ಲಿ ದೇಶಾದ್ಯಂತ ಹರಡಿಕೊಂಡಿವೆ. ನಮ್ಮ ದೇಶದಲ್ಲಿ ಶಾಖಾ ಬ್ಯಾಂಕಿಂಗ್ ವ್ಯವಸ್ಥೆ ಬಹುಶಃ ಅನಿವಾರ್ಯ. ಆದರೆ ಇಷ್ಟು ಸಂಖ್ಯೆಯ ಬ್ಯಾಂಕ್ ಶಾಖೆಗಳು ಪ್ರಪಂಚದ ಬೇರಾವ ದೇಶದಲ್ಲೂ ಇಲ್ಲ ಎಂಬುದು ಹೆಮ್ಮೆಗಿಂತಲೂ ಗಾಬರಿಯುಂಟುಮಾಡಬೇಕಾದ ಸಂಗತಿ. ಇದೀಗ ಬ್ಯಾಂಕ್ ಶಾಖೆಗಳನ್ನು ತೆರೆಯುವ ಅಥವಾ ಮುಚ್ಚುವ ಕುರಿತ ನಿರ್ಧಾರವನ್ನು ಬ್ಯಾಂಕುಗಳಿಗೇ ಬಿಟ್ಟುಕೊಡಲಾಗಿದೆ.

ಸಾರ್ವಜನಿಕ ಕ್ಷೇತ್ರದ ಎಲ್ಲ ವಾಣಿಜ್ಯ ಬ್ಯಾಂಕುಗಳನ್ನು ಒಟ್ಟುಗೂಡಿಸಿ ನಾಲ್ಕೈದು ಪ್ರಾದೇಶಿಕ ಬ್ಯಾಂಕುಗಳನ್ನು ರೂಪಿಸಬೇಕೆಂಬುದು ಒಂದು ಆಲೋಚನೆ. ಹೀಗೆ ಮಾಡಿದರೆ ಬ್ಯಾಂಕುಗಳ ಸ್ವರೂಪ ಈಗಿರುವಂತೆ ಇರುವುದಿಲ್ಲವೆಂಬುದು ಖಚಿತ. ಇನ್ನೊಂದು ಸಲಹೆಯೆಂದರೆ, ನಷ್ಟ ಅನುಭವಿಸುತ್ತಿರುವ ಬ್ಯಾಂಕುಗಳನ್ನು ಲಾಭ ಮಾಡುವ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವುದು; (Merge) ಹೀಗೆ ಕೆಲವು ಬ್ಯಾಂಕುಗಳನ್ನು ಒಟ್ಟುಗೂಡಿಸಿ ಬ್ಯಾಂಕುಗಳ ಸಂಖ್ಯೆಯನ್ನು ಕಡಿಮೆ ಮಾಡುವುದು. ಹೀಗಾದರೆ ಓಡುವ ಕುದುರೆಯೊಂದಿಗೆ ಕುಂಟುಕತ್ತೆಯನ್ನು ಕಟ್ಟಿದಂತಾಗಬಹುದು ಎಂದು ಈ ಆಲೋಚನೆಗೆ ಹಲವರು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ. ಬ್ಯಾಂಕುಗಳ ವ್ಯವಹಾರದ ಗಾತ್ರ ಹಾಗೂ ಬ್ಯಾಂಕ್ ಶಾಖೆಗಳ ಸಂಖ್ಯೆಯ ಅಗಾಧತೆಯನ್ನು ನೋಡಿದರೆ ಇಂಥ ಯಾವ ಸಲಹೆಯೂ ವ್ಯಾವಹಾರಿಕವಾಗಿ ಕಾಣುತ್ತಿಲ್ಲ. ಆದ್ದರಿಂದ ಕೇವಲ ಚಿಂತನೆಗಳಿಗೆ, ಚರ್ಚೆಗಳಿಗೆ ವಿಪುಲ ಅವಕಾಶ ಕೊಟ್ಟು ಯಥಾಸ್ಥಿತಿ ಮುಂದುವರಿಯುತ್ತಿದೆ.

'ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಗೆ ಸ್ಥಾನವಿಲ್ಲ' (RRBs have no place) ಎಂದು ಕಳೆದ ದಶಕದಲ್ಲೇ ಘೋಷಿಸಿದವರನ್ನು ಕರಾಳದಿನದ ಭವಿಷ್ಯವಾದಿಗಳೆಂದು (doomsday prophets) ಭಾವಿಸಲಾಗಿತ್ತು. ಆದರೆ ಈಗ ಆ ಹೇಳಿಕೆಯ ಸತ್ಯತೆ ಅರಿವಾಗಿದೆ. ವಾಣಿಜ್ಯ ಬ್ಯಾಂಕು ಮತ್ತು ಗ್ರಾಮೀಣ ಬ್ಯಾಂಕ್ ಉದ್ಯೋಗಿಗಳ ಸಂಬಳ ಸಾರಿಗೆಗಳಲ್ಲಿ ಏಕರೂಪತೆ ತರಬೇಕೆಂಬ ಬೇಡಿಕೆ ಈಡೇರಿರುವುದರಿಂದ ಮೊದಲೇ ನಷ್ಟದ ಸುಳಿಗೆ ಸಿಲುಕಿದ್ದ ಗ್ರಾಮೀಣ ಬ್ಯಾಂಕುಗಳಿಗೆ ಇನ್ನಷ್ಟು ಗಾಸಿಯಾಗಿದೆ. ಬಹುತೇಕ ಎಲ್ಲ ಗ್ರಾಮೀಣ ಬ್ಯಾಂಕುಗಳೂ ನಷ್ಟದಲ್ಲಿದ್ದು ಅನೇಕ ಗ್ರಾಮೀಣ ಬ್ಯಾಂಕುಗಳ ಬಂಡವಾಳ ಇಡಿಯಾಗಿ ಕೊಚ್ಚಿಹೋಗಿದೆ. ಈ ಗ್ರಾಮೀಣ ಬ್ಯಾಂಕುಗಳ ಬಂಡವಾಳ ತುಂಬಿಕೊಡಲು ವಾಣಿಜ್ಯ ಬ್ಯಾಂಕುಗಳಿಗೆ ಈಗಿನ ಸ್ಥಿತಿಯಲ್ಲಿ ಬಹುಶಃ ಸಾಧ್ಯವಿಲ್ಲ. ಗ್ರಾಮೀಣ ಬ್ಯಾಂಕುಗಳನ್ನು ಪ್ರಾಯೋಜಿಸಿದ ವಾಣಿಜ್ಯ ಬ್ಯಾಂಕುಗಳೇ ಅವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಬೇಕೆಂಬ ಸಲಹೆಗೂ ಸ್ವಾಗತ ದೊರೆತಿಲ್ಲ. ಅದರಿಂದ ವಾಣಿಜ್ಯ ಬ್ಯಾಂಕುಗಳ ಹೊಣೆ ಅಗಾಧವಾಗಿ ಹೆಚ್ಚಿ ಇಡೀ ಬ್ಯಾಂಕಿಂಗ್ ವ್ಯವಸ್ಥೆಯ ಲಾಭಪ್ರದತೆ ಕುಂಠಿತವಾಗುತ್ತದೆ.

ಗ್ರಾಮೀಣ ಬ್ಯಾಂಕುಗಳನ್ನು ಒಟ್ಟುಗೂಡಿಸಿ ಅವುಗಳ ಎಲ್ಲ ಶಾಖೆಗಳನ್ನೂ 'ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್' (National Rural Bank) ಎಂಬ ಶೃಂಗ ಸಂಸ್ಥೆಮಾಡಿ ತರಬೇಕೆಂಬ ಆಲೋಚನೆಗೆ ಹೆಚ್ಚು ಮನ್ನಣೆ ದೊರೆತಿದೆ. ಹೀಗೆ ಮಾಡುವಾಗ ಗ್ರಾಮೀಣ ಬ್ಯಾಂಕುಗಳ ಶಾಖೆಗಳ ಸಂಖ್ಯೆಯನ್ನು ಗಣನೀಯವಾಗಿ ಇಳಿಸಬೇಕಾಗುವುದು. ಈ ಬ್ಯಾಂಕಿನ ಬಂಡವಾಳ ನಿರ್ಮಾಣಕ್ಕೆ ಕೇಂದ್ರ ಸರಕಾರ ನೆರವು ಒದಗಿಸಬೇಕಾದ ಸಮಸ್ಯೆಯಂತೂ ಇದ್ದೇ ಇದೆ.

ಬಂಡವಾಳ ಪರ್ಯಾಪ್ತತೆ

ಅಂತರರಾಷ್ಟ್ರೀಯ ವ್ಯವಹಾರದಲ್ಲಿ ನಿರತವಾಗಿರುವ ವಾಣಿಜ್ಯ ಬ್ಯಾಂಕುಗಳ ಬಂಡವಾಳಪರ್ಯಾಪ್ತತೆಯ (Capital adequacy) ಸಂಗತಿಯೂ ಪ್ರಾಮುಖ್ಯ ತಳೆದಿದೆ. ಅಂತರರಾಷ್ಟ್ರೀಯ ರಂಗದಲ್ಲಿ ವ್ಯವಹರಿಸಲು ವಾಣಿಜ್ಯ ಬ್ಯಾಂಕುಗಳು ತಮ್ಮ ಹೊಣೆಗಳ ಕನಿಷ್ಠ ಶೇ. 8ರಷ್ಟು ಬಂಡವಾಳ ಹೊಂದಿರಬೇಕೆಂಬ ಸೂಚನೆ ತಲೆನೋವಾಗಿದೆ. ಈಗ ನಮ್ಮ ಬ್ಯಾಂಕುಗಳ ಬಂಡವಾಳ ಇದರ ಕಾಲು ಭಾಗದಷ್ಟೂ ಇಲ್ಲ.

ರಿಸರ್ವ್ ಬ್ಯಾಂಕಿನ ಹೊಸ ಆದೇಶದಂತೆ ಬ್ಯಾಂಕ್ ಸಾಲಗಳ ವರ್ಗೀಕರಣ ನಡೆದು ಉಪಬಂಧಗಳ (Provisions) ವ್ಯವಸ್ಥೆಯಾಗಬೇಕಾಗಿರುವುದರಿಂದ ಬ್ಯಾಂಕುಗಳ ಲಾಭದಿಂದ ಬಂಡವಾಳ ಹೆಚ್ಚುವುದಕ್ಕಿಂತಲೂ ಅದು ಇನ್ನಷ್ಟು ಕಡಿಮೆಯಾಗುವ ಭೀತಿಯೇ ಇದೆ. 31-3-1993ರ ವೇಳೆಗೆ ಬಂಡವಾಳದ ಮಟ್ಟವನ್ನು ಶೇ. 4ಕ್ಕೆ ಏರಿಸಬೇಕೆಂಬ ರಿಸರ್ವ್ ಬ್ಯಾಂಕಿನ ಸೂಚನೆಯನ್ನು ಜಾರಿಗೆ ತರಲು 20 ರಾಷ್ಟ್ರೀಕೃತ ಬ್ಯಾಂಕುಗಳ ಪೈಕಿ 14ಕ್ಕೆ ಮಾತ್ರ ಸಾಧ್ಯವಾಗಿದೆಯೆಂದು ವರದಿಯಾಗಿದೆ. ಬಂಡವಾಳಕ್ಕಾಗಿ ಕೇಂದ್ರ ಬಜೆಟ್ಟಿನಲ್ಲಿ 5,900 ಕೋಟಿ ರೂ.ಗಳ ವ್ಯವಸ್ಥೆ ಮಾಡಿದ್ದರಿಂದ

ಬ್ಯಾಂಕುಗಳ ಬಂಡವಾಳ ಇಷ್ಟರಮಟ್ಟಿಗಾದರೂ ಬಲಗೊಳ್ಳಲು ಸಾಧ್ಯವಾಯಿತು. ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತಿತರ ಕೆಲ ಬ್ಯಾಂಕುಗಳು ಸಾರ್ವಜನಿಕರಿಂದ ಬಂಡವಾಳ ಸಂಗ್ರಹಿಸಬೇಕೆಂಬ ಯೋಜನೆ ಕಾರ್ಯಗತವಾದ ಮೇಲೆ ಪರಿಸ್ಥಿತಿ ಕೊಂಚ ಸುಧಾರಿಸೀತು.

ನಮ್ಮ ಬ್ಯಾಂಕುಗಳಿಗೆ ವಿದೇಶೀ ಬ್ಯಾಂಕುಗಳೊಡನೆ ಸ್ಪರ್ಧೆ ತೀವ್ರವಾಗಿದೆ. ಕಡಿಮೆ ಆದಾಯ ತರುವ ಆದ್ಯತಾವಲಯ ಸಾಲಗಳಿಂದಾಗಿ ದೇಶೀಯ ಬ್ಯಾಂಕುಗಳಿಗೆ ಪರಿಸ್ಥಿತಿ ಪ್ರತಿಕೂಲವಾಗಿದೆ, ಆದ್ಯತಾವಲಯವನ್ನು ಪುನರ್ವ್ಯಾಖ್ಯೆ (redefine) ಗೊಳಪಡಿಸಬೇಕೆಂದೂ, ಆದ್ಯತಾವಲಯಕ್ಕೆ ನೀಡಬೇಕಾದ ಸಾಲದ ಪ್ರಮಾಣವನ್ನು ಶೇ. 30 ಅಥವಾ ಇನ್ನೂ ಕಡಿಮೆ ಮಟ್ಟಕ್ಕೆ ತಗ್ಗಿಸಬೇಕೆಂದೂ ಬಲವಾದ ಅಭಿಪ್ರಾಯವಿದೆ.

ಖಾಸಗೀಕರಣ

ಬ್ಯಾಂಕುಗಳ ಖಾಸಗೀಕರಣದ ಪ್ರಶ್ನೆ ದೊಡ್ಡದಾದರೂ ಸಧ್ಯಕ್ಕೆ ಯಥಾಸ್ಥಿತಿ ಮುಂದುವರಿದಿದೆ. ಸಾರ್ವಜನಿಕ ಬ್ಯಾಂಕುಗಳಲ್ಲಿ ಗ್ರಾಹಕ ಸೇವೆಯ ಗುಣಮಟ್ಟ ಕುಸಿದಿದೆ, ದಕ್ಷತೆಯ ಅಭಾವವಿದೆ, ವ್ಯವಸ್ಥಾಪನ ಸಮರ್ಪಕವಾಗಿಲ್ಲ, ಸಿಬ್ಬಂದಿ ಅಶಿಸ್ತು ಹೆಚ್ಚಿದೆ. ಉತ್ತರದಾಯಿತ್ವ (accountability) ಮಾಯವಾಗಿದೆ ಎಂಬ ವಾದಗಳಲ್ಲಿ ತಥ್ಯವಿದ್ದೀತು. ಆದರೆ ಈ ಪರಿಸ್ಥಿತಿಗೆ ನಿಜವಾದ ಕಾರಣಗಳನ್ನು ಕಂಡುಹಿಡಿಯದೆ, 'ಖಾಸಗೀಕರಣವೇ ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ' ಎಂಬ ದೃಷ್ಟಿ ಸಲ್ಲದು. ಸಾರ್ವಜನಿಕ ಬ್ಯಾಂಕುಗಳ ನೌಕರವರ್ಗಗಳಿಂದ ಖಾಸಗೀಕರಣಕ್ಕೆ ತೀವ್ರ ವಿರೋಧವಿದೆ. ಖಾಸಗಿ ಮತ್ತು ಸಾರ್ವಜನಿಕ ಬ್ಯಾಂಕುಗಳ ನಡುವೆ ಆರೋಗ್ಯಕರ ಸ್ಪರ್ಧೆ ಏರ್ಪಟ್ಟು ದಕ್ಷತೆ ಹಾಗೂ ಸೇವೆಯ ಗುಣಮಟ್ಟ ವೃದ್ಧಿಸಬೇಕೆಂಬುದು ಗ್ರಾಹಕರ ಅಪೇಕ್ಷೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಅದಕ್ಷತೆಯ ವಿರುದ್ಧ ಬ್ಯಾಂಕ್ ಗ್ರಾಹಕರ ಸಂಘ ಹೋರಾಡುತ್ತಿದೆ.

ಪರಿಹಾರವಿಲ್ಲವೆ ?

ಇಲ್ಲಿರುವುದು ನಿರಾಶೆಯ ಧ್ವನಿ. ಈ ಸಮಸ್ಯೆಗಳಿಗೆ ಪರಿಹಾರ ವಿಲ್ಲವೆ ? ಆಂತರಿಕ ವ್ಯವಸ್ಥೆಗಳೇ ಕುಸಿಯುತ್ತಿರುವಾಗ 'ಪರಿಹಾರ'ಗಳನ್ನು ಸೂಚಿಸಬೇಕಾದ್ದು, ಜಾರಿಗೊಳಿಸಬೇಕಾದ್ದು ಯಾವ ಮಟ್ಟದಲ್ಲಿ ಎಂಬುದು ಮುಖ್ಯವಾಗುತ್ತದೆ. ಅಂಗೈ ಹುಣ್ಣಿನಂತಿರುವ ಬ್ಯಾಂಕುಗಳ ವ್ಯಾಧಿಗೆ ಈಗ ಕನ್ನಡಿ ಹಿಡಿದಂತೆಯೂ ಆಗಿದೆ.

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯನ್ನು ಉತ್ತಮಪಡಿಸಲು ತಜ್ಞರಿಂದ ಬಂದಿರುವ ಹಲವಾರು ಸಲಹೆ, ಸೂಚನೆಗಳು ತುರ್ತು ಪರಿಶೀಲನೆಗೆ ಅರ್ಹವಾಗಿವೆ :

ಆದ್ಯತಾವಲಯ ಕುರಿತು ಮರುವ್ಯಾಖ್ಯೆ ಮತ್ತು ಎಲ್ಲ ಸಾಲ ಯೋಜನೆಗಳ ಕಟ್ಟುನಿಟ್ಟಾದ ಮರುಪರಿಶೀಲನೆ.

ಬ್ಯಾಂಕ್ ಸಾಲಗಳ ವಸೂಲಾತಿಗಾಗಿ ಪ್ರತ್ಯೇಕ ಟ್ರಿಬ್ಯೂನಲ್‌ಗಳನ್ನು ಸ್ಥಾಪಿಸಬೇಕೆಂಬುದು ಬ್ಯಾಂಕರುಗಳ ಬಹುದಿನದ ಬೇಡಿಕೆ. ಇಂಥ ಟ್ರಿಬ್ಯೂನಲ್‌ಗಳ ಸ್ಥಾಪನೆ ಕುರಿತು ಈ ಬಾರಿಯ (1993-94) ಮುಂಗಡಪತ್ರದಲ್ಲಿ ಸೂಚನೆ ಇದೆ. ಅದು ಬೇಗ ಕಾರ್ಯಗತವಾಗಬೇಕು. ಬ್ಯಾಂಕ್ ಸಾಲಗಳ ವಸೂಲಾತಿಗೆ ಮತ್ತಷ್ಟು ಒತ್ತು ದೊರೆಯಬೇಕು. ಮರುಪಾವತಿ ಕುರಿತು ಸಾರ್ವಜನಿಕ ಜಾಗೃತಿ ಉಂಟುಮಾಡಬೇಕು.

ಬ್ಯಾಂಕುಗಳ ಬಂಡವಾಳ ವೃದ್ಧಿಗೆ ಸಮರ್ಪಕ ಯೋಜನೆಗಳ ರೂಪಣ.

ಅಸ್ವಸ್ಥ ಕೈಗಾರಿಕಾ ಘಟಕಗಳತ್ತ ತುರ್ತುಗಮನ ಮತ್ತು ಪುನರುಜ್ಜೀವನ ಸಾಧ್ಯವಾಗದೆಡೆಗಳಲ್ಲಿ ಮರುಪಾವತಿಗೆ ಕರೆ.

ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಸಮರ್ಪಕ ಪುನರ್ರಚನೆಗೆ ತೀವ್ರ ಯತ್ನ ನಡೆಯಬೇಕು.

ಶಾಖೆಗಳ ತೀವ್ರ ಗಣಕೀಕರಣಕ್ಕೆ ಆದ್ಯತೆ ನೀಡಬೇಕು. ಇಲ್ಲದಿದ್ದರೆ ಸಿಬ್ಬಂದಿ ಕೊರತೆಯ ಸಮಸ್ಯೆ ನೀಗುವುದಿಲ್ಲ.

ಬ್ಯಾಂಕುಗಳ ಖಾಸಗೀಕರಣ ಕುರಿತು ಸ್ಪಷ್ಟ ನಿಲುವು ತಳೆಯಬೇಕು,

ಇವೆಲ್ಲಕ್ಕೂ ಮಿಗಿಲಾಗಿ ಬ್ಯಾಂಕುಗಳಿಗೆ ಹೆಚ್ಚಿನ ವ್ಯವಹಾರ ಸ್ವಾತಂತ್ರ್ಯ, ಮತ್ತು ರಿಸರ್ವ್ ಬ್ಯಾಂಕಿಗೆ ಪೂರ್ಣ ಸ್ವಾಯತ್ತತೆ ದೊರೆಯುವಂತಾಗಿ, ಬ್ಯಾಂಕಿಂಗ್ ವ್ಯವಸ್ಥೆಯ ಜೀವಂತಿಕೆಯನ್ನು ಪಣವಾಗಿರಿಸಿ ನಡೆಸುವ ರಾಜಕೀಯ ದೊಂಬರಾಟ ನಿಲ್ಲಬೇಕು.

ಈ ಪರಿಹಾರಗಳು ಸಮಸ್ಯೆಯನ್ನು ನಿವಾರಿಸಲು ಶಕ್ತವಾದಾವು. ಆದರೆ ಭಾರತದಲ್ಲಿ ಬ್ಯಾಂಕಿಂಗ್ ನಡೆದಿರುವ ದಿಕ್ಕನ್ನು ಗಮನಿಸಿದರೆ ಈ ಪರಿಹಾರಗಳು ಎಷ್ಟರ ಮಟ್ಟಿಗೆ ಜಾರಿಗೆ ಬರಲು ಸಾಧ್ಯ ಎಂಬ ಪ್ರಶ್ನೆ ಉಳಿಯುತ್ತದೆ. ★

ವಾಣಿಜ್ಯೋದ್ಯಮಗಳಲ್ಲಿ ನೀತಿಶಾಸ್ತ್ರ

ಸಿ. ಗೋವಿಂದಾಚಾರ್

ವಾಣಿಜ್ಯಶಾಸ್ತ್ರ ಪ್ರವಾಚಕ, ಆಚಾರ್ಯ ಪಾಠಶಾಲಾ ಕಾಲೇಜು, ನರಸಿಂಹರಾಜ ಕಾಲೋನಿ, ಬೆಂಗಳೂರು ೧೯

'ವ್ಯಾಪಾರವೆಂಬುದು ದ್ರೋಹಚಿಂತನ' ಎಂಬ ಮಾತುಂಟು. ಆದರೆ ಸಾಮಾಜಿಕ ಜವಾಬ್ದಾರಿಯ ಅರಿವಾಗಲಿ ನೈತಿಕ ನಡವಳಿಕೆಯಾಗಲಿ ಇಲ್ಲದ ಉದ್ಯಮಗಳು ದೀರ್ಘಕಾಲದಲ್ಲಿ ಉಳಿಯಲಾರವು. ಯಶಸ್ವಿ ಸಂಸ್ಥೆಗಳ ಸ್ಥಾಪನೆಗೆ ಅವುಗಳ ಸಾಮಾಜಿಕ ಹೊಣೆಯ ನಿರ್ವಹಣೆಯೇ ಕಾರಣವಾಗಿವೆ. ಬ್ಯಾಂಕುಗಳೂ ಈ ಮಾತಿಗೆ ಹೊರತಲ್ಲ.

ಪ್ರಾಮಾಣಿಕತೆ, ಶ್ರದ್ಧೆ, ಜವಾಬ್ದಾರಿಯ ಪ್ರಜ್ಞೆ ಮುಂತಾದ ಮೌಲ್ಯಾಧಾರಿತವಾದ ನೀತಿತತ್ತ್ವಗಳು ಒಬ್ಬ ವ್ಯಾಪಾರಸ್ಥನನ್ನು ಎಲ್ಲರೊಂದಿಗೆ ಸ್ನೇಹಸೌಹಾರ್ದಗಳಿಂದ ಬಾಳಲು ನೆರವಾಗುವುವು. ಭಾರತರತ್ನ ಟಾಟಾರವರು ಇದನ್ನೇ 'ಧರ್ಮ' ಎಂದು ಕರೆದು, ಇಂಥವನು ತಾನೊಬ್ಬ ಪ್ರಜೆಯಾಗಿ ಸಮಾಜದಲ್ಲಿ ಒಬ್ಬನಾಗಿ ಅಥವಾ ಸಂಘ ಸಂಸ್ಥೆಗಳ ಒಬ್ಬ ಸದಸ್ಯನಾಗಿ ದಕ್ಷತೆಯಿಂದ ಸಂದರ್ಭಾನುಸಾರವಾಗಿ ಕಾರ್ಯ ನಿರ್ವಹಿಸುವುದೇ ಇವನ ವ್ಯಾಪಾರ ಧರ್ಮ ಎಂದು ಹೇಳಿದ್ದಾರೆ.

ಎಲ್ಲ ವೃತ್ತಿಗಳಂತೆ ವಾಣಿಜ್ಯೋದ್ಯಮಗಳಲ್ಲಿಯೂ ನೀತಿಶಾಸ್ತ್ರಗಳನ್ನು ಪ್ರತಿನಿಧಿಸುವ ಸಂಸ್ಕೃತಿಯೊಂದು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇರುವುದನ್ನು ಈ ಮುಂದಿನ ಉದಾಹರಣೆಗಳಿಂದ ನೋಡಬಹುದು.

1 ಒಳ್ಳೆಯ ಗುಣವುಳ್ಳ ವಸ್ತುಗಳನ್ನು ತಯಾರಿಸುವುದು; ಸಮಾಧಾನಕರವಾದ ಬೆಲೆಯನ್ನು ನಿಗದಿಪಡಿಸುವುದು; ಹಣ ವಿನಿಯೋಜಕರಿಗೆ ಒಳ್ಳೆಯ ಗಳಿಕೆ; ಕಾರ್ಮಿಕ ಕ್ಷೇಮಾಭಿವೃದ್ಧಿ; ರಸ್ತೆ, ಉದ್ಯಾನವನ, ಆಸ್ಪತ್ರೆ, ಸಮುದಾಯ ಭವನಗಳ ನಿರ್ಮಾಣ,

2 ಕೈಗಾರಿಕಾ ಉತ್ಪಾದನೆಯಿಂದ ಪರಿಸರಕ್ಕೆ ಧಕ್ಕೆ ಉಂಟಾಗಬಾರದೆಂಬ ಪರಿಸರಪ್ರಜ್ಞೆ,

3 ಸಂಪನ್ಮೂಲಗಳ ಪಾಲನೆ ಹಾಗೂ ರಕ್ಷಣೆ,

4 ತೆರಿಗೆ ಸಲ್ಲಿಸುವಲ್ಲಿ ಪ್ರಾಮಾಣಿಕತೆ,

5 ರಾಜಕೀಯ ರಂಗಕ್ಕೆ ಕೊಡುಗೆ.

ಅನೈತಿಕತೆಯ ನಿದರ್ಶನಗಳು

ಇನ್ನೂ ಹೀಗೆ ತಾನು ಮಾಡುವುದು ಸರಿಯೋ ತಪ್ಪೋ ಎಂಬ ಅರಿವನ್ನುಂಟುಮಾಡುವಲ್ಲಿ ಈ ನೀತಿತತ್ತ್ವಗಳು ವ್ಯಾಪಾರಸ್ಥನಿಗೆ ನೆರವಾಗುವುದಲ್ಲದೆ ವಾಣಿಜ್ಯೋದ್ಯಮಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ಹಾಗೂ ಮೌಲ್ಯಾಧಾರಿತವಾದ ವ್ಯಾಪಾರದ ಬಗ್ಗೆ ಇವು ಮಾರ್ಗದರ್ಶನ ನೀಡುತ್ತಿವೆ. ಕೇವಲ ಪುಸ್ತಕದಿಂದ ಅಥವಾ ಪದವಿಗಳಿಂದ ಇವು ಪ್ರಾಪ್ತವಾಗವು. "ನಮ್ಮ ಸಂಸ್ಥೆಗಳಲ್ಲಿ ವೃತ್ತಿಜೀವನಕ್ಕಾಗಿ ವಿಶ್ವವಿದ್ಯಾಲಯದ ಪದವಿ ಇರಲೇಬೇಕೆಂದಿಲ್ಲ" ಎಂದು ಟಾಟಾರವರು ಅಭಿಪ್ರಾಯಪಟ್ಟಿದ್ದಾರೆ. ಉನ್ನತಮಟ್ಟದ ನೈತಿಕತೆಯಿಂದ ಅಧಿಕ ಉತ್ಪಾದನೆ, ಲಾಭಪ್ರದತೆ ಹಾಗೂ ದಕ್ಷ ಕಾರ್ಯನಿರ್ವಹಣೆ ಸಾಧ್ಯ ಎಂದೂ ಹೇಳಿರುತ್ತಾರೆ. ಆದರೆ ಅತಿ ಲಾಭದ ಆಸೆಯಿಂದ ವ್ಯಾಪಾರಸ್ಥರು ದುರ್ಮಾರ್ಗಕ್ಕಿಳಿದು ಕಳ್ಳಸಾಗಣೆ, ಅಕ್ರಮ ದಾಸ್ತಾನು, ಕಪ್ಪು ಹಣ ಗಳಿಸುವ ಅವ್ಯವಹಾರ, ಕಲಬೆರಕೆ ಮುಂತಾದ ಮಹಾ ಪಾತಕ ಕೃತ್ಯಗಳಲ್ಲಿ ತೊಡಗುವರು. ಆಕಸ್ಮಿಕ ಅಥವಾ ಅನಿರೀಕ್ಷಿತ ವರಮಾನ ಪ್ರಾಪ್ತವಾದರೂ, ಮರವನ್ನು ಕೊರೆದು ತಿನ್ನುವ ಹುಳುವಿನಂತೆ ಇವು ಅರ್ಥವ್ಯವಸ್ಥೆಯನ್ನೇ ಬಡಬೋಲು ಮಾಡುವುವು. ಯಾವುದು ನೈತಿಕ, ಯಾವುದು ನೀತಿಬಾಹಿರ ನಡವಳಿಕೆ ಎಂಬುದನ್ನು ವಿಂಗಡಿಸುವುದು ಸುಲಭವಲ್ಲ. ಆದರೂ ವೃತ್ತಿಜೀವನದಲ್ಲಿ ಈ ಮುಂದಿನ ನಿದರ್ಶನಗಳು ಸಂಸ್ಥೆಯ ಮೇಲೆ ಘೋರ ಪರಿಣಾಮವನ್ನು ಬೀರುವುವು :

1 ಪಿತೂರಿಯಿಂದಲೋ, ಭಾರಿ ಪ್ರತಿಫಲಾಪೇಕ್ಷೆಯ ದೃಷ್ಟಿಯಿಂದಲೋ ಸಂಸ್ಥೆಯ ಗುಪ್ತ ವಿಚಾರಗಳನ್ನು ಹಾಗೂ ವ್ಯಾಪಾರದ ಗೋಪ್ಯತೆಯನ್ನು ಪ್ರತಿಸ್ಪರ್ಧಿಗಳಿಗೆ ಬಹಿರಂಗಪಡಿಸುವುದು. ಒಂದು ದಶಕದ ಹಿಂದೆ ಹೆಗ್ಡೆ ಮತ್ತು ಗೋಲೆ ಗಡಿಯಾರ ಸಂಸ್ಥೆಯ ಉನ್ನತ ಅಧಿಕಾರಿಗಳು ಈ ಕಾರಣದಿಂದ ವಜಾ ಆದರು. ಕ್ರಮೇಣ ಸಂಸ್ಥೆ ಮುಳುಗಿತು.

2 ಸಂಸ್ಥೆಯ ಆಸ್ತಿಗಳನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು—ಸರ್ಕಾರಿ ಕ್ಷೇತ್ರಗಳೆಂದರೆ ಪಂಚತಾರಾ ಸೌಲಭ್ಯಗಳು ಎಂದರ್ಥ. ವಿಮಾನ ಸಂಚಾರ, ಹವಾನಿಯಂತ್ರಿತವಾದ ವಸತಿ, ಕಾರು, ಕೈತುಂಬ ಭತ್ಯ ಇತ್ಯಾದಿ : ಸಂಸ್ಥೆ ಇರಲಿ ಇಲ್ಲದಿರಲಿ, ಲಾಭವಿರಲಿ ನಷ್ಟವಿರಲಿ.

3 ಸಾರ್ವಜನಿಕ ಸಮಾರಂಭಗಳಲ್ಲಿ ಕಿಕ್ಕಿರಿದ ಜನಸಂದಣಿ ಸೇರಿಸುವ ಉದ್ದೇಶದಿಂದ ಸರ್ಕಾರಿ ಸಾರಿಗೆ ಸಾಧನಗಳನ್ನು ಯಥೇಚ್ಛವಾಗಿ ಉಪಯೋಗಿಸುವ ಮಂತ್ರಿಪರ್ಯರ ರೀತಿನೀತಿ ಗಳನ್ನು ಕೇಳುವವರಾರು ?

4 ಕೆಲಸದ ಒಪ್ಪಂದಕ್ಕೆ ಸಹಿ ಹಾಕಿದ್ದನ್ನೂ ಗಮನಿಸದೆ ಸಲೀಸಾಗಿ ಕೆಲಸ ಬಿಟ್ಟು ಹಾರುವವರು ಮಿಡತೆಗಳಿದ್ದಂತೆ. ಒಬ್ಬ ಹಿರಿಯ ಅಧಿಕಾರಿಯನ್ನು ಹಾದುಹೋಗುವ ಬಡ್ತಿ ಅಥವ ನಿವೃತ್ತನಾಗುವ ಸಮಯದಲ್ಲಿ ಬರುವ ಬಡ್ತಿ ಅವಕಾಶ ಬೇಸರಪಡಿಸುವಂಥಾದ್ದು. ಹೀಗೆಯೇ ಕಾರ್ಯಾಚರಣೆಗೆ ತರಬೇಕಾದ ಒಪ್ಪಂದದಲ್ಲಿ ಚೌರ್ಯ ಮತ್ತು ಅಪ್ರಾಮಾಣಿಕತೆ.

5 ಬೆಲೆಗಳನ್ನು ಗಗನಕ್ಕೇರಿಸುವುದು, ಅಕ್ರಮ ದಾಸ್ತಾನು, ಕಲಬೆರಕೆ ಮುಂತಾದ ಹೀನಕರವಾದ ಕೃತ್ಯಗಳು ಗ್ರಾಹಕರನ್ನು ಬೆಪ್ಪುತಕ್ಕಡಿಗಳಂತೆ ಮಾಡುವುವು. ಇಂಥಾ ಮೋಸಗಳ ಬುನಾದಿಯ ಮೇಲೆಯೇ ಸರ್ಕಾರಿ (ಅ)ನ್ಯಾಯಬೆಲೆ ಅಂಗಡಿಗಳು ಇಂದು ಉಜ್ಜೀವಿಸುತ್ತಿರುವುದು.

6 "ಮೂರು ದಶಕಗಳ ಹಿಂದೆ ಮಕ್ಕಳನ್ನು ವಸತಿ ಅವಕಾಶ ವಿರುವ ಶಾಲೆಗೆ ಸೇರಿಸಲು ಸಾಧ್ಯವಾಗುತ್ತಿತ್ತು. ಇಂದು ಬರುವ ಸಂಬಳದಲ್ಲಿ ಹಾಗೂ ದಿನೇದಿನೇ ರೂಪಾಯಿಯ ಮೌಲ್ಯ ಇಳಿಯುತ್ತಿರುವ ಈ ಕಾಲದಲ್ಲಿ ಜೀವನ ಸಾಗಿಸುವುದು ಅಸಾಧ್ಯವಾದ್ದರಿಂದ ವಿವಿಧ ಆದಾಯ ಮೂಲಗಳನ್ನು ಹುಡುಕಿ ಸಂಪಾದಿಸುವುದರಲ್ಲಿ ತಪ್ಪೇನಿಲ್ಲ. ಸಣ್ಣ ಪುಟ್ಟ ಕಾನೂನು ಉಲ್ಲಂಘನೆ, ಅಂದರೆ ತೆರಿಗೆ ತಪ್ಪಿಸಿಕೊಳ್ಳುವುದು, ಕಾರ್ಯ ಸಾಧನೆಗಾಗಿ ಲಂಚ ಕೊಡುವುದು ಹಣಕ್ಕಾಗಿ ಮರುವೆ ಆಗುವುದು ಅನಿವಾರ್ಯ. ಇಲ್ಲಿ ಹಣದಾಹ ಮತ್ತು ಸ್ವಲ್ಪ ಅಪ್ರಾಮಾಣಿಕತೆ ಇರುವುದು ಆನುಷಂಗಿಕ." ಇದು ಬಿಸಿನೆಸ್ ಇಂಡಿಯಾ ಪತ್ರಿಕೋದ್ಯಮ ಕೈಗೊಂಡ ಸಮೀಕ್ಷೆಯಲ್ಲಿ ಬಂದ ಅನಿಸಿಕೆಗಳು. ಡೊನೇಶನ್‌ದಾಹದ ವಿದ್ಯಾಸಂಸ್ಥೆಗಳು, ಶಿಕ್ಷಕರ ಮನೆಪಾಠದ ಅವಾಂತರಗಳನ್ನು ಈ ಅನಿಸಿಕೆಯಲ್ಲಿಯೇ ಸೇರಿಸಬಹುದು.

7 ರಾಷ್ಟ್ರೀಕೃತ ಬ್ಯಾಂಕುಗಳ ನೀತಿಶಾಸ್ತ್ರಕ್ಕೆ ಧೂಳು ಹಿಡಿದಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಸಿಸಿಐ, ರಾಷ್ಟ್ರಮಟ್ಟದಲ್ಲಿ ಇತ್ತೀಚಿನ ಷೇರುಪೇಟೆ–ಬ್ಯಾಂಕುಗಳ ಅವ್ಯವಹಾರದ ಕರ್ಮಕಾಂಡ ಎಲ್ಲ ರೀತಿಯಲ್ಲಿ ನೈತಿಕ ಶಿಷ್ಟಾಚಾರಗಳನ್ನು ಮೀರಿರುವ ನಿದರ್ಶನ ಗಳಾಗಿವೆ. ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕು ಖಾಸಗಿ ಬ್ಯಾಂಕುಗಳ ಮೇಲೆ ಯಾವ ರೀತಿ ಮುಲಾಜಿಯ ಧೋರಣೆ ತೋರುತ್ತಿವೆ ಎಂಬುದು ದೂರದೃಷ್ಟಕರ ಸಂಗತಿ. ಬ್ಯಾಂಕುಗಳ ದೈನಂದಿನ ಕಾರ್ಯಾಚರಣೆಯಲ್ಲಿ ರಾಜಕಾರಣಿಗಳ ಪ್ರವೇಶದಿಂದ ಅಷ್ಟೋ ಇಷ್ಟೋ ಇರುವ ನೈತಿಕ ಮೌಲ್ಯ ಛಿದ್ರ ವಾಗಿದೆ, ಸಾಲಮೇಳ ನೀತಿಯು ಬ್ಯಾಂಕುಗಳನ್ನು ಓಟು ಗಿಟ್ಟಿಸುವ ಸಾಧನವನ್ನಾಗಿ ಮಾಡಿದೆ.

8 ಭಾರತದಲ್ಲಿ ನಿಷೇಧಿಸಲಾದ ಮಾದಕಾಂಶ ಕೂಡಿದ ಔಷಧಿಯನ್ನು ಕಳುಹಿಸಲು ಔಷಧಿ ಸಂಸ್ಥೆಯೊಂದಕ್ಕೆ ವಿದೇಶಿ ಆದೇಶ ಬಂದಿತ್ತು. "ಭಾರತದಲ್ಲಿ ಇದು ನಿಷಿದ್ಧವೇ ಹೊರತು ವಿದೇಶದಲ್ಲಲ್ಲವಲ್ಲ. ಇಂಥಾ ಸದವಕಾಶವನ್ನು ಕಳೆದುಕೊಳ್ಳುವ ಮೂರ್ಖನಲ್ಲ ನಾನು" ಎಂದು ಸಂಸ್ಥೆಯ ಯಜಮಾನ ಸಮರ್ಥಿಸಿದ.

9 ಸಿಬ್ಬಂದಿ ನೇಮಕಾತಿ ಅಧಿಕಾರಿಯೊಬ್ಬ ಪೇಟೆಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಅಳವಡಿಸಿರುವ ಸಾಧನ—ಭಾರಿ ಪ್ರಚಾರ ಕೊಟ್ಟು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸುವುದು. ಅವರುಗಳಿಂದ ಮಾಹಿತಿ ಪಡೆಯುತ್ತಾನೆ. ಆದರೆ ಯಾರನ್ನೂ ನೇಮಕ ಮಾಡಿಕೊಳ್ಳುವುದಿಲ್ಲ. ವರ್ಷಕ್ಕೆ ಎರಡು ಬಾರಿ ಈ ರೀತಿ ನಡೆಯುವುದು.

10 ಟಾನಿಕ್ ಸೀಸೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿ ಟಾನಿಕ್‌ನಲ್ಲಿ ಏನೇನು ಅಂಶಗಳಿವೆ ಎಂಬ ವಿವರಣೆ ಇರುತ್ತದೆ. ಅನಿವಾರ್ಯ ಸಂದರ್ಭದಲ್ಲಿ ಈ ಅಂಶಗಳಲ್ಲಿ ಶೇ. 10ರಷ್ಟು ಹೆಚ್ಚು ಕಡಿಮೆ ಇರಬಹುದು ಎಂಬ ಸರ್ಕಾರದ ಸೌಲಭ್ಯವನ್ನು ದುರುಪಯೋಗಿಸಿಕೊಂಡು ಉತ್ಪಾದಿತ ವಸ್ತುವಿನಲ್ಲಿ ಅಗತ್ಯವಿರುವ ಅಂಶ ಗಳಿಗಿಂತ ಶೇ. 10ರಷ್ಟು ಶಾಶ್ವತವಾಗಿ ಕಡಿಮೆ ಮಾಡಿ ಜೀವಿಸುತ್ತಿರುವ ಉದ್ದಿಮೆದಾರರು ಇದ್ದಾರೆ. ಗ್ಲೂಕೋಸ್ ಬಿಸ್ಕತ್‌ನಲ್ಲಿ ಎಷ್ಟು ಗ್ಲೂಕೋಸ್ ಇದೆ ಎಂಬುದೂ ಈ ವರ್ಗಕ್ಕೆ ಸೇರಿದೆ.

11 ಅರುಣ್ ಒಬ್ಬ ಮೇಲಧಿಕಾರಿ. ಪ್ರತಿ ತಿಂಗಳು ಸಂಸ್ಥೆಯ ಯಜಮಾನ ಕಾರ್ಖಾನೆಗೆ ಭೇಟಿ ಕೊಡುತ್ತಿದ್ದ. ಒಮ್ಮೆ ಇಂಥಾ ಒಂದು ಭೇಟಿಯಲ್ಲಿ 5000 ರೂ. ದಂಡವನ್ನು ಕೊಡಲು ಸರ್ಕಾರದ ಸೂಚನಾ ಪತ್ರ ಒಂದು ಬಂದಿತ್ತು. ಹೀಗೇಕಾಯಿತು ಎಂದು ಯಜಮಾನನು ಕೆದಕಿ ನೋಡಿದಾಗ ಸರ್ಕಾರಿ ವೀಕ್ಷಣಾಧಿಕಾರಿಯೊಬ್ಬ 800 ರೂ. ಲಂಚ ಕೇಳಿದ್ದನ್ನು ಅರುಣ್ ನಿರಾಕರಿಸಿದ್ದ. ಕುಪಿತನಾದ ವೀಕ್ಷಣಾಧಿಕಾರಿ "ಎರಡು ಕಿಟಕಿಗಳು ಇರಬೇಕಾದ ಸ್ಥಳದಲ್ಲಿರದೆ ಬೇರೆ ಕಡೆ ಇವೆ" ಎಂಬ ಕಾರಣ ಕೊಟ್ಟು ದಂಡ ವಿಧಿಸಿದ್ದ. ಯಜಮಾನ ದಂಡ ತೆತ್ತು ಅರುಣನನ್ನು ವಜಾ ಮಾಡಿದ. ಇದೇ ರೀತಿಯಲ್ಲಿ ನಿವೇಶನಗಳ ವಿತರಣೆ, ಗೃಹನಿರ್ಮಾಣ, ವ್ಯಾಪಾರ ಸಂಕೀರ್ಣಗಳ ನಿರ್ಮಾಣಗಳಲ್ಲಿ ರಾಜಕಾರಣಿಗಳಿಂದ ಹಿಡಿದು ಕಾರ್ಪೊರೇಶನ್ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಸಿಬ್ಬಂದಿಗಳವರೆಗೆ ಅದೆಷ್ಟೋ ಅವ್ಯವಹಾರಗಳು ಸಲೀಸಾಗಿ ನಡೆಯುತ್ತಿವೆ.

12 ವಿಮಾನವು ಪ್ರಯಾಣಿಕರನ್ನು ಸುರಕ್ಷಿತವಾಗಿಯೂ ವೇಗವಾಗಿಯೂ ಸಾಗಿಸಿದ್ದಲ್ಲಿ ಅದು ಶೇ. 100ರಷ್ಟು ನೀತಿತತ್ತ್ವಸಹಿತ ವಾದ್ದು. ಅದೇ ವಿಮಾನ ಬಾಂಬ್‌ಗಳನ್ನೋ ಮಾದಕ ವಸ್ತುಗಳನ್ನೋ ಭಯೋತ್ಪಾದಕರನ್ನೋ ಸಾಗಿಸಿದರೆ 'ನೀತಿಗೆಟ್ಟ ವಿಮಾನ ಸಂಸ್ಥೆ' ಎಂದು ಎಲ್ಲರೂ ಛೀಮಾರಿ ಹಾಕುವರು.

13 ಕಲಬೆರಕೆ ನಮ್ಮ ದೇಶದಲ್ಲಿ ಒಂದು ಶ್ರೇಷ್ಠವಾದ ಕಲೆ. ನಾವು ಬಳಸುವ ಆಹಾರ ಶೇ. 25ರಷ್ಟು ಕಲುಷಿತವಾದ್ದು. ಕಲಬೆರಕೆ ವಸ್ತುಗಳು ನಾಯಿಕೊಡೆಯಂತೆ ದಿನೇದಿನೇ ಹೆಚ್ಚುತ್ತಿವೆ. ಭಾರತೀಯ ಆಹಾರ ಕಲಬೆರಕೆ ತಡೆಗಟ್ಟುವಿಕೆ ಕಾಯ್ದೆ ಮೊಂಡು ಕತ್ತಿಯಂತೆ ಪರಿಣಾಮಕಾರಿಯಾಗಿಲ್ಲ.

ನೀತಿ ಸಂಹಿತೆ—ಶಿಷ್ಟಾಚಾರ

ಕಾರ್ಮಿಕ ಸಂಘಟಕತೆ, ಬಳಕೆದಾರತನ ಹಾಗೂ ಶಾಸನಬದ್ಧ

೩

ಕಾನೂನಿನ ಒತ್ತಡದಿಂದ ಅನೇಕ ವ್ಯಾಪಾರ ಸಂಸ್ಥೆಗಳು ತಮ್ಮವೇ ಆದ ನೀತಿಸಂಹಿತೆಗಳನ್ನು ಸೃಷ್ಟಿಸಿಕೊಂಡಿವೆ. ಕೆಲಸ ಮಾಡಲು ವಾತಾನುಕೂಲ, ಶಾಸನಬದ್ಧವಾದ ಎಚ್ಚರಿಕೆ (ಸಿಗರೇಟ್‌ನಲ್ಲಿ ನೀಡಿರುವಂತೆ) ಹಾಗೂ ಎಲ್ಲಿ ಕೆಳಮಟ್ಟದ ನೀತಿ ನಡವಳಿಕೆಗಳಿರುತ್ತವೆಯೋ ಅಲ್ಲಿ ಕಾನೂನು ಮಧ್ಯ ಪ್ರವೇಶಿಸಿ ಇವುಗಳನ್ನು ಬಲಪಡಿಸಿವೆ. ಇದರಿಂದಾಗಿ ವ್ಯಾಪಾರ ಸಂಸ್ಥೆಗಳ ರೀತಿನೀತಿಗಳು ಸಾರ್ವಜನಾದರಣೀಯವಾಗಿವೆ. ಸಾರ್ವಜನಿಕ ಹಿತಾಸಕ್ತಿಯೂ ಇದರಲ್ಲಿ ಹಿರಿದಾದ ಪಾತ್ರ ವಹಿಸಿದೆ. ಇದರ ವಿರುದ್ಧವಾದ ಚಟುವಟಿಕೆಗಳು ಆಚರಣೆಯಲ್ಲಿದ್ದರೆ ಸಮಾಜ ಅದನ್ನು ಧಿಕ್ಕರಿಸಬಹುದು. ಉದಾ : ರಾಜಕೀಯ ರಂಗಕ್ಕೆ ವ್ಯಾಪಾರ ಸಮುದಾಯದ ಕೊಡುಗೆ ಸಾರ್ವಜನಿಕರ ಬೆಂಬಲವನ್ನು ಅವಲಂಬಿಸಿದೆ. ಕೈಗಾ ಸ್ಥಾವರ ಹಾಗೂ ಸೈಲೆಂಟ್ ಕಣಿವೆ ಯೋಜನೆಗಳು ಸಾರ್ವಜನಿಕ ಹಿತದೃಷ್ಟಿಯಿಂದಲೇ ದೂರೀಕರಿಸಲ್ಪಟ್ಟುವು. ಚಾಕಲೇಟುಗಳಲ್ಲಿ, ತಂಪು ಪಾನೀಯಗಳಲ್ಲಿ (ಬಿವಿಓಅಂಶ), ಹೊಗೆಸೊಪ್ಪು ಅಗಿಯುವುದರಲ್ಲಿ, ಟೂತ್‌ಪೇಸ್ಟ್ ಫ್ಲೋರೈಡ್ ಅಂಶ ಮುಂತಾದ ಆರೋಗ್ಯವಿರೋಧಕ ವಸ್ತುಗಳ ಬಗ್ಗೆ ಸಮಾಜ ಎಚ್ಚರವಾಗಿಯೇ ಇದೆ. ಇತ್ತೀಚಿನ ವರದಿಗಳ ಪ್ರಕಾರ ಸಾರ್ವಜನಿಕ ಹಿತದೃಷ್ಟಿಗೆ ವಿರೋಧವಾಗಿರುವುವೆಂಬ ಕಾರಣದಿಂದ ಭಾರತದಲ್ಲಿ ಮಕ್ಕಳಿಂದ ಉತ್ಪಾದಿಸಲ್ಪಟ್ಟ ವಸ್ತುಗಳನ್ನು ಅಮೆರಿಕ ಆಮದು ಮಾಡಿಕೊಳ್ಳಲು ನಿರಾಕರಿಸಿದೆ.

ನಿರ್ವಹಣಶಾಸ್ತ್ರದಲ್ಲಿ ವೃತ್ತಿಪರ ನಿರ್ವಾಹಕರಿಗಾಗಿ ನಿಯಮಾವಳಿ ಹಾಗೂ ಶಿಷ್ಟಾಚಾರಗಳಿವೆ. ಅಮೆರಿಕಾದಲ್ಲಿ ಸಿಬ್ಬಂದಿ ಆಡಳಿತ ಸಂಸ್ಥೆಗಳು ರೂಪಿಸಿಕೊಂಡಿರುವ ನಿಯಮಸೂತ್ರಗಳು ಸಮಾಜದ ಮನ್ನಣೆ ಪಡೆದಿದೆ. ಪ್ರಚಾರ ಹಾಗೂ ವಿಕ್ರಯ ಉನ್ನತಿಗಾಗಿ ನೀತಿಸಂಹಿತೆಯೂ ಇದೆ. ಭಾರತವೂ ಸೇರಿ ಹಲವಾರು ದೇಶಗಳಲ್ಲಿ ಸಾರ್ವಜನಿಕ ಸ್ಥಳ ಹಾಗೂ ಕಛೇರಿಗಳಲ್ಲಿ ಸಿಗರೇಟ್ ಸೇವನೆ ಹಾಗೂ ಜಾಹೀರಾತುಗಳನ್ನು ನಿಷೇಧಿಸಲಾಗಿದೆ. ಬ್ರಿಟಿಷ್ ನಿರ್ವಹಣಾ ಸಂಸ್ಥೆ ಅಳವಡಿಸಿರುವ ನಡವಳಿಕೆ ಸಂಹಿತೆಯಲ್ಲಿ ಎಚ್ಚರಿಕೆಯಿಂದ ಅಮಾನತ್ತು ಹಾಗೂ ವಜಾ ಮಾಡುವವರೆಗೂ ನಡವಳಿಕೆ ಸೂತ್ರಗಳಿವೆ. ಇದಕ್ಕಾಗಿಯೇ ಶಿಸ್ತು, ಮೇಲ್ಮನವಿ ಹಾಗೂ ಶೋಧನೆ ಸಮಿತಿಗಳಿದೆ. ಇದೇ ರೀತಿಯಲ್ಲಿ ಭಾರತೀಯ ಜನಸಂಪರ್ಕ ಸಂಸ್ಥೆಗಳು, ಭಾರತೀಯ ಸಿಬ್ಬಂದಿ ನಿರ್ವಹಣಾ ಸಂಸ್ಥೆಗಳು ಸಿಬ್ಬಂದಿ ನಿರ್ವಾಹಕರಿಗೋಸ್ಕರ ನೀತಿಸಂಹಿತೆಗಳನ್ನು ಸೃಷ್ಟಿಸಿವೆ.

ಆರೋಗ್ಯ ಹಾಗೂ ಪರಿಸರಕ್ಕೆ ಪಾಶ್ಚಾತ್ಯ ಸಮಾಜ ಹೆಚ್ಚು ಆದ್ಯತೆ ಕೊಡುವುದು. ಕೊಲಂಬಿಯಾದ ಮಾದಕ ಮಹಾನ್‌ಗಳ ವಿರುದ್ಧ ಅಮೆರಿಕಾ ಸರ್ಕಾರ ಯುದ್ಧವನ್ನೇ ಘೋಷಿಸಿದೆ. ಕಳೆದ ಹಲವಾರು ವರ್ಷಗಳಿಂದ ಸುಮಾರು 500 ಸಂಸ್ಥೆಗಳನ್ನು ಪರಿಸರ ಮಲಿನಗೊಳಿಸಿದ್ದಕ್ಕಾಗಿ ಶಿಕ್ಷಿಸಲಾಗಿದೆ. 1990 ರಲ್ಲಿ ಹೆಸರಾಂತ ಎಕ್ಸನ್ ಸಂಸ್ಥೆ ಅಲಾಸ್ಕ ಕೆರೆ ಸರೋವರಗಳನ್ನು ತೈಲದಿಂದ ಮಲಿನಗೊಳಿಸಿದ್ದಕ್ಕಾಗಿ 1 ಬಿಲಿಯನ್ ಡಾಲರ್‌ಗಳ ದಂಡವನ್ನೂ, ಬೆಸ್ತರ ವರಮಾನಕ್ಕೆ ಚ್ಯುತಿ ಉಂಟಾದ್ದರಿಂದ ಇನ್ನೂ 90 ದಶಲಕ್ಷ ಡಾಲರುಗಳ ದಂಡವನ್ನೂ ಕೊಟ್ಟಿತು. ಇತ್ತೀಚಿನ ಗಲ್ಫ್ ಸಮರದಲ್ಲಿ ಎಣ್ಣೆಬಾವಿಗಳು ಹಾಗೂ ಶುದ್ಧೀಕರಣ ಕೇಂದ್ರಗಳು ಸಿಡಿದು ಸಮುದ್ರ ಭಾಗಶಃ ಮಲಿನಗೊಂಡು ಜಲಚರ ಹಾಗೂ ಪಕ್ಷಿಗಳ ಜೀವನಕ್ಕೆ ಧಕ್ಕೆ ಉಂಟಾಯಿತು. ಅಮೆರಿಕ ನಿರ್ಮಲ ವಾಯುಮಲಿನ ಕಾಯ್ದೆ ದೇಶದ ವಾಯುಮಾಲಿನ್ಯವನ್ನು ನಿಯಂತ್ರಿಸಿದೆ. ಆಮ್ಲೀಕವಾದ ಮಳೆ ಉಂಟುಮಾಡುವ ಗಂಧಕ ಡೈ ಆಕ್ಸೈಡ್ ರಸಾಯನಿಕ ಸಂಸ್ಥೆಗಳ ಮೇಲೆ ಹದ್ದಿನ ನಿಗಾ ಇಡಲಾಗಿದೆ.

ಸರ್ವಸ್ವೀಕೃತವಾದ ನೀತಿ ನಡವಳಿಕೆ ಸಂಹಿತೆಯನ್ನು ವಿಶ್ವದಾದ್ಯಂತ ಒಪ್ಪಂದದ ರೀತಿಯಲ್ಲಿ ನೋಡಬಹುದು. ವಿಶ್ವ ವನ್ಯಜೀವಿಗಳ ನಿಧಿ ಹಾಗೂ ವಿಶ್ವ ಸಂರಕ್ಷಣಾ ಸಂಘ ಅಪರೂಪದ ಜೀವಿಗಳ ರಕ್ಷಣೆಯಲ್ಲಿ ಮಹತ್ತರವಾದ ಪಾತ್ರವಹಿಸಿವೆ. ತಿಮಿಂಗಿಲ ಹಿಡಿಯುವುದು, ಆಫ್ರಿಕಾ ದಂತಗಳ ಆಮದೀಕರಣ ಈ ಸಂಸ್ಥೆಗಳ ವತಿಯಿಂದ ನಿಷೇಧಿಸಲಾಗಿದೆ. ಭಾರತದಲ್ಲಿ ಆಟ ಮೋಜು ಸರ್ಕಸ್ಸುಗಳಲ್ಲಿ ಪ್ರಾಣಿಗಳನ್ನು ಉಪಯೋಗಿಸುವುದು ಹಾಗೂ ಅವುಗಳ ಮೇಲೆ ಕ್ರೂರತೆ ತಪ್ಪಿಸುವ ಬಗ್ಗೆ ಇದೀಗ ಕಟ್ಟುಪಾಡುಗಳಿವೆ.

ಜಾನ್ಸನ್ ಮತ್ತು ಜಾನ್ಸನ್ ಸಂಸ್ಥೆಯ ನೈತಿಕ ಧ್ಯೇಯೋದ್ದೇಶಗಳು ಸ್ವಾರಸ್ಯವಾಗಿದೆ. ''ರೋಗಿಗಳು, ತಾಯಂದಿರು, ವೈದ್ಯರು ಶುಶ್ರೂಷೆ ವರ್ಗದವರು ಆಸ್ಪತ್ರೆಗಳು ಹಾಗೂ ನಮ್ಮ ಸಂಸ್ಥೆಯ ವಸ್ತುಗಳನ್ನುಪಯೋಗಿಸುವ ಗ್ರಾಹಕರಿಗೆ ಮಾತ್ರ ನಾವು ಜವಾಬ್ದಾರರಾಗಿರುತ್ತೇವೆಯೇ ಹೊರತು, ಷೇರುದಾರರಿಗಾಗಲಿ ಸಂಸ್ಥೆಯ ಸಿಬ್ಬಂದಿ ವರ್ಗದವರಿಗಾಗಲಿ ನಾವು ಜವಾಬ್ದಾರರಲ್ಲ'' ಎಂದು ಸಂಸ್ಥೆಯ ಅಧ್ಯಕ್ಷ ಸ್ಪಷ್ಟಪಡಿಸಿರುತ್ತಾರೆ.

ಟಾಟ, ಬಿರ್ಲಾ ಹಾಗೂ ಬಜಾಜ್ ಸಂಸ್ಥೆಗಳು ನೈತಿಕತೆ ಹಾಗೂ ಸಮಾಜೋದ್ಧರಣಗಳ ಸಂಕೇತವೇ ಆಗಿವೆ. ಬಜಾಜ್ ಗುಂಪಿನಲ್ಲಿ ಒಟ್ಟು 21 ಸಂಸ್ಥೆಗಳಿವೆ. ಇದೊಂದು ವೃತ್ತಿಪರ ಕುಟುಂಬ. ''ನಮ್ಮ ರೀತಿ ನೀತಿ ನಡವಳಿಕೆಗಳು ನಮಗೆ ರಕ್ತಗತವಾಗಿ ಪರಂಪರೆಯಾಗಿ ಬಂದಿದೆ'' ಎಂದು ರಾಮಕೃಷ್ಣ ಬಜಾಜ್ ಹೇಳಿರುತ್ತಾರೆ. ನವದೆಹಲಿಯಲ್ಲಿ ಬಿರ್ಲಾ ಮಂದಿರ (ಲಕ್ಷ್ಮೀನಾರಾಯಣ ದೇವಸ್ಥಾನ), ವಿದ್ಯಾಸಂಸ್ಥೆಗಳು, ಆಸ್ಪತ್ರೆ, ಸಮುದಾಯ ಭವನ ನಿರ್ಮಾಣ, ಬಿರ್ಲಾ ಚಕ್ರಾಧಿಪತ್ಯದ ತಕ್ಕಡಿಗಳು. ಆದಿತ್ಯ ಬಿರ್ಲಾ ಸಂಸ್ಥೆ ಬಹುರಾಷ್ಟ್ರೀಯ ಸಂಸ್ಥೆಯಾಗಿ ಮೆರೆಯುತ್ತಿದೆ.

"ರಾಮಯ್ಯ ಆಸ್ಪತ್ರೆಗೆ ದಾರಿ" ಎಂಬ ಫಲಕಗಳನ್ನು ಕರ್ನಾಟಕದ ಅನೇಕ ಊರು, ಹಳ್ಳಿಗಳಲ್ಲಿ ನೋಡಬಹುದು. ರಾಮಯ್ಯ ಸಂಸ್ಥೆಗಳ ವಿವಿದೋದ್ದೇಶಗಳ ಪೈಕಿ ಈ ಸಮಾಜಸೇವೆಯೂ ಒಂದು. ರಾಮಯ್ಯನವರು ಒಬ್ಬ ಗಾರೆ ಕೆಲಸದವರಾಗಿ ತಮ್ಮ ಜೀವನವನ್ನು ಆರಂಭಿಸಿದರು. ಪುಣ್ಯಕ್ಷೇತ್ರಗಳಲ್ಲಿ ಬಾಂಗೂರು ಧರ್ಮಶಾಲೆಗಳು ಸ್ಥಾಪಿತವಾಗಿರುವುದು ಬಾಂಗೂರ್‌ಸಂಸ್ಥೆಯ ಸಾಮಾಜಿಕ ಕೊಡುಗೆ ಆಗಿದೆ.

ಇನ್ನು ಟಾಟಾರವರ ಬಗ್ಗೆ ಅದೆಷ್ಟು ಹೇಳಿದರೂ ಸಾಲದು. ಮೌಲ್ಯಾಧಾರಿತವಾದ ವೃತ್ತಿ ಪದ್ಧತಿ ಹಾಗೂ ವಾಣಿಜ್ಯೋದ್ಯಮಗಳಲ್ಲಿ ನೈತಿಕ ನಿಯಮಗಳನ್ನು, ಕಟ್ಟುಪಾಡುಗಳನ್ನು ರೂಪಿಸಿ

ಆದರಂತೆಯೇ ನಡೆಯಲು ಟಾಟಾ ಮನೆತನ ಶ್ರಮಿಸಿದೆ. 'ಸುಂದರ ರೂಪಕ್ಕಿಂತ ಸುಂದರವಾದ ನಡವಳಿಕೆ ಮೇಲು' ಎಂದು ಟಾಟಾರವರು ಕಾರ್ಮಿಕರನ್ನುದ್ದೇಶಿಸಿ ಮಾಡಿದ ಉಪನ್ಯಾಸದಲ್ಲಿ ಹೇಳಿದ್ದರು. ಉತ್ತಮಗುಣಮಟ್ಟದ ಮುಂದಾಳುತನದಿಂದಲೇ 60 ವರ್ಷಗಳ ದೀರ್ಘ ಸೇವೆ ಸಲ್ಲಿಸಲು ಅವರಿಗೆ ಸಾಧ್ಯವಾಯಿತು. 20 ವರ್ಷ ವಯಸ್ಸಿನಲ್ಲಿ ಸಂಸ್ಥೆಗೆ ಸೇರಿದಾಗ ವ್ಯಾಪಾರದ ಮೊತ್ತ 280 ಕೋಟಿ ರೂಪಾಯಿಗಳಷ್ಟಿತ್ತು. 80ನೇ ವಯಸ್ಸಿನಲ್ಲಿ ನಿವೃತ್ತರಾದಾಗ ಟಾಟಾ ಸಂಸ್ಥೆಯ ವ್ಯಾಪಾರದ ಮೊತ್ತ 10,000 ಕೋಟಿ ರೂಪಾಯಿಗಳ ಗಡಿಯನ್ನು ಮೀರಿತ್ತು. ಸಮಾಜೋದ್ಧರಣದ ಬಗ್ಗೆ ಇವರ ಪಿತೃ ಜೆ. ಎನ್. ಟಾಟಾರವರು, "ನಮ್ಮ ಸಂಪತ್ತೆಲ್ಲಾ ಮಹಾಜನಗಳದ್ದು. ಆದ್ದರಿಂದ ಅಂತಿಮವಾಗಿ ಅದು ಅವರಿಗೆ ಸೇರಬೇಕು" ಎಂದು ಪುತ್ರನಿಗಾಗಿ ಮಾಡಿದ್ದ ಉಯಿಲಿನಲ್ಲಿ ಒಕ್ಕಣಿಸಿದ್ದರು. ಟಾಟಾ ಸಂಸ್ಥೆಗಳ ನೈತಿಕ ಹಾಗೂ ಸಾಮಾಜಿಕವಾದ ಮಹದೋದ್ದೇಶಗಳು ಸಂಪೂರ್ಣವಾಗಿ ಯಶಸ್ವಿಯಾಗಿರುವುದನ್ನು ಈ ಮುಂದಿನ ನೈಜ ಉದಾಹರಣೆಗಳಿಂದ ಗ್ರಹಿಸಬಹುದು :

1 ಗ್ರಾಮಾಭಿವೃದ್ಧಿ, ಗ್ರಾಮವಿನಾಶ ಪರಿಹಾರ ಕ್ರಮ (Rural Disaster Relief Programe), ಸಾಮಾಜಿಕ ಹಾಗೂ ಶಿಕ್ಷಣ ಸುಧಾರಣೆಗಳು, ಟಾಟಾ ಫೌಂಡೇಶನ್ ನಿಧಿ, ಸಂಶೋಧನ ಸಂಘ ಸಂಸ್ಥೆಗಳು ಇತ್ಯಾದಿ.

2 ಪ್ರಾಥಮಿಕ ಜವಾಬ್ದಾರಿ—ಟಾಟ ಎಂದರೆ ಉಕ್ಕು ಎಂದರ್ಥ. ಪರಿಸರದ ಮೇಲೆ ನಕಾರಾತ್ಮಕವಾದ ಪರಿಣಾಮ ಬೀರುವ ಹಾಗೂ ದಕ್ಷತೆಯಿಂದ ಕೂಡಿದ ಉಕ್ಕು ತಯಾರಿಕೆ. ಷೇರುದಾರರಿಗೆ ಗರಿಷ್ಠ ಗಳಿಕೆ, ಸಂಸ್ಥೆಗೆ ಸಂಬಂಧಪಟ್ಟ ವ್ಯಕ್ತಿಗಳ ಹಿತಾಸಕ್ತಿಯನ್ನು ಕಾಪಾಡುವುದು, ಗ್ರಾಹಕರು ಸಮಾಜ, ಸರ್ಕಾರ ಹಾಗೂ ರಾಷ್ಟ್ರವನ್ನು ಪೂಜನೀಯವಾಗಿ ಭಾವಿಸುವುದು.

3 ಕಾರ್ಮಿಕ ಕ್ಷೇಮಾಭಿವೃದ್ಧಿ—ಆರೋಗ್ಯ ಹಾಗೂ ಕುಟುಂಬ ಕ್ಷೇಮ, ಭವಿಷ್ಯನಿಧಿ. ವಸತಿಸೌಲಭ್ಯ, ಆದಿವಾಸಿ (ಕಲ್ಲಿದ್ದಲನ್ನು ಪುಡಿ ಮಾಡುವವರು)ಜನರ ಕ್ಷೇಮಪಾಲನೆ, ಕ್ರೀಡಾಭಿವೃದ್ಧಿ. ಹೆಸರಾಂತ ಹಾಗೂ ಪ್ರಮುಖ ಆಟದ ತಂಡಗಳು ಕೆಲಸದ ವೇಳೆಯಲ್ಲಿ ಕೊನೆಯ 2 ಘಂಟೆಗಳು ಬಿಡುವುಮಾಡಿಕೊಂಡು ಆಟವಾಡಲು ಅವಕಾಶವಿದೆ.

4 ಪರಿಸರಪ್ರಜ್ಞೆ—ನಮ್ಮ ದೇಶದಲ್ಲಿರುವ ಸುಂದರವಾದ ನಗರಗಳ ಪೈಕಿ ಮೈಸೂರು ಪ್ರಥಮ ಸ್ಥಾನ ಗಳಿಸಿದೆ. 2ನೇ ಸ್ಥಾನ ಜೆಮ್‌ಷೆಡ್‌ಪುರ ಗಳಿಸಿದೆ. ಎಲ್ಲೆಲ್ಲೂ ಉದ್ಯಾನವನ, ರಸ್ತೆಗಳು, ಆರೋಗ್ಯಕರವಾದ ನೀರು, ವಿದ್ಯುತ್ ಸರಬರಾಜು ಮುಂತಾದ ಆಕರ್ಷಣೆಗಳು ಅಲ್ಲಿಯ ಜನರಿಗೆ ಸ್ವರ್ಗಭೋಗವನ್ನೇ ಕಲ್ಪಿಸಿದೆ. ನಾವು ಉಕ್ಕನ್ನೂ ತಯಾರಿಸುತ್ತೇವೆ ಎಂಬ ಪ್ರಚಾರವು ಈ ಮೇಲೆ ಹೇಳಿದ ಅಂಶಗಳನ್ನು ಧ್ವನಿಪೂರ್ಣವಾಗಿ ವ್ಯಕ್ತಪಡಿಸಿದೆ. ಅಂದರೆ ಇಷ್ಟೆಲ್ಲ ಸಮಾಜಸೇವೆ ಮಾಡಿ ಜೊತೆಗೆ ಉಕ್ಕನ್ನೂ ತಯಾರಿಸುತ್ತೇವೆ ಎಂದು ಅರ್ಥವಾಗುವುದು. ಇದೇ ರೀತಿಯಲ್ಲಿ ಕಾರ್ಮಿಕ ವರ್ಗದಿಂದ ಸಂಪೂರ್ಣ ಸಹಕಾರ ಕೋರುವ "ಮುನ್ನಡೆಯಲು ನೆರವಾಗಿ" (Recharge your hands) ಎಂಬ ಪ್ರಚಾರವೂ ನೀತಿಸಹಿತವಾಗಿಯೇ ಇದೆ. ಕಾಲಾನುಕಾಲದಿಂದ ಕಾರ್ಮಿಕ ವರ್ಗದವರ ಜೊತೆ ಸ್ನೇಹಸೌಹಾರ್ದದಿಂದ ನಡೆದುಕೊಂಡಿದ್ದರಿಂದಲೇ "ಮುಷ್ಕರರಹಿತವಾದ 50 ವರ್ಷಗಳ" ದಾಖಲೆಯನ್ನು ಸ್ಥಾಪಿಸಲು ಟಾಟಾ ಸಂಸ್ಥೆಗೆ ಸಾಧ್ಯವಾಗಿದೆ.

ಇಂಥಾ ಉತ್ತಮ ಸೇವೆಯಿಂದಲ್ಲವೇ—

1 ಟಾಟಾರವರಿಗೆ ಭಾರತರತ್ನ ಪ್ರಶಸ್ತಿ ಪ್ರಾಪ್ತವಾದದ್ದು?
2 ಕೈಗಾರಿಕೋದ್ಯಮದ 'ಧರ್ಮರಾಯ' ನಿರ್ವಹಣಾಶಾಸ್ತ್ರದ 'ಯುಧಿಷ್ಠಿರ' ಎಂದು ವ್ಯಾಪಾರ ಸಮುದಾಯ ಇವರನ್ನು ಗೌರವಿಸಿದ್ದು ?
3 ತಂದೆಗೆ ತಕ್ಕ ಮಗ—ರತನ್ ಟಾಟಾಗೆ 90–91ರ ಶ್ರೇಷ್ಠ ವ್ಯಾಪಾರೋದ್ಯಮಿ ಎಂಬ ಪ್ರಶಸ್ತಿ ಬಂದಿದ್ದು?
4 ಟಾಟಾ ಸಂಸ್ಥೆಗಳು ಭಾರತದ ಖಾಸಗಿ ಕ್ಷೇತ್ರದಲ್ಲಿ ಅತ್ಯಂತ ಭಾರಿ ಹಾಗೂ ಅತ್ಯುತ್ತಮ ಸಂಸ್ಥೆಗಳ ಸರಪಣಿ ಎಂದು ಹೆಸರುವಾಸಿಯಾಗಿದ್ದು?

ನಿಗಮಗಳ ಸಾಮಾಜಿಕ ಜವಾಬ್ದಾರಿ ಹಾಗೂ ನೈತಿಕ ನಡವಳಿಕೆಗಳ ಮೇಲೆ ಅವುಗಳ ನಿರ್ವಹಣಾ ದಕ್ಷತೆ ಅವಲಂಬಿಸಿದೆ ಎಂಬುದನ್ನು ಟಾಟಾ ಸಂಸ್ಥೆಗಳ ನಿದರ್ಶನಗಳು ಸಾಬೀತುಪಡಿಸಿವೆ. ಆದರೆ ಎಲ್ಲಾ ಸಂಸ್ಥೆಗಳು ಟಾಟಾ ಅಲ್ಲವಲ್ಲ! ನೀತಿನಡವಳಿಕೆ ಸೂತ್ರಗಳು ಕಾರ್ಯಾಚರಣೆಯಲ್ಲಿವೆಯೋ ಅಥವ ಇಲ್ಲವೇ ಎಂದು ನೋಡಲು ನಿಯಂತ್ರಣಾಧಿಕಾರವಿಲ್ಲ. ನಿರೀಕ್ಷಿಸಿದಂತೆ ಇವು ಅಷ್ಟೇನೂ ಫಲಕಾರಿಯಾಗಿಲ್ಲ. ಇವು ಮನುಷ್ಯನ ಆಧ್ಯಾತ್ಮಿಕವಿಚಾರಗಳಿಗೆ ಸಂಬಂಧಪಟ್ಟವು. ಆದರೂ ಉತ್ತಮ ಮಾರ್ಗದರ್ಶನಗಳಿಂದ ವ್ಯಾಪಾರದ ನೈತಿಕ ಮೌಲ್ಯ ಫಲಕಾರಿಯಾಗಬಹುದು. ವ್ಯಾಪಾರಸ್ಥನು ಅತಿ ಶೀಘ್ರದಲ್ಲಿ ಸಿರಿವಂತನಾಗುವ ಉತ್ಕಟೇಚ್ಛೆಯನ್ನು ಬಿಟ್ಟು ತಾನು ಮಾಡುವ ಕ್ರಿಯೆ ಸರಿಯೆ ತಪ್ಪೇ ಎಂದು ಆತ್ಮಶೋಧನೆ (Introspection) ಮೂಲಕ ಕಂಡುಕೊಳ್ಳಬೇಕು. ನೈತಿಕ ವಿಚಾರಗಳು ಕೇವಲ ಉಚ್ಚ ನಿರ್ವಹಣೆಗೆ ಸೀಮಿತವಾಗಿಲ್ಲ. ಆಡಳಿತಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಒಟ್ಟಿಗೆ ಸೇರಿ ಸಮಾಲೋಚನೆ ಮಾಡಿ ಶಿಸ್ತಿನ ಸಿಪಾಯಿಯಂತೆ ಜೀವನವನ್ನುರೂಪಿಸಿಕೊಳ್ಳುವ ರೀತಿನೀತಿಗಳನ್ನು ಅನುಸರಿಸಬೇಕು. ಇಂದು ಜಪಾನ್ ದೇಶ ಸರ್ವಾಂಗೀಣ ಬೆಳವಣಿಗೆಯಲ್ಲಿ ಮುಂದಿರಬೇಕಾದರೆ 'ಕಾಯಕವೇ ಕೈಲಾಸ' ಎಂಬತೆ ಅಲ್ಲಿಯ ಜನರ ಕ್ರಿಯಾ ಸಂಸ್ಕೃತಿಯೇ ಕಾರಣ. ವಿದ್ಯುನ್ಮಾನ ವಸ್ತುಗಳು, ಗಡಿಯಾರ ತಂತ್ರಜ್ಞಾನ ಹಾಗೂ ಸಣ್ಣ ಕಾರು ವ್ಯಾಪಾರ ವಿಭಾಗಗಳಲ್ಲಿ ಜಪಾನ್ ದೇಶವನ್ನು ಮೀರಿಸುವರಾರೂ ಇಲ್ಲ. ಅದು ಅನುಸರಿಸುವ ರೀತಿ ನೀತಿಗಳು ವಿಶ್ವಕ್ಕೆ ಆದರ್ಶಪ್ರಾಯವಾಗಿವೆ :

1 ನಾಡಿನ ಬಗ್ಗೆ—ರಾಷ್ಟ್ರಪ್ರೇಮ. ಜನರೇ ರಾಷ್ಟ್ರದ ಸ್ವತ್ತು—ರಾಷ್ಟ್ರದ ಏಳಿಗೆ ಜನರ ಪ್ರಾಮಾಣಿಕತೆಯ ಮೇಲೆ ಅವಲಂಬಿಸಿದೆ ಎಂಬ ಸ್ಥಿರ ಪ್ರಜ್ಞೆ.
2 ವೈಯಕ್ತಿಕ ಗುಣಗಳು ಯಾವಾಗಲೂ ಧೈರ್ಯ ಸಾಹಸಗಳನ್ನೊಳಗೊಂಡ ಸ್ಫೂರ್ತಿ ಹುಮ್ಮಸ್ಸು.

3 ಏನು ಕೆಲಸಮಾಡುವ ಸಂಸ್ಥೆಗೆ (ಯಜಮಾನನಿಗೆ) ಪ್ರಥಮ ವಿಧೇಯತೆ, ಪ್ರೀತಿವಾತ್ಸಲ್ಯ ಸಹಿತವಾದ ಆದ್ಯತೆ.

4 ಲಾಭವೇ ಮುಖ್ಯವಲ್ಲ—ಅಂದರೆ ಅಭಿವೃದ್ಧಿಪರ–ಲಾಭದ ಪರವಲ್ಲ ಎಂಬ ನೀತಿ. ಲಾಭನಷ್ಟಗಳನ್ನು ಗೌಣವಾಗಿಟ್ಟು ಕೊಂಡು ಅಪಾರವಾಗಿ ರಫ್ತುಮಾಡುವ ಛಲ.

5 ವಸ್ತುಗಳ ಗುಣಮಟ್ಟಕ್ಕೆ ಹೆಚ್ಚು ಆದ್ಯತೆ

6 ಹಕ್ಕುಭಾದ್ಯತೆಗಳಿಗಿಂತ ಕೆಲಸ ಮಾಡುವ ಮನೋಭಾವಕ್ಕೆ ಪ್ರಾಶಸ್ತ್ಯ. ಹೆಚ್ಚು ವೇತನ ಅಪೇಕ್ಷಿಸದೆ ಕೆಲಸದ ವೇಳೆ ಮೀರಿಯೂ ಅಧಿಕ ಕೆಲಸ ಮಾಡಲು ನಾ ಮುಂದು ತಾ ಮುಂದು ಎಂದು ಆಸಕ್ತಿ ವಹಿಸುವುದು. ಯಾವ ಅಧಿ ಕಾರಿಗೂ ಅಧಿಕ ಹಕ್ಕುಗಲಿ ಅಧಿಕಾರವಾಗಲಿ ಇಲ್ಲ.

7 ವರ್ಗಾವಣೆ, ವಜಾ ಇಲ್ಲ—ಅಧಿಕಾರಿ ಸಿಬ್ಬಂದಿಗಳ ನಡುವೆ ತಿಕ್ಕಾಟವಿಲ್ಲ. ಆದಷ್ಟು ಮುಷ್ಕರವನ್ನು ತಪ್ಪಿಸುವ ಯತ್ನ. ಮುಷ್ಕರವಿದ್ದರೂ ಪ್ರತಿಭಟನೆ ಸೂಚಿಸುವ ಕಪ್ಪು ಬ್ಯಾಡ್ಜ್ ಹಾಕಿಕೊಂಡು ಕೆಲಸಮಾಡುವುದು.

8 ವೈಯಕ್ತಿಕ ನಿರ್ಧಾರಕ್ಕಿಂತ ಸಾಮೂಹಿಕ ನಿರ್ಧಾರಕ್ಕೆ ಪ್ರಾಶಸ್ತ್ಯ.

9 ಅಧ್ಯಕ್ಷನಿಂದ ಆಳಿನ ವರೆಗೂ ವಾರಕ್ಕೊಂದು ಸಲ ತರಪೇತಿ ತರಗತಿಗಳಿಗೆ ಹಾಜರಾಗುವುದು. ಎಲ್ಲರಿಗೂ ಒಂದೇ ಸಮ ವಸ್ತ್ರ.

10 ಖಾಸಗಿ ವಲಯಕ್ಕೆ, ವಿಕೇಂದ್ರೀಕರಣಕ್ಕೆ ಹಾಗೂ ಸಿಬ್ಬಂದಿ ನಿರ್ವಹಣೆಗೆ ಹೆಚ್ಚು ಪ್ರಾಮುಖ್ಯ.

11 ಸ್ನೇಹ ಸೌಹಾರ್ದಗಳನ್ನು ಉತ್ತೇಜಿಸಲು ಅಧಿಕಾರಿ–ಸಿಬ್ಬಂದಿ ವರ್ಗದವರ ನಡುವೆ ಆಗಿಂದಾಗ್ಗೆ ಭೇಟಿ ಕಾರ್ಯಕ್ರಮ.

ಸಿಂಗಪೂರದಂಥ ಸಣ್ಣ ದೇಶ ಭಾರತ ದೇಶವನ್ನೂ ಮೀರಿದ ಅಭಿವೃದ್ಧಿಪರ ರಾಷ್ಟ್ರವಾಗಿದೆ. ಜನರಲ್ಲಿರುವ ರೀತಿ ನೀತಿ ಶಿಸ್ತು ಗಳೇ ಇದಕ್ಕೆ ಕಾರಣವಾಗಿವೆ. ಇಂಗ್ಲೆಂಡ್ ಜನರು ಸಾರ್ವಜನಿಕ ಸ್ಥಳಗಳಲ್ಲಿ ಕೊಳಕನ್ನು ಸ್ವಲ್ಪವೂ ಸಹಿಸರು. ಒಮ್ಮೆ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗಡೆಯವರ ಮಾತೃಶ್ರೀ ಯವರು ರೈಲಿಗಾಗಿ ಲಂಡನ್ನಿನಲ್ಲಿ ಎದುರು ನೋಡುತ್ತಿದ್ದರು. ಹಲವಾರು ವಿದೇಶೀಯರು ತಿಂಡಿತಿನಸುಗಳನ್ನು ತಿಂದು ಕಾಗದದ ಚೂರುಗಳನ್ನು ಅಲ್ಲೇ ಬಿಸಾಡಿ ಓಡಿದರು. ತತ್‌ಕ್ಷಣವೇ ಉತ್ತಮ ಪೋಷಾಕು ಧರಿಸಿದ ವ್ಯಕ್ತಿ ಒಬ್ಬ ಬಂದು ಆ ಕಾಗದದ ಚೂರು ಗಳನ್ನು ಕಸದ ಬುಟ್ಟಿಗೆ ಹಾಕಿದ. ಮಾತೃಶ್ರೀಯವರು ಕುತೂಹಲ ರಾಗಿ ಪ್ರಶ್ನಿಸಿದಾಗ "ಇದು ನಮ್ಮ ರಾಷ್ಟ್ರ ನಡವಳಿಕೆ" ಎಂದು ಆತ ಉತ್ತರಿಸಿದ.

ಇಂದು ವ್ಯಾಪಾರ/ಕೈಗಾರಿಕಾ ಸಂಸ್ಥೆಗಳಾಗಲಿ ವೃತ್ತಿಪರ ರಾಗಲಿ ಎದುರಿಸಬೇಕಾದ ಸವಾಲುಗಳು :

(1) ಪರಿಸರದ ಕಾರಣದಿಂದ ಸಂಸ್ಥೆಯನ್ನು ಮುಚ್ಚಿ ಕಾರ್ಮಿಕ ರಿಂದ ಛೀಮಾರಿ ಹಾಕಿಸಿಕೊಳ್ಳುವುದೋ, ಅಥವಾ ಸಂಸ್ಥೆ ಯನ್ನು ಮುಂದುವರಿಸಿ ಸಮಾಜವನ್ನು ಎದುರಿಸುವುದೋ ?

(2) ಹುದ್ದೆಗಳನ್ನು ನಿರ್ಮಿಸುವುದು ಹಾಗೂ ಪಾಲಿಸುವುದು—ಎರಡೂ ಸಾಧ್ಯವೇ !

ಗೊಂದಲವನ್ನುಂಟುಮಾಡುವ ಹಿತಾಸಕ್ತಿಗಳನ್ನು ಸಾವಧಾನ ದಿಂದ ಯೋಚಿಸಿ ವಿಮರ್ಶೆಮಾಡಿ ನಿರ್ಧಾರ ಕೈಗೊಳ್ಳಬೇಕು. ಇದ ರಲ್ಲಿ ವೈಯಕ್ತಿಕ ಹಾಗೂ ವೃತ್ತಿಜೀವನದ ಆಸಕ್ತಿ ಒಂದಕ್ಕೊಂದು ಅಂಟಿಕೊಂಡಿರುತ್ತವೆ. ನಿರ್ಧಾರವೇನೇ ಇರಲಿ, ಅದು ವೈಯಕ್ತಿಕ ಆಸಕ್ತಿಗೆ ಮೇಲಿದ್ದರೆ ಒಳಿತು. ★

ಸಂತುಷ್ಟಿಯ ಸಮೀಕ್ಷೆ

ಯಾವ ದೇಶದ ಉದ್ಯೋಗಿಗಳು ಹೆಚ್ಚು ಸಂತುಷ್ಟರು—ಎಂಬುದರ ಬಗ್ಗೆ ಅಂತರ ರಾಷ್ಟ್ರೀಯ ಸಂಸ್ಥೆಯೊಂದು ಎಂಟು ಯೂರೋಪಿಯನ್ ದೇಶಗಳಲ್ಲಿ ನಡೆಸಿದ ಸಮೀಕ್ಷೆ ಯಲ್ಲಿ ಸ್ವಿಟ್ಜರ್‌ಲೆಂಡ್ ದೇಶದವರು ಹೆಚ್ಚು ಸಂತುಷ್ಟರು ಎಂದು ವರದಿ ಮಾಡಿದೆ. ಅವರ ಅನಂತರದ ಸ್ಥಾನವನ್ನು ಡಚ್ಚರು ಪಡೆದಿದ್ದಾರೆ. ಬ್ರಿಟಿಷರು ಅತಿ ಕಡಮೆ ಸಂತುಷ್ಟರೆಂದು ಅದು ತಿಳಿಸುತ್ತದೆ. ಸಂಬಳ, ಸಾರಿಗೆ, ಸಂಹನನ, ಕೆಲಸದ ಭದ್ರತೆ, ತಮ್ಮ ಕಂಪನಿ ಇತ್ಯಾದಿ ವಿಷಯಗಳನ್ನು ಕುರಿತಂತೆ ಈ ಸಮೀಕ್ಷೆ ನಡಸಲಾಗಿತ್ತು. ಭಾರತದವರ ಸ್ಥಾನ ಎಲ್ಲಿಗೆ ಬರಬಹುದು—ಇಂಥ ಸಮೀಕ್ಷೆ ನಡಸಿದಲ್ಲಿ ?

ಜಿ. ಎಸ್. ರವೀಂದ್ರ
ಸಿ. ಆರ್. ಸತೀಶ್‌ಚಂದ್ರ
(ಭಾರತೀಯ ಸ್ಟೇಟ್ ಬ್ಯಾಂಕ್)

ಬ್ಯಾಂಕುಗಳಲ್ಲಿ ಮುಂಗಡ ಪಟ್ಟಿಯ ತಯಾರಿಕೆ: ಏಕೆ? ಹೇಗೆ?

ಕುಮುದ ರಾಮಾನುಜಂ
ವಾಣಿಜ್ಯಶಾಸ್ತ್ರ ಅಧ್ಯಾಪಕಿ, ಮಹಾರಾಣಿ ಮಹಿಳಾ ಕಾಲೇಜು, ಬೆಂಗಳೂರು ೧

ಬ್ಯಾಂಕು ತನ್ನ ಸಂಘಟನೆಯ ಉದ್ದೇಶಗಳನ್ನು ಸಾಧಿಸಲು ಒಂದು ನಿಗದಿಯಾದ ಅವಧಿಯಲ್ಲಿ ಕೈಗೊಳ್ಳಬೇಕಾದ ಪ್ರತಿಯೊಂದು ಕಾರ್ಯದ ಉದ್ದೇಶಗಳನ್ನೂ ವಿಶ್ಲೇಷಿಸುವ, ಗುರುತಿಸುವ, ಸರಳೀಕರಿಸುವ ಮತ್ತು ಅದಕ್ಕೆ ನಿರ್ದಿಷ್ಟ ರೂಪ ಕೊಡುವ ಪ್ರಕ್ರಿಯೆಗೆ ಈಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಪ್ರಾಮುಖ್ಯ ನೀಡಲಾಗುತ್ತಿದೆ.

ವ್ಯವಹಾರದಲ್ಲಿ ನಿರ್ವಹಣೆ ಎಂದರೆ ಅಥವಾ ವ್ಯವಸ್ಥಾಪನೆ ಎಂದರೆ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ಪಾದನೆಗಾಗಿ ಉಪಯೋಗಿಸುವುದರ ಮೂಲಕ ನಿರ್ದಿಷ್ಟ ಧ್ಯೇಯ ಅಥವಾ ಗುರಿಗಳನ್ನು ಸಾಧಿಸಲು ಸಮಗ್ರ ಮತ್ತು ಸಮನ್ವಯವಾಗಿ ಇತರರಿಂದ ಕೆಲಸಗಳನ್ನು ಮಾಡಿಸಿಕೊಳ್ಳುವ ತಂತ್ರ. ವ್ಯವಹಾರದಲ್ಲಿ ನಿರ್ಣಯಗಳನ್ನು ಕೈಗೊಳ್ಳುವುದು, ನೀತಿಗಳನ್ನು ರೂಪಿಸುವುದು, ಯೋಜನೆಗಳನ್ನು ತಯಾರಿಸುವುದು, ನಿರ್ದೇಶಿಸುವುದು, ನಿಯಂತ್ರಿಸುವುದು ಮತ್ತು ಸಂಘಟಿಸುವುದು ವ್ಯವಸ್ಥಾಪನೆಯ ಮುಖ್ಯ ಕರ್ತವ್ಯವಾಗಿದೆ. ನಿಯಂತ್ರಣವು ವ್ಯವಸ್ಥಾಪನೆಯ ಅತ್ಯಂತ ಮಹತ್ವದ ಮೂಲಾಂಶವಾಗಿದೆ. ಹಿಂದೆ ವ್ಯವಹಾರಗಳಲ್ಲಿ ಪ್ರಮಾದಗಳು ಸಂಭವಿಸಿದಾಗ ಅವಕ್ಕೆ ಕಾರಣರಾದವರನ್ನು ಕಂಡುಹಿಡಿದು ಅವರನ್ನು ಶಿಕ್ಷಿಸುವುದು ಮುಖ್ಯ ಉದ್ದೇಶವಾಗಿತ್ತು. ಇಂದಿನ ವೈಜ್ಞಾನಿಕ ವ್ಯವಸ್ಥಾಪನೆಯ ಪ್ರಕಾರ, ಪ್ರತ್ಯಕ್ಷ ಕಾರ್ಯನಿರ್ವಹಣೆ ಮತ್ತು ಪೂರ್ವನಿರ್ಧಾರಿತ ಪ್ರಮಾಣಗಳ ನಡುವಿನ ವ್ಯತ್ಯಾಸಗಳನ್ನು ಕಂಡುಹಿಡಿಯುವುದು ಮತ್ತು ಭವಿಷ್ಯದಲ್ಲಿ ಇಂಥ ವ್ಯತ್ಯಾಸಗಳು ಸಂಭವಿಸದಂತೆ ಎಚ್ಚರಿಕೆ ವಹಿಸುವುದು ನಿಯಂತ್ರಣದ ಮೂಲೋದ್ದೇಶವಾಗಿದೆ. ಹೀಗೆ ಇಂದಿನ ನಿಯಂತ್ರಣವು ಜನರಿಗಾಗಿ ಇರದೆ ಪ್ರತಿಫಲಕ್ಕಾಗಿ ಇರುತ್ತದೆ. ನಿಯಂತ್ರಣವು ಸಂಸ್ಥೆಯ ಎಲ್ಲ ಚಟುವಟಿಕೆಗಳಿಗೂ ಎಲ್ಲ ವರ್ಗದ ಉದ್ಯೋಗಿಗಳಿಗೂ ಅನ್ವಯಿಸುತ್ತದೆ. ಸಾಮಾನ್ಯವಾಗಿ ನಿಯಂತ್ರಣವನ್ನು ಕೆಲವು ಮಹತ್ವದ ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಲಾಗಿರುತ್ತದೆ. ನಿಯಂತ್ರಣವು ಭೌತಿಕವಾಗಿರಬಹುದು ಅಥವಾ ಹಣಕಾಸಿನದಾಗಿರಬಹುದು. ಭೌತಿಕ ನಿಯಂತ್ರಣವು ಪರಿಮಾಣಾತ್ಮಕವಾಗಿರಬಹುದು ಅಥವಾ ಗುಣಾತ್ಮಕವಾಗಿರಬಹುದು. ಅವುಗಳನ್ನು ವೈಯಕ್ತಿಕ ಮೇಲ್ವಿಚಾರಣೆ ಮತ್ತು ಪರೀಕ್ಷೆಯ ಮೂಲಕ ಕೈಕೊಳ್ಳಲಾಗುತ್ತದೆ. ಹಣಕಾಸಿನ ನಿಯಂತ್ರಣವನ್ನು ಮುಂಗಡ ಪಟ್ಟಿ ನಿಯಂತ್ರಣ ಮತ್ತು ವೆಚ್ಚ ನಿಯಂತ್ರಣದ ಮೂಲಕ ಕೈಗೊಳ್ಳಲಾಗುತ್ತದೆ.

ನಿಯಂತ್ರಣ ಪ್ರಕ್ರಿಯೆ

ನಿಯಂತ್ರಣದ ಪ್ರಕ್ರಿಯೆಯಲ್ಲಿ ಮೊದಲಿಗೆ ಕಾರ್ಯ ನಿರ್ವಹಣೆಯ ಪ್ರಮಾಣಗಳನ್ನು ನಿರ್ಧರಿಸುತ್ತಾರೆ. ಎರಡನೆಯ ಕ್ರಮದಲ್ಲಿ ಕಾರ್ಯನಿರ್ವಹಣೆಯನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿ, ಪೂರ್ವನಿರ್ಧಾರಿತ ಪ್ರಮಾಣಗಳೊಂದಿಗೆ ತುಲನೆ ಮಾಡಿ ನೋಡಿ, ನಿರ್ವಹಿಸಿದ ಕಾರ್ಯವು ನಿರೀಕ್ಷಿತ ಪ್ರಮಾಣಕ್ಕನುಗುಣವಾಗಿ ಆಗಿದೆಯೋ ಅಥವಾ ಅದರಲ್ಲಿ ಲೋಪ-ದೋಷಗಳು ಸಂಭವಿಸಿವೆಯೋ ಎಂಬುದನ್ನು ಕಂಡುಹಿಡಿಯುತ್ತಾರೆ. ಕಡೆಗೆ, ಕಂಡುಬಂದ ಲೋಪದೋಷಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಕೊಳ್ಳುತ್ತಾರೆ.

ನಿಯಂತ್ರಣದ ತಂತ್ರಗಳಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳಿವೆ: ಸಾಂಪ್ರದಾಯಿಕ ನಿಯಂತ್ರಣ ತಂತ್ರಗಳು ಮತ್ತು ಆಧುನಿಕ ನಿಯಂತ್ರಣ ತಂತ್ರಗಳು. ಸಾಂಪ್ರದಾಯಿಕ ನಿಯಂತ್ರಣ ತಂತ್ರಗಳಲ್ಲಿ ಎರಡು ಪ್ರಕಾರಗಳಿವೆ—ಮುಂಗಡ ಪತ್ರ ನಿಯಂತ್ರಣ ತಂತ್ರಗಳು ಮತ್ತು ಇತರ ತಂತ್ರಗಳು ಅಂದರೆ ಅಂಕಿ-ಸಂಖ್ಯೆಗಳ ನಿಯಂತ್ರಣ, ಸಮಸ್ಥಿತಿ ಬಿಂದುವಿನ ವಿಶ್ಲೇಷಣೆ. ಆಂತರಿಕ ಲೆಕ್ಕ ಪರಿಶೋಧನೆ. ಆಧುನಿಕ ನಿಯಂತ್ರಣ ತಂತ್ರಗಳು ಅನೇಕವಾಗಿವೆ—ಸಿ.ಪಿ.ಎಮ್, ಪಿ.ಇ.ಆರ್.ಟಿ ಮುಂತಾದವು.

ಮುಂಗಡ ಪಟ್ಟಿ

ಒಂದು ವ್ಯವಹಾರ ಸಂಸ್ಥೆಯ ಉದ್ದೇಶಗಳ ಸಾಧನೆಗಾಗಿ ಮುಂದೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಪಟ್ಟಿಯು ವ್ಯವಹಾರದ ಮುಂಗಡಪಟ್ಟಿಯಾಗಿದೆ. ಸಾಧಿಸಬೇಕಾದ ಗುರಿಗಳನ್ನು

ಹಣಕಾಸಿನ ರೂಪದಲ್ಲಿ ಅಥವಾ ಇತರ ಗಾತ್ರಗಳ ರೂಪದಲ್ಲಿ ವ್ಯಕ್ತಪಡಿಸಲಾಗುತ್ತದೆ. ಅದು ಸಾಧನೆಯ ಪ್ರಮಾಣಗಳನ್ನು ಒದಗಿಸುವುದರಿಂದ ನಿಯಂತ್ರಣದ ತಳಹದಿಯಾಗಿರುತ್ತದೆ. ಹೀಗೆ ಮುಂಗಡಪಟ್ಟಿಯನ್ನು ತಯಾರಿಸುವುದು ವ್ಯವಸ್ಥಾಪಕ ಮಂಡಳಿಯ ಯೋಜನೆಯ ಕಾರ್ಯವಾಗಿದ್ದರೆ ಮುಂಗಡಪಟ್ಟಿಯ ನಿಯಂತ್ರಣವು ವ್ಯವಸ್ಥಾಪಕ ಮಂಡಳಿಯ ನಿಯಂತ್ರಣದ ಕಾರ್ಯವಾಗಿದೆ.

ಮುಂಗಡಪಟ್ಟಿಗಳಲ್ಲಿ ಎರಡು ಪ್ರಕಾರಗಳಿವೆ—(i) ಕಾರ್ಯಾತ್ಮಕ ಮುಂಗಡಪಟ್ಟಿ ಮತ್ತು (ii) ವರಿಷ್ಠ ಮುಂಗಡಪಟ್ಟಿ. ಕಾರ್ಯಾತ್ಮಕ ಮುಂಗಡಪಟ್ಟಿಗಳಲ್ಲಿ ಪ್ರಮುಖವಾದವು ಮಾರಾಟ, ಉತ್ಪಾದನೆ ಮತ್ತು ಹಣಕಾಸಿನ ಮುಂಗಡಪಟ್ಟಿಗಳು. ಈ ಎಲ್ಲ ಮುಂಗಡಪಟ್ಟಿಗಳ ಸಂಕಲನವೇ ವರಿಷ್ಠ ಮುಂಗಡಪಟ್ಟಿಯಾಗಿದೆ. ಮುಂಗಡ ಪಟ್ಟಿಯ ನಿಯಂತ್ರಣ ಎಂದರೆ ಸಾಧನೆಗಳನ್ನು ಮನ್ನಿಸಲು ಅಥವಾ ವ್ಯತ್ಯಾಸಗಳುಂಟಾಗಿದ್ದರೆ ಅಂಥ ವ್ಯತ್ಯಾಸಗಳ ಕಾರಣಗಳನ್ನು ಸರಿಪಡಿಸಿ, ಇಲ್ಲವೇ ಮುಂಗಡಪಟ್ಟಿಯ ಅಂದಾಜುಗಳನ್ನು ಹೊಂದಾಣಿಕೆ ಮಾಡಿ ವ್ಯತ್ಯಾಸಗಳನ್ನು ಸರಿಪಡಿಸಲು, ಮುಂಗಡಪಟ್ಟಿಯಲ್ಲಿ ಸೂಚಿಸಿದ ಅಂಕಿಅಂಶಗಳೊಂದಿಗೆ ಸಾಧಿಸಿದ ಅಂಕಿ–ಅಂಶಗಳನ್ನು ತುಲನೆಮಾಡಿ ನೋಡುವ ಪ್ರಕ್ರಿಯೆಯೇ ಮುಂಗಡಪಟ್ಟಿಯ ನಿಯಂತ್ರಣವಾಗಿದೆ. ಮುಂಗಡಪಟ್ಟಿಯ ಪರಿಣಾಮಕಾರಿ ನಿಯಂತ್ರಣಕ್ಕೆ ಕೆಲವು ಆವಶ್ಯಕತೆಗಳನ್ನು ಇಲ್ಲಿ ಕಾಣಿಸಿದೆ: ಎಲ್ಲ ವಿಭಾಗಗಳಿಂದಲೂ ಸಾಧನೆಯ ಬಗ್ಗೆ ಕಾಲಕಾಲಕ್ಕೆ ವರಿಷ್ಠಾಧಿಕಾರಿಗಳಿಗೆ ತಮ್ಮ ವರದಿಯನ್ನು ಮತ್ತು ಸಾಧಿಸಿದ ಪ್ರಗತಿಯನ್ನು ಸಾದರಪಡಿಸುವ ವ್ಯವಸ್ಥೆ ಇರಬೇಕು. ಮಾರಾಟ, ಉತ್ಪಾದನೆ, ಆದಾಯ, ವೆಚ್ಚ ಮೊದಲಾದವುಗಳ ವಾಸ್ತವಿಕ ದಾಖಲೆಗಳಿರಬೇಕು. ವ್ಯವಸ್ಥಾಪಕ ವರಿಷ್ಠರ ಬೆಂಬಲ ಮತ್ತು ಪ್ರೋತ್ಸಾಹದ ಜೊತೆಗೆ ಸಂಸ್ಥೆಯ ಎಲ್ಲ ಉದ್ಯೋಗಿಗಳು ಮುಂಗಡಪಟ್ಟಿಯ ತಯಾರಿಕೆಯಲ್ಲಿ ಹಾಗೂ ಅದನ್ನು ಕಾರ್ಯಗತಗೊಳಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಪ್ರತಿಯೊಬ್ಬ ಉದ್ಯೋಗಿಯೂ ಅವನ ಪಾಲಿನ ಕಾರ್ಯವನ್ನು ಸಮರ್ಥವಾಗಿ ಮಾಡಲು ಒಳ್ಳೆಯ ಸಂಘಟನೆ ಇರಬೇಕು. ಪ್ರತಿಯೊಬ್ಬನ ಅಧಿಕಾರ, ಹೊಣೆಗಾರಿಕೆ, ಮತ್ತು ಉತ್ತರದಾಯಿತ್ವಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಪ್ರಾಮಾಣಿಕ ನಿರ್ವಹಣೆಗನುಗುಣವಾಗಿ ನಿರ್ವಹಿಸುವ ಉದ್ಯೋಗಿಗಳಿಗೆ ಪ್ರೇರಕಗಳನ್ನು ನೀಡಬೇಕು ಮತ್ತು ಕಡಿಮೆ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಉದ್ಯೋಗಿಗಳನ್ನು ದಂಡಿಸಬೇಕು. ಸಂಸ್ಥೆಯ ಹಿತದ ದೃಷ್ಟಿಯಿಂದ ಮುಂಗಡಪಟ್ಟಿಯು ಸಾಕಷ್ಟು ಹೊಂದಾಣಿಕೆಗಳಿಗೆ ಅನುಕೂಲವಾಗಿರಬೇಕು. ಅವಶ್ಯವೆನಿಸಿದಲ್ಲಿ ಪರ್ಯಾಯ ಯೋಜನೆಗಳಿಗೆ ಅವಕಾಶವನ್ನು ಒದಗಿಸಿರಬೇಕು. ತುರ್ತು ಪರಿಸ್ಥಿತಿಯಲ್ಲಿ ತ್ವರಿತವಾಗಿ ಸರಿಪಡಿಸಲು ಅವಕಾಶವಿರಬೇಕು. ವ್ಯವಹಾರ ಸಂಸ್ಥೆಯಲ್ಲಿ ಇವುಗಳಿಗೆ ಸೌಲಭ್ಯವಿದ್ದರೆ ಮುಂಗಡಪಟ್ಟಿಯ ನಿಯಂತ್ರಣವು ಪರಿಣಾಮಕಾರಿಯಾಗಿರುತ್ತದೆ.

ಬ್ಯಾಂಕುಗಳಲ್ಲಿ ಸಾಧನಾ ಮುಂಗಡಪಟ್ಟಿ ತಯಾರಿಕೆ

ಸಾಧನಾ ಮುಂಗಡ ಪಟ್ಟಿಯ ಮೂಲಕ ಒಂದು ಸಂಘಟನೆಯ ಸಾಮಾನ್ಯ ಮತ್ತು ನಿರ್ದಿಷ್ಟ ಗುರಿಗಳ ಸಾಧನೆಯ ಮೌಲ್ಯಾಂಕನ ಮಾಡಲು ಸಾಧ್ಯವಾಗುತ್ತದೆ. ಸಂಘಟನೆಯಲ್ಲಿ ಕಾರ್ಯ ನಿರ್ವಹಿಸುವ ಪ್ರತಿಯೊಬ್ಬ ಸಿಬ್ಬಂದಿಯ ನಿರ್ದಿಷ್ಟ ಗುರಿಗಳನ್ನು ಸೂಚಿಸುವುದಲ್ಲದೆ ವ್ಯವಸ್ಥಾಪಕ ವರಿಷ್ಠರ ನಿಯಂತ್ರಣಕ್ಕೂ ಅವಕಾಶ ಒದಗಿಸುತ್ತದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕ್ ಮೇನೇಜ್‌ಮೆಂಟ್‌ನ ಅಭಿಪ್ರಾಯದಲ್ಲಿ "ಸಾಧನಾ ಮುಂಗಡ ಪಟ್ಟಿಯ ತಂತ್ರದ ಮೂಲಕ ಒಂದು ಸಂಘಟನೆಯ ಉದ್ದೇಶಗಳನ್ನು ಸಾಧಿಸಲು ನಿಗದಿತ ಸಮಯದಲ್ಲಿ ಪ್ರತಿಕಾರ್ಯದ ಉದ್ದೇಶಗಳನ್ನು ವಿಶ್ಲೇಷಿಸುವ, ಗುರುತಿಸುವ, ಸರಳೀಕರಿಸುವ ಮತ್ತು ನಿರ್ದಿಷ್ಟ ರೂಪಕೊಡುವ ಒಂದು ಪ್ರಕ್ರಿಯೆಯಾಗಿದೆ. ಒಂದು ಸಂಘಟನೆಯ ವ್ಯವಹಾರೋದ್ದೇಶಗಳನ್ನು ಸಾಧಿಸಲು ನಿರ್ದಿಷ್ಟ ಮಾರ್ಗ ಹೊಂದಿರುವುದೇ ಈ ತಂತ್ರದ ಮುಖ್ಯ ಲಕ್ಷಣವಾಗಿದೆ." ದೀರ್ಘ ಕಾಲದಲ್ಲಿ ಗ್ರಾಹಕರ ವಿವಿಧ ಆವಶ್ಯಕತೆಗಳನ್ನು ಒದಗಿಸುವುದರ ಮೂಲಕ ಆ ಸಂಘಟನೆಯು ನಿರಂತರವಾಗಿ ಬೆಳೆದು ಗುರಿಯನ್ನು ಸಾಧಿಸುತ್ತದೆ. ಈ ತಂತ್ರದ ಮೂಲಕ ಸಂಘಟನೆಯಲ್ಲಿ ಸೂಕ್ಷ್ಮತೆಯು ಹೆಚ್ಚಿ ಹೊಂದಾಣಿಕೆಗಳಿಗೆ ಅವಕಾಶವಿರುವುದಲ್ಲದೆ, ಬೆಳವಣಿಗೆಯನ್ನು ಕುಂಠಿತಗೊಳಿಸುವಂಥ ಸನ್ನಿವೇಶಗಳನ್ನು ತಡೆಯಲೂ ಸಾಧ್ಯವಾಗುತ್ತದೆ.

ಬ್ಯಾಂಕುಗಳಲ್ಲಿ ಸಾಧನಾ ಮುಂಗಡಪಟ್ಟಿಯ ತಯಾರಿಕೆ ಎಂದರೆ ನಿಗದಿತ ಕಾಲದಲ್ಲಿ ಕಾರ್ಯಾಚರಣೆಯ ಆಯ್ದ ರೀತಿಯಿಂದ ಈಗಿನ ಹಾಗೂ ಭವಿಷ್ಯದ ವ್ಯವಹಾರಗಳನ್ನು; ಅಂದರೆ ಠೇವಣಿ ಸಂಗ್ರಹಣೆ ಮತ್ತು ಸಾಲನೀಡಿಕೆ ವ್ಯವಹಾರಗಳನ್ನು, ಬ್ಯಾಂಕಿನ ವ್ಯವಹಾರವಾಗಿ ಮಾರ್ಪಡಿಸುವ ಒಂದು ಯೋಜನೆಯಾಗಿದೆ. ಅದು ಒಂದು ಬ್ಯಾಂಕು ತನ್ನ ಮುಂಗಡಪಟ್ಟಿಯ ಅವಧಿಯಲ್ಲಿ ಸಾಧಿಸಬೇಕಾಗಿರುವ ವ್ಯವಹಾರದ ಮೊತ್ತವನ್ನು ಸೂಚಿಸುತ್ತದೆ.

1969ರ ಮೊದಲು ಬ್ಯಾಂಕುಗಳಲ್ಲಿ ಯಾವ ರೀತಿಯ ಯೋಜನೆಯಾಗಲಿ, ಮುಂಗಡಪಟ್ಟಿಯ ತಯಾರಿಕೆಯಾಗಲಿ ಇರಲಿಲ್ಲ. ಶಾಖಾ ಬ್ಯಾಂಕುಗಳು ಠೇವಣಿಗಳನ್ನು ಸಂಗ್ರಹಿಸಿ ಪ್ರಧಾನ ಕಛೇರಿಗೆ ಪಾವತಿ ಮಾಡುತ್ತಿದ್ದವು; ಮತ್ತು ಸಾಲ ನೀಡಿಕೆಯು ಪ್ರಧಾನ ಕಛೇರಿಯ ಮುಖ್ಯ ಕಾರ್ಯವಾಗಿತ್ತು. ಹಿಂದಿನ ವರ್ಷಗಳಲ್ಲಿ ಬ್ಯಾಂಕಿನ ವ್ಯವಹಾರಗಳಲ್ಲಿ ಆಗಿರುವ ಬೆಳವಣಿಗೆಯನ್ನು ಮತ್ತು ದೇಶದ ಆರ್ಥಿಕ ಸ್ಥಿತಿ-ಗತಿಗಳನ್ನು ಗಮನದಲ್ಲಿರಿಸಿ ಪ್ರಧಾನ ಕಛೇರಿಯ ವರಿಷ್ಠ ವ್ಯವಸ್ಥಾಪಕರು ಪ್ರತಿವರ್ಷವೂ ಠೇವಣಿ ಸಂಗ್ರಹಣೆಯಲ್ಲಿ ಸಾಧಿಸಬೇಕಾಗಿರುವ ಬೆಳವಣಿಗೆಯನ್ನು ಮಾತ್ರ ಯೋಜಿಸಿ, ಪ್ರಾದೇಶಿಕ ಹಾಗೂ ಶಾಖಾ ಬ್ಯಾಂಕುಗಳಿಗೆ ಸೂಚನೆಗಳನ್ನು ಕಳುಹಿಸುತ್ತಿದ್ದರು. ಕಾಯಿದೆಯ ಪ್ರಕಾರ ದ್ರವತ್ವದ ಅನುಪಾತಗಳನ್ನು ಪರಿಗಣಿಸಿ ಪ್ರಧಾನ ಕಛೇರಿಯು ವಿವಿಧ ಕಾಲಗಳಿಗೆ ತಕ್ಕಂತೆ (ತೇಜಿ-ಮಂದಿ) ಸಾಲ ನೀಡಿಕೆಯ ಗುರಿಗಳನ್ನು ನಿರ್ಧರಿಸುತ್ತಿತ್ತು. ಅನಂತರ ಬ್ಯಾಂಕುಗಳ ರಾಷ್ಟ್ರೀಕರಣದಿಂದ ನಿರ್ವಹಣೆಯಲ್ಲಿ ಬಹಳ ಬದಲಾವಣೆಗಳನ್ನು ಮಾಡಬೇಕಾಯಿತು.

ವ್ಯವಸ್ಥಿತ ರೀತಿಯಲ್ಲಿ ಬ್ಯಾಂಕುಗಳ ವ್ಯವಹಾರಗಳನ್ನು ನಡೆಸಲೆಂದು 1973ರಲ್ಲಿ ವಾರ್ಷಿಕ ಯೋಜನೆ ಮತ್ತು ಸಾಧನಾ ಮುಂಗಡಪಟ್ಟಿಯ ತಯಾರಿಕೆಯನ್ನು ಪರಿಚಯಿಸಲಾಯಿತು. ಮುಖ್ಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳು ಆದ್ಯತಾವಲಯಕ್ಕೆ ನೀಡುವ ಸಾಲಗಳನ್ನು ಕುರಿತು ಸಾಧನಾ ಮುಂಗಡಪಟ್ಟಿಯನ್ನು ತಯಾರಿಸಲು ಪ್ರಾರಂಭಿಸಿದವು. ಈ ಕೆಲಸವು ಎರಡು ಮಟ್ಟಗಳಲ್ಲಿ ನಡೆಯುತ್ತದೆ : (i) ಕೇಂದ್ರ ಕಛೇರಿಯ ಮಟ್ಟದಲ್ಲಿ, (ii) ಶಾಖಾ ಕಛೇರಿಯ ಮಟ್ಟದಲ್ಲಿ.

(i) ಕೇಂದ್ರ ಕಛೇರಿಯ ಮಟ್ಟದಲ್ಲಿ

(i) ಕೇಂದ್ರ ಕಾರ್ಯಾಲಯದ ವರಿಷ್ಠ ವ್ಯವಸ್ಥಾಪಕರು ಬ್ಯಾಂಕಿನ ಭವಿಷ್ಯದ ಚಟುವಟಿಕೆಗಳನ್ನು ನಿರ್ದೇಶಿಸಲು ಹಾಗೂ ಒತ್ತುಕೊಡಬೇಕಾಗಿರುವ ಕ್ಷೇತ್ರಗಳನ್ನು ಪ್ರಾದೇಶಿಕ ಮತ್ತು ಶಾಖಾ ಬ್ಯಾಂಕುಗಳಿಗೆ ತಿಳಿಸಲು, ಸೂಕ್ತ ನೀತಿಗಳನ್ನು ರೂಪಿಸಿ ಮಾರ್ಗದರ್ಶನ ನೀಡಲು ಕೆಳಗೆ ಕಾಣಿಸಿರುವ ಕ್ರಮಗಳನ್ನು ಕೈಗೊಳ್ಳುತ್ತಾರೆ :

(ಅ) ಬ್ಯಾಂಕಿನ ಕಾರ್ಯಾತ್ಮಕ ಮುಖ್ಯಸ್ಥರು, ಹಿರಿಯ ಅಧಿಕಾರಿಗಳು ಮತ್ತು ಎಲ್ಲ ಕ್ಷೇತ್ರಗಳ ತಜ್ಞರನ್ನೊಳಗೊಂಡ (ಕೃಷಿ, ಭಾರಿ ಉದ್ದಿಮೆ, ಸಣ್ಣ ಕೈಗಾರಿಕೆ, ಇತರೆ) ಒಂದು ದುಡಿಮೆಯ ದಳವನ್ನು ರಚಿಸುತ್ತಾರೆ. ಮುಂದಿನ ವರ್ಷಗಳಲ್ಲಿ ಸಂಗ್ರಹಿಸಬೇಕಾದ ಹೆಚ್ಚುವರಿ ಠೇವಣಿಗಳನ್ನು ಮತ್ತು ವಿವಿಧ ಕ್ಷೇತ್ರಗಳಿಗೆ ನೀಡಬೇಕಾದ ಸಾಲಗಳನ್ನು ಕುರಿತು ಪ್ರಾದೇಶಿಕ ಅಂದಾಜು ಪಟ್ಟಿಯನ್ನು ದಳದವರು ತಯಾರಿಸುತ್ತಾರೆ. ಭವಿಷ್ಯದಲ್ಲಿ ಪ್ರತಿ ಪ್ರದೇಶದಲ್ಲೂ ಬ್ಯಾಂಕಿನ ವ್ಯವಹಾರಗಳ ಮೇಲೆ ಪರಿಣಾಮ ಬೀರುವ ಆರ್ಥಿಕಸ್ಥಿತಿ ಮತ್ತು ನಿಯಂತ್ರಣದ ಅಂಶಗಳನ್ನು ಪರಿಗಣಿಸಿ ಹಿಂದಿನ ವರ್ಷಗಳ ಪ್ರವೃತ್ತಿಗಳನ್ನಾಧರಿಸಿ ಅಂದಾಜುಗಳನ್ನು ತಯಾರಿಸುತ್ತಾರೆ.

(ಆ) ಎರಡನೆಯದಾಗಿ ಪ್ರಾದೇಶಿಕ ವ್ಯವಸ್ಥಾಪಕರು ತಮ್ಮ ಪ್ರದೇಶದಲ್ಲಿ ವ್ಯವಹಾರದ ಸಾಧ್ಯತೆಗಳನ್ನಾಧರಿಸಿ ಮೇಲೆ ಹೇಳಿರುವ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿ ಅಂದಾಜುಗಳನ್ನೊಳಗೊಂಡ "ಕೆಲಸದ ಪತ್ರವನ್ನು" ತಯಾರಿಸುತ್ತಾರೆ.

(ಇ) ಪ್ರಧಾನ ಕಛೇರಿಯಲ್ಲಿ ಪ್ರಾದೇಶಿಕ ವ್ಯವಸ್ಥಾಪಕರು ಮತ್ತು ದುಡಿಮೆಯ ದಳದ ಸದಸ್ಯರು ಸೇರಿ ವಿಚಾರವಿನಿಮಯದ ಅನಂತರ ಆಚರಣೆಗೆ ಯೋಗ್ಯವಾದ ಮಾರ್ಗದರ್ಶನಗಳನ್ನು ತಯಾರಿಸಿ ಎಲ್ಲ ಪ್ರಾದೇಶಿಕ ಕಛೇರಿಗಳಿಗೂ ರವಾನಿಸುತ್ತಾರೆ.

(ಈ) ದುಡಿಮೆಯ ದಳದವರು ಮಾರ್ಗದರ್ಶನ ಪತ್ರದ ಅಂಶಗಳನ್ನು ಬ್ಯಾಂಕಿನ ವರಿಷ್ಠ ವ್ಯವಸ್ಥಾಪಕರೊಡನೆ ಚರ್ಚಿಸಿ ಅವರ ನಿರೀಕ್ಷಣೆಗಳಿಗನುಗುಣವಾಗಿ ಬ್ಯಾಂಕಿನ ಕಾರ್ಯನೀತಿಯಲ್ಲಿ ಮತ್ತು ಚಟುವಟಿಕೆಗಳ ಪ್ರಾಮುಖ್ಯಗಳಲ್ಲಿ ಯುಕ್ತವಾದ ಹೊಂದಾಣಿಕೆಗಳನ್ನು ಮಾಡುತ್ತಾರೆ.

(ಉ) ಅಂತಿಮವಾಗಿ ತಯಾರಿಸಿದ ಬ್ಯಾಂಕಿನ ನೀತಿಯ ಮಾರ್ಗದರ್ಶನಗಳನ್ನು ಎಲ್ಲ ಪ್ರಾದೇಶಿಕ ಕಾರ್ಯಾಲಯಗಳಿಗೆ ಕಳುಹಿಸುತ್ತಾರೆ. ಮಾರ್ಗದರ್ಶನದಲ್ಲಿ ವಿವಿಧ ಪ್ರದೇಶಗಳಲ್ಲಿ ಬ್ಯಾಂಕುಗಳ ಠೇವಣಿಗಳು ಮತ್ತು ಸಾಲಗಳನ್ನು ಕುರಿತು ಅಂದಿನ ಸ್ಥಿತಿ ಹಾಗೂ ನಿರೀಕ್ಷಿಸುವ ಬೆಳವಣಿಗೆಯ ದರವನ್ನು ಸೂಚಿಸಿರುತ್ತಾರೆ.

(ಊ) ಪ್ರಧಾನ ಕಛೇರಿಯ ಮಾರ್ಗದರ್ಶನಗಳನ್ನಾಧರಿಸಿ ಪ್ರಾದೇಶಿಕ ಕಾರ್ಯಾಲಯದವರು ತಮ್ಮ ಚಟುವಟಿಕೆಗಳ ಮಾರ್ಗದರ್ಶನಗಳನ್ನು ರೂಪಿಸಿ, ಸಾಧನಾ ಮುಂಗಡಪಟ್ಟಿಯ ನಮೂನೆಯ ಜೊತೆಗೆ ಶಾಖಾ ಬ್ಯಾಂಕುಗಳಿಗೆ ಕಳುಹಿಸುತ್ತಾರೆ. ಇದನ್ನಾಧರಿಸಿ ಶಾಖೆಗಳು ತಮ್ಮ ಚಟುವಟಿಕೆಗಳಿಗನ್ವಯಿಸುವಂತೆ ಮುಂಗಡಪಟ್ಟಿಯನ್ನು ತಯಾರಿಸಿ, ಸಾಧನಾ ಮುಂಗಡಪಟ್ಟಿಯ ಅಚ್ಚಾದ ನಮೂನೆಯಲ್ಲಿ ಭರ್ತಿಮಾಡಿ ಪ್ರಾದೇಶಿಕ ಕಾರ್ಯಾಲಯಕ್ಕೆ ಕಳುಹಿಸಬೇಕು.

ಸಾಧನಾ ಮುಂಗಡಪಟ್ಟಿಯ ಅಚ್ಚಾದ ನಮೂನೆಯಲ್ಲಿ ಈ ವಿವರಗಳಿರುತ್ತವೆ :

ಎಲ್ಲ ಅಂಶಗಳಿಗೂ ಮೂರು ವರ್ಷದ ಅಂಕಿಗಳನ್ನು ತೋರಿಸಲಾಗುತ್ತದೆ. ಅಂದರೆ 1992–93 ಮುಂಗಡಪಟ್ಟಿಯ ಅವಧಿಯಲ್ಲಿ ತ್ರೈಮಾಸಿಕವಾಗಿ ಸಾಧಿಸಬೇಕಾಗಿರುವ ಅಂದಾಜಿನ ಅಂಕಿಗಳು, 1991–92ರ ವಾರ್ಷಿಕ ಅಂದಾಜಿನ ಅಥವಾ ಪುನರ್ನಿರ್ಧಾರಿತ ಅಂಕಿಗಳು, 1990–91ರ ವಾಸ್ತವ ಅಂಕಿಗಳು. ನಮೂನೆಯಲ್ಲಿ ಈ ಕೆಳಗಿನ ಅಂಶಗಳಿರುತ್ತವೆ :

1 ವಿವಿಧ ರೀತಿಯ ಠೇವಣಿ ಸಂಗ್ರಹಣೆಯಲ್ಲಿ ಸಾಧನೆಗಳು ಹಾಗೂ ಗುರಿಗಳು,
2 ಸಾಲ ನೀಡಿಕೆಯಲ್ಲಿ — ಆಹಾರಗಳಿಗೆ, ಆಹಾರೇತರಗಳಿಗೆ, ಆದ್ಯತಾವಲಯಕ್ಕೆ, ಸಾಮಾನ್ಯ ವಲಯಕ್ಕೆ, ರಫ್ತು ವ್ಯಾಪಾರಕ್ಕೆ, ಭಿನ್ನಕ ಬಡ್ಡಿ ದರದ ಯೋಜನೆಗೆ,
3 ಆದ್ಯತಾವಲಯದಲ್ಲಿ—ಕೃಷಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ದರಿ, ಸಣ್ಣ ಉದ್ಯಮಗಳು ಮತ್ತು ಉದ್ಯಮದ ಬಡಾವಣೆಗಳಿಗೆ, ಸಾರಿಗೆ, ಇತರೆ,
4 ಅನುಪಾತಗಳು—ಠೇವಣಿಗೆ ಉದ್ದರಿಯ ಅನುಪಾತ ಮತ್ತು ಉದ್ದರಿಗೆ ಆದ್ಯತಾವಲಯದ ಅನುಪಾತ,
5 ಲಾಭಗಳಿಕೆ—ಸಾಲ ನೀಡಿಕೆಯಿಂದ ಗಳಿಸಿದ ಬಡ್ಡಿ, ಪ್ರಧಾನ ಕಛೇರಿಯಿಂದ ಗಳಿಸಿದ ಬಡ್ಡಿ, ಇತರ ಗಳಿಕೆಗಳು,
6 ವೆಚ್ಚಗಳು—ಠೇವುಗಳಿಗೆ ಕೊಡಬೇಕಾದ ಬಡ್ಡಿ, ಪ್ರಧಾನ ಕಛೇರಿಗೆ ಕೊಡಬೇಕಾದ ಬಡ್ಡಿ, ಸಂಬಳಗಳು, ಭತ್ಯೆಗಳು ಮತ್ತಿತರ ಖರ್ಚುಗಳು,
7 ಲಾಭ ಅಥವಾ ನಷ್ಟ,
8 ಬಂಡವಾಳದ ವೆಚ್ಚಗಳು—ಕಟ್ಟಡಗಳು, ಪೀಠೋಪಕರಣ, ಮತ್ತಿತರೆ,
9 ಮಾನವ ಶಕ್ತಿ—ಹಿರಿಯ ಅಧಿಕಾರಿಗಳು, ಗುಮಾಸ್ತರು, ಇತರರು,
10 ವಸೂಲಾದ ಋಣಗಳು, ಅನುಮಾನದ ಋಣಗಳು ಮತ್ತು ಕರಡು ಋಣಗಳು.

ಅಗತ್ಯವಿದ್ದಲ್ಲಿ ಆಯಾ ಶಾಖೆಗಳ ವಿಶೇಷ ವಿವರಗಳನ್ನು ಸಾಧನಾ ಮುಂಗಡಪಟ್ಟಿಯಲ್ಲಿ ತೋರಿಸಲಾಗುತ್ತದೆ.

(ii) ಶಾಖಾ ಕಛೇರಿಯ ಮಟ್ಟದಲ್ಲಿ

ಶಾಖಾ ವ್ಯವಸ್ಥಾಪಕರು ಶಾಖೆಯ ವ್ಯವಹಾರದ ಮುಂಗಡಪಟ್ಟಿಯನ್ನು ಪ್ರಥಮವಾಗಿ ತಯಾರಿಸಿ, ಪ್ರಾದೇಶಿಕ ವ್ಯವಸ್ಥಾಪಕರ ಅಭಿಪ್ರಾಯಗಳನ್ನು ತಿಳಿದು ಕೊನೆಗೆ ಮುಂಗಡಪಟ್ಟಿಯನ್ನು ಅಂಗೀಕರಿಸುತ್ತಾರೆ. ಸಾಧನಾ ಮುಂಗಡಪಟ್ಟಿಯ ಕಾರ್ಯಕ್ರಮಗಳಿಗಾಗಿ ಸಂಘಟಿಸಿ ಅದನ್ನು ಅನುಷ್ಠಾನಕ್ಕೆ ತರಲು ಶಾಖಾವ್ಯವಸ್ಥಾಪಕರು ಹೊಣೆಗಾರರಾಗಿ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ. ಶಾಖಾ ಬ್ಯಾಂಕಿನ ವ್ಯವಹಾರಕ್ಕೆ ಸಾಧನಾ ಮುಂಗಡಪಟ್ಟಿಯ ತಯಾರಿಕೆಯ ಕ್ರಮಗಳು ಹೀಗಿವೆ :

1 ಅಧೀನ ಕ್ಷೇತ್ರದ ಗುರುತಿಸುವಿಕೆ—ಶಾಖಾ ವ್ಯವಸ್ಥಾಪಕರು, ಸಿಬ್ಬಂದಿಯವರು ಸೇರಿ ಚರ್ಚಿಸಿ, ಈಗಿನ ವ್ಯವಹಾರದ ಕ್ಷೇತ್ರಗಳ ಜೊತೆಗೆ ಇತರ ವ್ಯವಹಾರಗಳಿಗೆ ಸಾಧ್ಯತೆ ಇರುವ ಕ್ಷೇತ್ರಗಳನ್ನು ಪರಿಗಣಿಸಿ, ಮುಂಗಡಪಟ್ಟಿಯ ಅವಧಿಯಲ್ಲಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಸಾಧ್ಯತೆ ಇರುವ ಮುಖ್ಯ ಕ್ಷೇತ್ರವನ್ನು ನಿರ್ಧರಿಸುತ್ತಾರೆ.

2 ಭವಿಷ್ಯದ ಗ್ರಾಹಕರ ಗುರುತಿಸುವಿಕೆ—ಶಾಖಾವ್ಯವಸ್ಥಾಪಕರು ಹೊಸ ವ್ಯವಹಾರದ ಅವಕಾಶಗಳನ್ನು ಪರಿಣಾಮಕಾರಿಯಾಗಿ ಹುಡುಕಲು ಈ ಕ್ರಮಗಳನ್ನು ಕೈಗೊಳ್ಳುತ್ತಾರೆ :

(ಅ) ಅಧೀನ ಕ್ಷೇತ್ರದ ಪ್ರತಿ ವಿಭಾಗದ ಜನರ ವೃತ್ತಿಗಳು—ಕೃಷಿಕರು, ವ್ಯಾಪಾರಿಗಳು, ಸಣ್ಣ ಉದ್ದಿಮೆದಾರರು, ಸಂಬಳವರ್ಗದವರು, ಸರ್ಕಾರಿ ಕಾರ್ಯಾಲಯಗಳು ಮತ್ತು ಇತರ ವಿವರಗಳನ್ನು ಸಂಗ್ರಹಿಸುತ್ತಾರೆ.

(ಆ) ಶಾಖೆಯ ಗ್ರಾಹಕರನ್ನು ಮತ್ತು ಗ್ರಾಹಕರಲ್ಲದವರನ್ನು ಬೇರ್ಪಡಿಸುತ್ತಾರೆ :

(ಇ) ಶಾಖೆಯ ಗ್ರಾಹಕರಾಗದಿರುವುದಕ್ಕೆ ಕಾರಣಗಳನ್ನು ಹೀಗೆ ವಿಶ್ಲೇಷಿಸುತ್ತಾರೆ—

(i) ಕೆಲವರು ಆ ಕ್ಷೇತ್ರದಲ್ಲಿರುವ ಬೇರೆ ಬ್ಯಾಂಕಿನ ಗ್ರಾಹಕರು.
(ii) ಕೆಲವರು ಆ ಕ್ಷೇತ್ರದಿಂದ ಹೊರಗಿರುವ ಬೇರೆ ಬ್ಯಾಂಕುಗಳ ಗ್ರಾಹಕರು.
(iii) ಕೆಲವರು ತಮ್ಮ ಉಳಿತಾಯಗಳನ್ನು ಬೇರೆ ಸಂಸ್ಥೆಗಳಲ್ಲಿ ಹೂಡುತ್ತಿರುವವರು.
(iv) ಕೆಲವರಿಗೆ ಹೂಡಿಕೆಗೆ ಉಳಿತಾಯವೇ ಇಲ್ಲ.

ಅನಂತರ ಶಾಖಾವ್ಯವಸ್ಥಾಪಕರು, ಸಿಬ್ಬಂದಿಯವರು ಸೇರಿ ಚರ್ಚಿಸಿ ಅಧೀನ ಕ್ಷೇತ್ರದ ಜನರಿಂದ ಗರಿಷ್ಠ ವ್ಯಾಪಾರವನ್ನು ಗಳಿಸಲು ಯುಕ್ತವಾದ ತಂತ್ರಗಳನ್ನು ರೂಪಿಸುತ್ತಾರೆ.

3 ವ್ಯವಹಾರದ ಗುರಿಗಳ ನಿರ್ಧರಿಸುವಿಕೆ—ಶಾಖೆಯ ಕಾರ್ಯರಂಗದ ಪರಿಸರವನ್ನು ಹಾಗೂ ಪ್ರಾದೇಶಿಕ ಬ್ಯಾಂಕಿನ ಗುರಿಗಳನ್ನು ಗಮನದಲ್ಲಿರಿಸಿ ಶಾಖೆಯ ವ್ಯವಹಾರದ ಗುರಿಗಳನ್ನು ನಿರ್ಧರಿಸುತ್ತಾರೆ. ಠೇವಣಿಗಳ, ಸಾಲಗಳ, ವೆಚ್ಚಗಳ (ಮಾನವಶಕ್ತಿ, ಭೌತಿಕ ಸೌಲಭ್ಯಗಳು, ಇತರೆ) ಮತ್ತು ಲಾಭದ ಮುಂಗಡಪಟ್ಟಿಗಳನ್ನು ಪ್ರತ್ಯೇಕವಾಗಿ ತಯಾರಿಸುತ್ತಾರೆ.

ಠೇವಣಿಗಳ ಮುಂಗಡಪಟ್ಟಿ ಮತ್ತು ಸಾಲಗಳ ಮುಂಗಡಪಟ್ಟಿಗಳನ್ನು ತಯಾರಿಸುವಾಗ ಪರಿಗಣಿಸುವ ಅಂಶಗಳು ಹೀಗಿವೆ: ಈಗಿರುವ ಖಾತೆಗಳ ಹಿಂದಿನ ವರ್ತನೆಗಳು, ಹೊಸ ವ್ಯವಹಾರಗಳಿಂದ ಹೆಚ್ಚುವರಿಯ ಸಾಧ್ಯತೆಗಳು, ಈಗಿರುವ ಠೇವಣಿದಾರರ ಬೆಳವಣಿಗೆಗಳಿಂದಾಗುವ ಏರಿಕೆ, ಈಗಿನ ಸಾಲಗಾರರ ಆವಶ್ಯಕತೆಗಳಲ್ಲಿ ಏರಿಕೆ.

ಶಾಖೆಯ ಲಾಭದ ಮುಂಗಡಪಟ್ಟಿಯು ಅಂದಾಜು ಮಾಡಿರುವ ವ್ಯವಹಾರದಿಂದ ನಿರೀಕ್ಷಿಸುವ ಆಯ-ವ್ಯಯಗಳನ್ನು ತೋರಿಸುತ್ತದೆ. ಅವು ಸಾಲಗಳಿಂದ ಬಡ್ಡಿಗಳಿಕೆ, ಪೂರಕ ಸೇವೆಗಳಿಂದ ಗಳಿಕೆಗಳು, ಮತ್ತಿತರ ಗಳಿಕೆಗಳು, ಹಾಗೂ ಠೇವಣಿಗಳಿಗೆ ತೆರಬೇಕಾದ ಬಡ್ಡಿ, ಸಂಘಟನೆಯ ವೆಚ್ಚಗಳು, ಮತ್ತಿತರ ವೆಚ್ಚಗಳ ವಿವರಗಳು.

ಶಾಖೆಯ ವೆಚ್ಚಗಳ ಮುಂಗಡಪಟ್ಟಿಯಲ್ಲಿ ಅಂದಾಜು ಮಾಡಿರುವ ವ್ಯವಹಾರಕ್ಕೆ ಆವಶ್ಯಕವಾಗಿರುವ ಹೆಚ್ಚುವರಿ ಸಿಬ್ಬಂದಿಗಳು ಮತ್ತಿತರ ಸೌಲಭ್ಯಗಳ ವಿವರಗಳಿರುತ್ತವೆ. ಅನೇಕ ಬಾರಿ ಹೆಚ್ಚುವರಿ ವೆಚ್ಚಗಳಿಗೆ ತಗಾದೆ ಇರದಿರಬಹುದು, ಶಾಖೆಯ ಕಾರ್ಯದಕ್ಷತೆಯನ್ನು ಮತ್ತು ಲಾಭವನ್ನು ಹೆಚ್ಚಿಸಲು ಹೆಚ್ಚಳವಾಗಿರುವ ಸಿಬ್ಬಂದಿಗಳನ್ನು ಅಧ್ಯರ್ಪಣ ಮಾಡಬಹುದು.

4 ಕಾರ್ಯಗಳಲ್ಲಿ ಆದ್ಯತೆಗಳ ನಿರ್ಧರಿಸುವಿಕೆ—ನಿರ್ದಿಷ್ಟ ಸಾಧನೆಯ ಗುರಿಗಳನ್ನು, ಶಾಖೆಯ ಮುಂಗಡಪತ್ರವನ್ನು, ಕೈಗೊಳ್ಳಬೇಕಾದ ತಂತ್ರಗಳನ್ನು ಹಾಗೂ ಶಾಖೆಯ ಆವಶ್ಯಕತೆಗಳು ಮತ್ತು ಸಮಸ್ಯೆಗಳನ್ನು ಪರಿಗಣಿಸಿ ಶಾಖೆಯ ವ್ಯವಸ್ಥಾಪಕರು ಕಾರ್ಯಗಳಲ್ಲಿ ಆದ್ಯತೆಗಳನ್ನು ನಿರ್ಧರಿಸಬೇಕಾಗಿದೆ. ಇದರಿಂದ ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ಗುರಿಗಳನ್ನು ಸಾಧಿಸಲು ಮಾರ್ಗದರ್ಶನ ಸಿಗುತ್ತದೆ.

5 ಸುವ್ಯವಸ್ಥಿತ ಸಂಪರ್ಕಗಳ ಅಭಿವೃದ್ಧಿ—ಶಾಖೆಯ ವ್ಯವಸ್ಥಾಪಕರು ಹಾಗೂ ಪ್ರಾದೇಶಿಕ ವ್ಯವಸ್ಥಾಪಕರ ನಡುವೆ ಸಂಪರ್ಕಗಳು ಮುಂದುವರಿಯುತ್ತಿದ್ದರೆ ಕಾಲದಿಂದ ಕಾಲಕ್ಕೆ ಸಾಧಿಸಿದ ಗುರಿಗಳ ವಿವರಗಳನ್ನು ಶಾಖೆಯು ಪ್ರಾದೇಶಿಕ ಕಾರ್ಯಾಲಯಕ್ಕೆ ತಿಳಿಸಬಹುದು. ಅನಂತರ ಪ್ರಾದೇಶಿಕ ವ್ಯವಸ್ಥಾಪಕರು ಸಾಧಿಸಿರುವ ಪ್ರಗತಿಯನ್ನು ವಿಶ್ಲೇಷಿಸಿ ಅವರ ಅಭಿಪ್ರಾಯಗಳನ್ನು, ಸಲಹೆಗಳನ್ನು ಭವಿಷ್ಯದ ಪ್ರಗತಿಗಾಗಿ ತಿಳಿಸುತ್ತಾರೆ.

6 ಮಧ್ಯಾವಧಿಯ ಅವಲೋಕನ—ಸಾಧನೆಗಳನ್ನು ನಿಯತಕಾಲಿಕವಾಗಿ (ಮಾಸಿಕ ಅಥವಾ ತ್ರೈಮಾಸಿಕ) ಅವಲೋಕಿಸುವುದರಿಂದ ಈ ಅನುಕೂಲಗಳಿರುತ್ತವೆ :

(i) ಜರೂರು ಕ್ರಮಗಳ ಆವಶ್ಯಕತೆ ಇರುವ ಸಂದಿಗ್ಧ ಕ್ಷೇತ್ರಗಳನ್ನು ಕಂಡುಹಿಡಿಯಬಹುದು.
(ii) ಗುರಿಗಳನ್ನು ತಲಪುವ ಸಾಧ್ಯತೆಗಳನ್ನು ನಿರ್ಧರಿಸಬಹುದು.
(iii) ಆಂತರಿಕ ಪರಿಸ್ಥಿತಿ ಹಾಗೂ ಬಾಹ್ಯ ಪರಿಸರದ ಬದಲಾವಣೆಗಳಿಗೆ ತಕ್ಕಂತೆ ಗುರಿಗಳಲ್ಲಿ ತಿದ್ದುಪಡಿಗಳನ್ನು ಮಾಡಬಹುದು.

(iv) ಪ್ರಾದೇಶಿಕ ಕಾರ್ಯಾಲಯವು ಶಾಖೆಗಳಿಗೆ ನೀಡುವ ಬೆಂಬಲದ ಸಾಧ್ಯತಾ ಮಟ್ಟವನ್ನು ನಿರ್ಧರಿಸಬಹುದು.

ಹೀಗೆ ಸಾಧನಾ ಮುಂಗಡಪಟ್ಟಿಯ ವ್ಯವಸ್ಥೆಯ ಮೂಲಕ ಕಛೇರಿಯಲ್ಲಿರುವ ಎಲ್ಲ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ತಮ್ಮ ಕೆಲಸದ ಉದ್ದೇಶಗಳನ್ನು ರೂಪಿಸುವ ಹಂತದಿಂದ ಅವುಗಳನ್ನು ಸಾಧಿಸುವ ವರೆಗೂ ಪಾಲ್ಗೊಳ್ಳಬೇಕಾಗುತ್ತದೆ. ಬ್ಯಾಂಕಿನ ನಿರ್ದಿಷ್ಟ ಗುರಿಗಳು ಹಾಗೂ ಸಂಘಟನೆಯ ಸಾಮಾನ್ಯ ಧ್ಯೇಯಗಳ ಸಾಧನೆಗಾಗಿ ಎಲ್ಲರೂ ಕಾರ್ಯ ನಿರ್ವಹಿಸುತ್ತಾರೆ. ಈ ರೀತಿಯ ಪರಿಪೂರ್ಣ ಸುವ್ಯವಸ್ಥೆಯಲ್ಲಿ ಸಹಜವಾಗಿ ಕೆಲಸಗಳು ಮುಂದುವರಿಯುತ್ತವೆ.

ಗ್ರಾಮೀಣ ಬ್ಯಾಂಕಿಂಗ್ ಸಮಸ್ಯೆಗಳು

1973ರಿಂದ 1988ರ ವರೆಗೆ ಸಾಮಾಜಿಕ ಬ್ಯಾಂಕಿಂಗ್ ಚಟುವಟಿಕೆಗಳಲ್ಲಿ ಅಧೀನ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಯೋಜಿಸಿ ಗ್ರಾಮಗಳಿಗೆ ಉದರಿಯನ್ನು ಒದಗಿಸಿ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಕರಡು ಋಣಗಳ ಭಾರದಿಂದ ಲಾಭಪ್ರದತೆಯನ್ನು ಕುಗ್ಗಿಸಿಕೊಂಡುವು. ಇದಲ್ಲದೆ ಸಣ್ಣ ಉದ್ಯಮಗಳ ಅಸ್ವಸ್ಥತೆಯಿಂದ ಅನುಮಾನ ಋಣಗಳು ಹೆಚ್ಚಿದುವು ; ಭಿನ್ನಕ ಬಡ್ಡಿದರದ ಯೋಜನೆಯಲ್ಲಿ ಉತ್ಪಾದನೆಗೆ ಬದಲಾಗಿ ಅನುಭೋಗಕ್ಕೆ ಉದ್ದರಿಯನ್ನು ಬಳಸಲಾಯಿತು ; ಯೋಜಿಸಿದಂತೆ ಆದ್ಯತಾವಲಯದಲ್ಲಿ ಪ್ರಗತಿಗೆ ಬದಲಾಗಿ ನಿರೀಕ್ಷಿಸದಂಥ ಸಮಸ್ಯೆಗಳು ಉದ್ಭವಿಸಿದವು ಎಂಬ ಕಟುಸತ್ಯವನ್ನು 15 ವರ್ಷಗಳ ಸಾಧನಾ ಮುಂಗಡಪಟ್ಟಿಗಳ ಅಂಕಿಗಳು ಮತ್ತು ವರದಿಗಳು ತೋರಿಸಿವೆ. ಒಂದೇ ರೀತಿಯ ಸೇವೆ ಸಲ್ಲಿಸುವ ಹಲವಾರು ಬ್ಯಾಂಕುಗಳ ಮತ್ತು ಇತರ ಹಣಕಾಸಿನ ಸಂಸ್ಥೆಗಳ ನಡುವೆ ಹಾನಿಕಾರಕ ಪೈಪೋಟಿ ಹೆಚ್ಚಿ ಬ್ಯಾಂಕುಗಳಿಗೆ ನಷ್ಟವಾಗಿ ಯೋಗ್ಯ ಗ್ರಾಹಕರಿಗೆ ಯೋಜನೆಯ ಫಲ ಸಿಗದಂತಾಯಿತು. ಆದ್ದರಿಂದ 1988ರ ಜನವರಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಸಾರ್ವಜನಿಕ, ಖಾಸಗಿ, ಸಹಕಾರಿ ವಲಯಗಳ ಬ್ಯಾಂಕಿನ ಅಧಿಕಾರಿಗಳು, ಸರ್ಕಾರದ ಅಧಿಕಾರಿಗಳು, ಸಚಿವರು ಭಾಗವಹಿಸಿ ಗ್ರಾಮೀಣ ಸಾಲಗಳ ಸಮರ್ಥ ವಿತರಣೆ, ನಿರ್ವಹಣೆ, ಉತ್ಪಾದಕತೆ, ಆರ್ಥಿಕ ವರಮಾನದ ಹೆಚ್ಚಳ ಇತ್ಯಾದಿ ಅಂಶಗಳನ್ನೊಳಗೊಂಡಂತೆ ವ್ಯಾಪಕವಾಗಿ ಚರ್ಚಿಸಿ, ಗ್ರಾಮೀಣ ಪ್ರದೇಶಗಳನ್ನು ಪ್ರಧಾನವಾಗಿ ಉಳ್ಳ ಶಾಖೆಗಳಿಗೆ ನಿರ್ದಿಷ್ಟ ಸೇವಾಕ್ಷೇತ್ರವನ್ನು ವಿಂಗಡಿಸಿ, ಆಯಾ ಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ, ಗ್ರಾಮೀಣ ಸಾಲಗಳ ಹೆಚ್ಚು ಉತ್ಪಾದಕತೆಗೆ ಅವಕಾಶ ನೀಡಬೇಕೆಂದು ಸಂಕಿರಣದಲ್ಲಿ ತೀರ್ಮಾನಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿರುವ ಬ್ಯಾಂಕುಗಳಿಗೆ ಹೊಸ ಅಭಿಗಮನದ ಆವಶ್ಯಕತೆಯನ್ನು ಎಲ್ಲರೂ ಒಪ್ಪಿದರು.

ಬ್ಯಾಂಕುಗಳ ಗ್ರಾಮಾಭಿವೃದ್ಧಿಯ ಚಟುವಟಿಕೆಗಳಿಗೆ "ಸೇವಾ ಕ್ಷೇತ್ರ ಅಭಿಗಮನ"ವನ್ನು ಪರಿಚಯಿಸಲು ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗೌರ್ನರ್ ಡಾ. ಓಝಾರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ, ಸಮಿತಿಯ ವರದಿ ಮತ್ತು ಶಿಫಾರಸ್ಸಿನಂತೆ ಯೋಜನೆಯನ್ನು 1989ರಿಂದ ಜಾರಿಗೆ ತರಲಾಯಿತು. ಈ ಯೋಜನೆಯಡಿಯಲ್ಲಿ ಹಿಂದುಳಿದ, ಮುಂದುವರಿದ, ಸಣ್ಣ ಹಾಗೂ ದೊಡ್ಡ ಹಳ್ಳಿಗಳು ಬರುತ್ತವೆ. ಈ ಯೋಜನೆಯ ಕಾರ್ಯಗತಿ ಹಳ್ಳಿಯಿಂದ ಪ್ರಾರಂಭವಾಗಿ ಜಿಲ್ಲಾ ಹಾಗೂ ರಾಷ್ಟ್ರಮಟ್ಟಕ್ಕೆ ಏರುತ್ತದೆ. ಬ್ಯಾಂಕುಗಳೇ ಹಳ್ಳಿಯ ಪೂರ್ಣ ಮಾಹಿತಿ ಸಂಗ್ರಹಿಸುವುದರಿಂದ ಸಾಲ ನೀಡುವುದು ಸುಲಭ ಮತ್ತು ಒಂದು ಉದ್ಯಮಕ್ಕೆ ಬ್ಯಾಂಕು ಸಾಲ ನೀಡುವುದರ ಔಚಿತ್ಯದ ಬಗ್ಗೆ ಸರಿಯಾದ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಯಾವ ವ್ಯಾಪಾರ, ಉದ್ಯಮಕ್ಕೂ ಆವಶ್ಯಕತೆಗಿಂತ ಹೆಚ್ಚು ಉದರಿ ದೊರಕುವುದಿಲ್ಲ. ಬ್ಯಾಂಕು ತನ್ನ ಸೇವಾಕ್ಷೇತ್ರದಲ್ಲಿರುವ ಹಳ್ಳಿಗಳಿಗೆ ಮಾತ್ರ ಸಾಲ ನೀಡುವುದರಿಂದ, ಸಾಲದ ಉಪಯೋಗವನ್ನು ಮೇಲ್ವಿಚಾರಣೆಯ ಮೂಲಕ ನಿಯಂತ್ರಿಸಿ, ಮರುಪಾವತಿಯಲ್ಲಿರುವ ಅನಿಶ್ಚಿತತೆಯನ್ನು ಹೋಗಲಾಡಿಸಬಹುದು. ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಪ್ರತಿಯೊಂದು ಹಳ್ಳಿಯ ವಾರ್ಷಿಕ ಉದರಿ ಯೋಜನೆಯನ್ನು ತಯಾರಿಸುವಾಗ ಅಲ್ಲಿನ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ, ಸ್ವಯಂ ಉದ್ಯೋಗ ಯೋಜನೆಗಳ ಕಾರ್ಯಕ್ರಮಗಳನ್ನು ಸೇರಿಸಲಾಗುತ್ತದೆ. ಸರ್ಕಾರದ ಸೂಚನೆಯಂತೆ ಆದ್ಯತಾವಲಯಗಳಲ್ಲೂ ಬದಲಾವಣೆಗಳಾಗಿವೆ. ಆದ್ದರಿಂದ 1990ರ ಅನಂತರ ಸಾರ್ವಜನಿಕ ಬ್ಯಾಂಕುಗಳ ಸಾಧನಾ ಮುಂಗಡಪಟ್ಟಿಯಲ್ಲೂ ಸೇವಾಕ್ಷೇತ್ರ ಅಭಿಗಮನಕ್ಕೆ ತಕ್ಕಂತೆ ಅಂಶಗಳಲ್ಲಿ ಬದಲಾವಣೆಗಳಾಗಿವೆ. ಈ ಅಭಿಗಮನದ ಫಲಶ್ರುತಿಗಳನ್ನು ತಿಳಿಯಲು 5 ವರ್ಷಗಳಾದರೂ ಬೇಕು.

ಹೊಂದಾಣಿಕೆ

ಎಂಟನೆಯ ಪಂಚವಾರ್ಷಿಕ ಯೋಜನೆಯು ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಹೊಸ ತಿರುವಿನ ಕಾಲವಾಗಿದೆ. ಅಂತೆಯೇ ಆರ್ಥಿಕ ಸಂರಚನೆಯಲ್ಲಿ ಹೊಂದಾಣಿಕೆಯ ಕಾರ್ಯಕ್ರಮಗಳಿಗೆ ಪ್ರಾಮುಖ್ಯವನ್ನು ಕೊಟ್ಟು ಸರ್ಕಾರದ ಎಲ್ಲ ನೀತಿಗಳಲ್ಲೂ ನಿರ್ಬಂಧಗಳನ್ನು ತೆಗೆದು ಮುಕ್ತ ನೀತಿಯನ್ನು ಒಲಿದಿದೆ. ಭವಿಷ್ಯದಲ್ಲಿ ಅಭಿವೃದ್ಧಿ ಹೊಂದಲು ಮುಕ್ತ ಮಾರುಕಟ್ಟೆಯ ಆರ್ಥಿಕತೆಯನ್ನು ಬೆಂಬಲಿಸಿದೆ. ಅರ್ಧ ಶತಮಾನದಿಂದ ಕಾರ್ಯಗತವಾಗಿದ್ದ ಭಾರಿ ಮತ್ತು ಸಣ್ಣ ಉದ್ದಿಮೆಗಳಲ್ಲಿ ಹಿಂಜರಿತ, ಅಸ್ವಸ್ಥತೆ, ಅವ್ಯವಸ್ಥೆ, ನಷ್ಟಗಳು ತಲೆದೋರಿ ಕುಸಿಯುತ್ತಿವೆ. ಹೀಗಿದ್ದರೂ ಕೃತಕ ಉಪಗ್ರಹಗಳ ಮೂಲಕ ದೂರಸಂಪರ್ಕಗಳಲ್ಲಾಗುತ್ತಿರುವ ಕ್ರಾಂತಿಯಿಂದ ಅಂತರರಾಷ್ಟ್ರೀಯತೆಯ ಗಾಳಿ ಬೀಸಿ, ಗಣಕೀಕರಣದ ಅಲೆಯಿಂದೆದ್ದ ಸಾಹಸೋದ್ಯಮಗಳು, ನವ ಉದ್ಯಮಗಳು ಮತ್ತು ವ್ಯಾಪಾರಗಳಿಗೆ ನಮ್ಮ ಆರ್ಥಿಕತೆಯ ಮತ್ತು ಮಾರುಕಟ್ಟೆಯ ಬಾಗಿಲನ್ನು ತೆರೆದಾಗಿದೆ. ಆದ್ದರಿಂದ ವಾಣಿಜ್ಯ ಬ್ಯಾಂಕುಗಳ, ಮತ್ತಿತರ ಹಣಕಾಸಿನ ಸಂಸ್ಥೆಗಳ ಉದರಿ ನೀತಿ ಮತ್ತು ಯೋಜನೆಗಳಲ್ಲಿ ಬಹಳ ಹೊಂದಾಣಿಕೆಗಳನ್ನು, ಬದಲಾವಣೆಗಳನ್ನು ಮಾಡಬೇಕಾಗಿದೆ.

ಶೂನ್ಯಾಧಾರ ಮುಂಗಡ ಪಟ್ಟಿ

ಹೀಗೆ ರಚನಾತ್ಮಕ ಕಾರ್ಯಗಳು ಸಾಗಿದ್ದರೂ ವಿಶ್ವದಲ್ಲಿ ಪ್ರಲಯಕಾರಿ ಚಟುವಟಿಕೆಗಳಿಂದ ಪ್ರಬಲ ರಾಷ್ಟ್ರಗಳ ಬೇರುಗಳನ್ನು ಕಿತ್ತೆಸೆಯುವ ಸಾಹಸಗಳೂ ನಡೆಯುತ್ತಿವೆ. ಅವುಗಳಲ್ಲಿ ಮುಖ್ಯವಾದವು ಪ್ರಕೃತಿಯಲ್ಲಿ ಅಸಮತೋಲನಕ್ಕೆ, ಪರಿಸರದ ಮಲಿನತೆಗೆ ಕಾರಣವಾಗಿರುವ ಆರ್ಥಿಕ ಚಟುವಟಿಕೆಗಳು, ಸಮರಗಳ ಜನನಿಗೆ ಒದಗಿಸುತ್ತಿರುವ ನೆಲೆಗಳು, ಭಯೋತ್ಪಾದಕರ ತಂತ್ರಗಳಿಂದಾಗಿರುವ ರುದ್ರಭೂಮಿಗಳು ಮತ್ತು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಹಣಪೇಟೆಯಲ್ಲಿ ಹಗರಣಗಳು, ವಂಚನೆಯ ಜಾಲಗಳು. ಇಂಥ ಸನ್ನಿವೇಶದಲ್ಲಿ ಅನಿಶ್ಚಿತತೆಯು ಸರ್ವವ್ಯಾಪಿಯಾಗಿರುವುದರಿಂದ ಆರ್ಥಿಕ ಚಟುವಟಿಕೆಗಳ ಮುಂದುವರಿಕೆಗೆ ಧಕ್ಕೆಯುಂಟಾಗಿದೆ. ಹೀಗಿದ್ದರೂ ಉತ್ಪಾದನೆ, ವಿತರಣೆ ಮತ್ತು ಅನುಭೋಗದ ಪ್ರಕ್ರಿಯೆಯು ನಿರಂತರವಾಗಿ ಸಾಗಲೇಬೇಕು. ಅನಿಶ್ಚಿತತೆಯ ಕಾಲದಲ್ಲೂ ವ್ಯವಹಾರಗಳನ್ನು ಯೋಜಿಸಿ ಮುಂಗಡಪತ್ರವನ್ನು ತಯಾರಿಸಲು ಹೊಸ ತಂತ್ರವನ್ನು ರೂಪಿಸಿದ್ದಾರೆ. ವ್ಯವಸ್ಥಾಪನಾ ತಜ್ಞರು ಶೂನ್ಯಾಧಾರ ಮುಂಗಡಪಟ್ಟಿಯ ತಂತ್ರವನ್ನು ಹಲವಾರು ಸಂಸ್ಥೆಗಳಲ್ಲಿ ಪರಿಚಯಿಸಿ ಪ್ರಯೋಗ ನಡೆಸುತ್ತಿದ್ದಾರೆ.

ಸಾಧನಾ ಮುಂಗಡಪಟ್ಟಿಯ ತಯಾರಿಕೆಯು ಮುಂದುವರಿಯುವಿಕೆಯ ತತ್ವವನ್ನಾಧರಿಸಿದೆ. ಆದರೆ ಶೂನ್ಯಾಧಾರ ಮುಂಗಡ ಪಟ್ಟಿಯ ತಯಾರಿಕೆಗೆ ಹಿಂದಿನ ಅಂಕಿ ಅಂಶಗಳನ್ನು ಪರಿಗಣಿಸುವುದಿಲ್ಲ. ಪ್ರತಿ ವರ್ಷವೂ ಲಭ್ಯವಿರುವ ಸಂಪನ್ಮೂಲಗಳನ್ನಾಧರಿಸಿ ತಯಾರಿಸುತ್ತಾರೆ. ತಜ್ಞರ ಅಭಿಪ್ರಾಯದಂತೆ ಮುಂಗಡಪಟ್ಟಿಯ ಪ್ರಕಾರ ವೆಚ್ಚವಾಗುವ ಪ್ರತಿ ರೂಪಾಯಿಯೂ ನ್ಯಾಯಬದ್ಧವಾಗಿರಬೇಕು. ಸಾಂಪ್ರದಾಯಿಕ ಮುಂಗಡಪಟ್ಟಿಯಲ್ಲಿ ಹಿಂದಿನ ವರ್ಷದ ಖರ್ಚುಗಳನ್ನು ಈ ವರ್ಷದಲ್ಲೂ ಸೇರಿಸಿರುತ್ತಾರೆ ಮತ್ತು ಹೆಚ್ಚುವರಿ ಖರ್ಚನ್ನು ಮಾತ್ರ ತರ್ಕಿಸಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಈ ಪದ್ಧತಿಯಲ್ಲಿ ಹೊಣೆಯ ಕೇಂದ್ರದ ವ್ಯವಸ್ಥಾಪಕನಿಗೆ ಹಿಂದೆ ಖರ್ಚುಗಳಿರಲಿಲ್ಲವೆಂದು ಭಾವಿಸಲಾಗಿದೆ. ಸಹಾಯಕ ಮುಂಗಡಪಟ್ಟಿಗಳನ್ನು ವರಿಷ್ಠ ಮುಂಗಡಪಟ್ಟಿಯಲ್ಲಿ ಸೇರಿಸಲು ಅಥವಾ ಕೈಬಿಡಲು ಅವುಗಳನ್ನು ಅವಲೋಕಿಸುವ, ವಿಶ್ಲೇಷಿಸುವ ಹಾಗೂ ಮೌಲ್ಯಾಂಕನ ಮಾಡುವ ಆವಶ್ಯಕತೆ ಇರುತ್ತದೆ. ಉದ್ದೇಶದ ಸಫಲತೆಗಾಗಿ ಪ್ರತಿ ಮುಂಗಡಪಟ್ಟಿಯಲ್ಲೂ ಈ ಅಂಶಗಳು ಇರಲೇಬೇಕು :

(ಅ) ಪ್ರತಿಯೊಂದು ಚಟುವಟಿಕೆಯ ವಿವರಗಳು,

(ಆ) ನಿರ್ಣಯಗಳ ಸಂವೇಷ್ಟನಗಳು,

(ಇ) ವೆಚ್ಚಾನುಕೂಲಗಳ ದೃಷ್ಟಿಯಿಂದ ನಿರ್ಣಯಗಳ ಮೌಲ್ಯಾಂಕನ,

(ಈ) ಪ್ರಾಮುಖ್ಯದ ಪ್ರಕಾರ ನಿರ್ಣಯಗಳ ಶ್ರೇಣೀಕರಣ.

ಶೂನ್ಯಾಧಾರ ಮುಂಗಡಪಟ್ಟಿಯ ತಂತ್ರ

ಶೂನ್ಯಾಧಾರ ತಂತ್ರದ ಪ್ರಕಾರ ಮುಂಗಡಪಟ್ಟಿಯನ್ನು (Zero-Based Budget) ತಯಾರಿಸಲು ನಾಲ್ಕು ಹಂತಗಳಿವೆ :

(i) ನಿರ್ಣಯದ ಒಂದು ಅಂಶವು ಕಾರ್ಯರಂಗದ ಹೊಣೆಯ ಕೇಂದ್ರ ಅಥವಾ ವೆಚ್ಚ ಕೇಂದ್ರವಾಗಿರುವುದನ್ನು ಗುರುತಿಸಿ, ನಿರ್ದಿಷ್ಟ ಉದ್ದೇಶಗಳಿಗೆ ಹೊಂದುವಂತಿರುವ ಅಂಶಗಳನ್ನು ಗುಂಪುಗಳಾಗಿ ವಿಂಗಡಿಸಿ, ವಿಶ್ಲೇಷಿಸಿದ ಅನಂತರ ನಿರ್ಣಯಕ್ಕೆ ಸಿದ್ಧಪಡಿಸಬೇಕು.

(ii) ಹೊಣೆಗಾರ ವ್ಯವಸ್ಥಾಪಕರು ನಿರ್ಣಯದ ಸಂವೇಷ್ಟನಗಳನ್ನು ತಯಾರಿಸುವುದೇ ಎರಡನೆಯ ಹಂತ. ಇದು ಶೂನ್ಯಾಧಾರ ಮುಂಗಡಪಟ್ಟಿ ಪದ್ಧತಿಯ ಬೆನ್ನೆಲುಬಾಗಿದೆ. ಪ್ರತಿ ನಿರ್ಣಯವೂ ನಿರ್ದಿಷ್ಟ ಚಟುವಟಿಕೆಯನ್ನು ಗುರುತಿಸಿ, ವಿವರಗಳನ್ನು ನೀಡುತ್ತದೆ. ಇದರ ಸಹಾಯದಿಂದ ವ್ಯವಸ್ಥಾಪಕರು ನಿರ್ಣಯದ ಮೌಲ್ಯಾಂಕನ ಮಾಡಿ, ಇತರ ಕಾರ್ಯಗಳಿಂದಿರುವ ಪೈಪೋಟಿಯನ್ನು ಪರಿಗಣಿಸಿ, ತುಟ್ಟಿಯಾಗಿರುವ ಸಂಪನ್ಮೂಲಗಳನ್ನು ಒದಗಿಸಲು ಶ್ರೇಣೀಕರಿಸುತ್ತಾರೆ. ಒಂದು ನಿರ್ಣಯವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ವಿಚಾರವನ್ನು ನಿರ್ಧರಿಸುತ್ತಾರೆ. ಒಂದು ನಿರ್ಣಯಾಂಶದ ಮೌಲ್ಯಾಂಕನಕ್ಕೆ ಅಗತ್ಯವಾದ ವಿವರಗಳನ್ನು ಸಂಗ್ರಹಿಸಲು ಒಂದು ನಮೂನೆಯನ್ನು ತಯಾರಿಸುತ್ತಾರೆ. ಅದರಲ್ಲಿ ಈ ವಿವರಗಳಿರುತ್ತವೆ :

1 ಆ ಕಾರ್ಯದ ಉದ್ದೇಶಗಳು,
2 ಆ ಕಾರ್ಯದ ವಿವರಗಳನ್ನು ಗುರುತಿಸುವುದು,
3 ಆ ಕಾರ್ಯದ ಪರ್ಯಾಯ ರೀತಿಗಳು,
4 ಆ ಕಾರ್ಯದ ವೆಚ್ಚಾನುಕೂಲಗಳು,
5 ವಿವಿಧ ಹಂತಗಳಲ್ಲಿ ಆ ಕಾರ್ಯದ ವೆಚ್ಚಾನುಕೂಲದ ವಿವರಗಳು,
6 ಮಾನವ ಶಕ್ತಿ ಮತ್ತು ಹಣಕಾಸಿನ ಅಗತ್ಯತೆಯ ವಿವರಗಳು.

ವಿವಿಧ ಪರ್ಯಾಯ ಕಾರ್ಯಗಳನ್ನು ಮೌಲ್ಯಾಂಕನ ಮಾಡಿ ಗುರುತಿಸುವುದೇ ಇದರ ಮುಖ್ಯ ಉದ್ದೇಶ. ಹೀಗೆ ಎಲ್ಲ ಪರ್ಯಾಯ ರೀತಿಗಳನ್ನು ಪರಿಗಣಿಸಿ ಕೊನೆಗೆ ಅತಿ ಉತ್ತಮವಾದ ನಿರ್ಣಯವನ್ನು ಆಯ್ಕೆ ಮಾಡಿ, ಆ ಕಾರ್ಯದ ಕನಿಷ್ಠ ಮಟ್ಟವನ್ನು ಸೂಚಿಸುತ್ತಾರೆ. ಈ ಮಟ್ಟದ ಕೆಳಗೆ ಆ ಕಾರ್ಯವನ್ನು ನಡೆಸುವಂತಿಲ್ಲ.

(iii) ಹೀಗೆ ತಯಾರಿಸಿದ ನಿರ್ಣಯಗಳ ಸಂವೇಷ್ಟನಗಳನ್ನು ಕಾರ್ಯಾತ್ಮಕ ವ್ಯವಸ್ಥಾಪಕರು ವೆಚ್ಚಾನುಕೂಲಗಳ ವಿಶ್ಲೇಷಣೆಯೊಂದಿಗೆ ಇತರ ಹಣಕಾಸೇತರ ಅಂಶಗಳನ್ನು ಪರಿಗಣಿಸಿ ಮೊದಲ ಬಾರಿಗೆ ಶ್ರೇಣೀಕರಿಸಿ ಮುಂಗಡಪಟ್ಟಿಯ ಸಮಿತಿಗೆ ಕಳುಹಿಸುತ್ತಾರೆ.

ಮುಂಗಡಪಟ್ಟಿಯ ಸಮಿತಿಯು ಎಲ್ಲ ಸಂವೇಷ್ಟನಗಳನ್ನು ಪುನರ್ಪರಿಶೀಲಿಸಿ, ಸಂಸ್ಥೆಗೆ ಅವುಗಳಿಂದಾಗುವ ಉಪಯುಕ್ತತೆಗಳ ಹೋಲಿಕೆಯ ಮೇರೆಗೆ ಮತ್ತೆ ಶ್ರೇಣೀಕರಿಸುತ್ತದೆ. ಅನಂತರ

ನಿರ್ದೇಶಕರು ರಚಿಸಿರುವ ಉನ್ನತ ಸಮಿತಿಯು ಆಗಿನ ಖರ್ಚುಗಳ ಮಟ್ಟಕ್ಕೆ ಹೊಂದುವಂತೆ ಕೊನೆಯ ಬಾರಿಗೆ ಶ್ರೇಣೀಕರಿಸುತ್ತದೆ.

ಮುಖ್ಯ ಲಕ್ಷಣಗಳು

1 ಒಂದಂಶಕ್ಕಾಗಿ 'ಎಷ್ಟು' ಖರ್ಚಾಗುವುದೆಂಬುದರ ಜತೆಗೆ 'ಏಕೆ' ಖರ್ಚು ಮಾಡಬೇಕೆಂಬುದನ್ನು ಕುರಿತು ಆಲೋಚಿಸುತ್ತಾರೆ.

2 ಒಂದು ನಿರ್ದಿಷ್ಟ ವೆಚ್ಚಕ್ಕೆ ಆ ಅಂಶದ ಕೊಡುಗೆ ಏನೆಂಬುದನ್ನು ಆಧರಿಸಿ ಆಯ್ಕೆಯನ್ನು ಮಾಡುತ್ತಾರೆ.

3 ಪ್ರತಿಯೊಂದು ಅಂಶದ ಉದ್ದೇಶವನ್ನು ಸಂಸ್ಥೆಯ ಧ್ಯೇಯಗಳೊಡನೆ ಹೊಂದಿಸಲಾಗುತ್ತದೆ.

4 ಒಂದು ವೇಳೆ ಕಾರ್ಯಾವಧಿಯಲ್ಲಿ ಖರ್ಚಿನ ಮಟ್ಟವನ್ನು ಹಾಗೆಯೇ ಇರಿಸಲು ಅಂಶದ ಖರ್ಚಿನಲ್ಲಿ ಕಡಿತ ಮಾಡಬೇಕಾದರೆ ಮುಂಗಡಪಟ್ಟಿಯಲ್ಲಿ ತ್ವರಿತವಾದ ಹೊಂದಾಣಿಕೆಗೆ ಅವಕಾಶವಿದೆ.

5 ಒಂದು ಕಾರ್ಯದ ಪರ್ಯಾಯ ವಿಧಾನಗಳನ್ನು ಪರಿಗಣಿಸುತ್ತಾರೆ.

6 ಎಲ್ಲ ಮಟ್ಟದ ನಿರ್ವಾಹಕರೂ ನಿರ್ಣಯಕಾರ್ಯದಲ್ಲಿ ಭಾಗವಹಿಸುತ್ತಾರೆ.

ಅನುಕೂಲಗಳು

1 ಶೂನ್ಯಾಧಾರ ಮುಂಗಡಪಟ್ಟಿಯ ತಯಾರಿಕೆಯಲ್ಲಿ ಎಲ್ಲ ಮಟ್ಟದ ವ್ಯವಸ್ಥಾಪಕರೂ ಭಾಗವಹಿಸಿ, ಹೊಣೆಗಳನ್ನು ಹಂಚಿಕೊಳ್ಳುವುದರಿಂದ ಈ ವಿಧಾನದ ಸಫಲತೆಗೆ ಅವಕಾಶವಿರುತ್ತದೆ.

2 ಪ್ರತಿವರ್ಷವೂ ಶೂನ್ಯಾಧಾರ ಮುಂಗಡಪಟ್ಟಿಯನ್ನೇ ತಯಾರಿಸುವುದರಿಂದ ಇತರ ವಿಧಾನಗಳಿಗಿಂತ ಈ ತಂತ್ರದಲ್ಲಿ ಹೆಚ್ಚು ನಮ್ಯತೆ ಇರುತ್ತದೆ.

3 ಈ ತಂತ್ರದ ಅಳವಡಿಕೆಯಿಂದ ಹಣಕಾಸಿನ ಯೋಜನೆ ಮತ್ತು ವ್ಯವಸ್ಥಾಪನ ಮಾಹಿತಿ ವ್ಯವಸ್ಥೆಯನ್ನು ಉತ್ತಮವಾಗಿಸಬಹುದು.

4 ಮುಂಗಡಪಟ್ಟಿಯ ಪ್ರತಿಯೊಂದು ಅಂಶವನ್ನೂ ವೆಚ್ಚಾನುಕೂಲಗಳ ಮೇರೆಗೆ ಮೌಲ್ಯಾಂಕನ ಮಾಡುವುದರಿಂದ, ಈ ತಂತ್ರದ ಮೂಲಕ ನಷ್ಟಗಳ ನಿವಾರಣೆ, ಅದಕ್ಷತೆಯ ನಿವಾರಣೆ ಹಾಗೂ ಉತ್ಪಾದನ ವೆಚ್ಚಗಳನ್ನು ತಗ್ಗಿಸಲು ಸಾಧ್ಯವಾಗುತ್ತದೆ.

ಹೋಲಿಕೆ—ವ್ಯತ್ಯಾಸ

ಸಾಂಪ್ರದಾಯಿಕ ಮುಂಗಡಪಟ್ಟಿ	ಶೂನ್ಯಾಧಾರ ಮುಂಗಡಪಟ್ಟಿ
1 ಈ ಪದ್ಧತಿಯು ಲೆಕ್ಕಶಾಸ್ತ್ರವನ್ನು ಆಧರಿಸಿರುವುದರಿಂದ 'ಎಷ್ಟು ಖರ್ಚು' ಮಾಡಬೇಕೆಂಬುದನ್ನು ಪರಿಗಣಿಸುತ್ತದೆ.	1 ಈ ಪದ್ಧತಿಯು ನಿರ್ಣಯಗಳನ್ನಾಧರಿಸಿರುವುದರಿಂದ 'ಹೇಗೆ' ಖರ್ಚುಮಾಡಬೇಕೆಂಬುದನ್ನು ಪರಿಗಣಿಸುತ್ತದೆ.
2 ಖರ್ಚುಗಳಿಗೆ ಪ್ರಾಮುಖ್ಯವನ್ನು ಕೊಡುತ್ತದೆ.	2 ಉದ್ದೇಶಗಳ ಸಾಧನೆಗೆ ಪ್ರಾಮುಖ್ಯವನ್ನು ಕೊಡುತ್ತದೆ.
3 ಸಂಘಟನೆಯ ಸಿಬ್ಬಂದಿಗಳ ಸಂಪರ್ಕಕ್ಕೆ ಅವಕಾಶವಿಲ್ಲ.	3 ಶ್ರೇಣಿ ಮತ್ತು ಸಿಬ್ಬಂದಿ ಸಂಘಟನೆಯಲ್ಲಿ ಸಂಪರ್ಕಗಳಿಗೆ ಅವಕಾಶವಿದೆ.
4 ವೆಚ್ಚಗಳಲ್ಲಿ ಏರಿಕೆಯನ್ನು ಕುರಿತು ಚರ್ಚಿಸುತ್ತಾರೆ.	4 ಚರ್ಚೆಯಲ್ಲಿ ಒಂದಂಶವನ್ನು ಮುಂಗಡಪಟ್ಟಿಯಲ್ಲಿ ಸೇರಿಸಲು ಅಥವಾ ಕೈಬಿಡಲು ಪ್ರಾಮುಖ್ಯವನ್ನು ಕೊಡುತ್ತಾರೆ.

ಮಿತಿಗಳು

ಶೂನ್ಯಾಧಾರ ಮುಂಗಡಪಟ್ಟಿಯ ಪದ್ಧತಿಯಲ್ಲಿರುವ ಕೆಲವು ವೈಚಿತ್ರ್ಯಗಳಿಂದ ಈ ತಂತ್ರವನ್ನು ಎಲ್ಲ ಕ್ಷೇತ್ರಗಳಿಗೂ ಸಮಾನ ರೀತಿಯಲ್ಲಿ ಬಳಸಲು ಸಾಧ್ಯವಿಲ್ಲ. ಆ ಕಾರಣಗಳು ಹೀಗಿವೆ :

1 ನಿರ್ಣಯದ ಶ್ರೇಣೀಕರಣವೊಂದು ವೈಜ್ಞಾನಿಕ ತಂತ್ರ. ಎಲ್ಲ ಮಟ್ಟದ ವ್ಯವಸ್ಥಾಪಕರ ಸಾಮಾನ್ಯ ಹೊಣೆಗಳಿಗೆ ಇದು ಹೊರತಾಗಿದೆ. ಸಂಸ್ಥೆಯ ಎಲ್ಲ ವ್ಯವಸ್ಥಾಪಕರಿಗೂ ಈ ತಂತ್ರದಲ್ಲಿ ಚತುರತೆ ಗಳಿಸುವುದು ಸಾಧ್ಯವಿಲ್ಲ.

2 ವೆಚ್ಚಾನುಕೂಲದ ವಿಶ್ಲೇಷಣೆಯು ಈ ತಂತ್ರದ ತಳಹದಿಯಾಗಿದೆ. ಆದರೆ ಎಲ್ಲ ಮಟ್ಟದ ಸಿಬ್ಬಂದಿಗಳಿಗೆ ಈ ವಿಶ್ಲೇಷಣೆಯಲ್ಲಿ ಚಾತುರ್ಯವಿರುವುದಿಲ್ಲ.

3 ಪರಸ್ಪರ ಪೂರಕವಾಗಿರುವ ನಿರ್ಣಯಗಳ ಸಂವೇಷ್ಟನಗಳನ್ನು ಶ್ರೇಣೀಕರಿಸುವುದು ಸುಲಭದ ಕೆಲಸವಲ್ಲ.

4 ಒಂದು ಕಾರ್ಯದ ಪರ್ಯಾಯ ರೀತಿಗಳನ್ನು ಹುಡುಕುವುದು ಕಷ್ಟದ ಕೆಲಸ.

5 ಎಲ್ಲ ಬಗೆಯ ಅನುಕೂಲಗಳನ್ನೂ ಸಂಖ್ಯಾತ್ಮಕವಾಗಿ ಮಾಪನ ಮಾಡುವುದು ತೊಡಕಾದ ಸಮಸ್ಯೆ.

6 ಶೂನ್ಯಾಧಾರ ಮುಂಗಡಪಟ್ಟಿ ತಂತ್ರದ ಮೂಲ ಊಹೆಯಾಗಿರುವ ಪೂರ್ವಾಪರಗಳ ಅಸಮರ್ಪಕತೆಯು, ಲೆಕ್ಕಶಾಸ್ತ್ರದ ಮೂಲ ತತ್ವವಾದ ಮುಂದುವರಿಯುವಿಕೆಯನ್ನು ಪ್ರಶ್ನಿಸುತ್ತದೆ. ಸಾಮಾನ್ಯವಾಗಿ ಮುಂಗಡಪಟ್ಟಿಯ ತಯಾರಿಕೆಯೊಂದು ಮುಂದುವರಿಯುವ ಪ್ರಕ್ರಿಯೆ ಹಾಗೂ ಭವಿಷ್ಯದ ಸಾಧನೆಯ ಅಂದಾಜುಗಳು ಪೂರ್ವದ ಸಾಧನೆಗಳನ್ನಾಧರಿಸಿರುತ್ತವೆ.

7 ಆನುಷಂಗಿಕ ಸಂದರ್ಭಗಳು ವ್ಯವಹಾರದಲ್ಲಿ ತಲೆದೋರಿದಾಗ ಈ ಮುಂಗಡಪಟ್ಟಿಯಲ್ಲಿ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ. ಆಗ ಯೋಜನಾಂಶಗಳನ್ನು ಪುನಃ ಶ್ರೇಣಿಕರಿಸಬೇಕಾಗಿರುವುದರಿಂದ ಈ ವ್ಯವಸ್ಥೆಯಲ್ಲಿ ನಮ್ಯತೆ ಇಲ್ಲ.

8 ನೂರಾರು ನಿರ್ಣಯಗಳಿರುವುದರಿಂದ ಕಾರ್ಯಕ್ಷೇತ್ರದ ಅಧಿಕಾರಿಗಳಿಗೆ ಹೆಚ್ಚು ಸಮಯ ಬೇಕಾಗುತ್ತದೆ ಮತ್ತು ಆಡಳಿತಾತ್ಮಕ ವೆಚ್ಚಗಳು ದುಬಾರಿಯಾಗಿರುತ್ತವೆ.

9 ಕೆಳ ಶ್ರೇಣಿಯಲ್ಲಿ ಸೂಚಿಸಿರುವ ಯೋಜನಾಂಶವು ಹಣಕಾಸೇತರ ಅಂಶವಾಗಿರಬಹುದು ಅಥವಾ ಸಾಮಾಜಿಕ ಹೊಣೆಗಾರಿಕೆಯ ಅಂಶವಾಗಿರಬಹುದು. ಆದ್ದರಿಂದ ವ್ಯವಸ್ಥಾಪಕರು ಆ ಅಂಶಗಳನ್ನು ತಿರಸ್ಕರಿಸುವಂತಿಲ್ಲ.

ಸಂಪನ್ಮೂಲಗಳ ಕೊರತೆ ಇರುವುದರಿಂದ ಖರ್ಚುಗಳಿಗೆ ಆದ್ಯತೆ ನೀಡುವ ವಿಚಾರವನ್ನು ಕುರಿತು ಶೂನ್ಯಾಧಾರ ಮುಂಗಡಪಟ್ಟಿಯ ಸಿದ್ಧಾಂತಗಳನ್ನು ಒಪ್ಪಲೇಬೇಕು. ಆದರೆ ಆಚರಣೆಗೆ ತರಲು ಇರುವ ತೊಂದರೆಗಳು, ಈ ಪದ್ಧತಿಯ ವೆಚ್ಚಗಳು ಮತ್ತಿತರ ಪ್ರಭಾವಗಳನ್ನು ಪರಿಗಣಿಸದೆ ಇರುವಂತಿಲ್ಲ. ಈ ಪದ್ಧತಿಯು ಪ್ರಯೋಗಾವಸ್ಥೆಯನ್ನು ದಾಟಿ, ಜನಪ್ರಿಯವಾಗಲು ಸಮಯ ಬೇಕಾದೀತು.

ಮೇಲಿನ ಶೂನ್ಯಾಧಾರ ಮುಂಗಡಪಟ್ಟಿಯ ವಿವರಗಳು ಭಾರಿ ಉತ್ಪಾದನ ಘಟಕಗಳಿಗೆ ಅನ್ವಯಿಸುತ್ತದೆ. ಇದರಲ್ಲಿ ಸಾಂಪ್ರದಾಯಿಕ ಪದ್ಧತಿಯ ಮತ್ತು ಸಾಧನಾ ಮುಂಗಡಪಟ್ಟಿಯ ಲಕ್ಷಣಗಳನ್ನೂ ಕಾಣಬಹುದು. ಮುಂಗಡಪಟ್ಟಿಯ ತಯಾರಿಕೆಯ ಪ್ರಕ್ರಿಯೆಯಲ್ಲಿ ಪರಿಪೂರ್ಣತೆಯನ್ನರಸುವ ಒಂದು ಪ್ರಯತ್ನವಾಗಿದೆ. ಈ ತಂತ್ರದ ಬಳಕೆಯು ಸುಲಭವಲ್ಲವೆಂದು ಹೇಳಿದ್ದರೂ, ನಿರ್ದಿಷ್ಟ ಚಟುವಟಿಕೆಗಳಿಗಾಗಿ ಈ ಪದ್ಧತಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಬಳಸುವುದು ಅಸಾಧ್ಯವಲ್ಲ. ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತಿರುವ ಆರ್ಥಿಕ ಸ್ಥಿತಿ-ಗತಿಗಳಲ್ಲಿ ಶೂನ್ಯಾಧಾರ ಮುಂಗಡಪಟ್ಟಿಯ ತಯಾರಿಕೆ ಮತ್ತು ಬಳಕೆಗೆ ಅವಕಾಶಗಳಿವೆ. ಅವು ವಿಪತ್ತಿನ ನಿರ್ವಹಣೆಯ ಕಾರ್ಯಕ್ರಮಗಳು, ಪರಿಸರ ರಕ್ಷಣಾ ಚಟುವಟಿಕೆಗಳು, ಮಹಿಳೆಯರ, ಶಿಶುಗಳ ಮತ್ತು ಅಂಗವಿಕಲರ ಅಭಿವೃದ್ಧಿ ಹಾಗೂ ಪುನಃಸ್ಥಾಪನಾ ಕಾರ್ಯಕ್ರಮಗಳು, ಸಂಸ್ಥೆಗಳ ಸ್ವರೂಪ ವಿಕಸನ ಚಟುವಟಿಕೆಗಳು, ಸಾಹಸೋದ್ಯಮಗಳು. ಮತ್ತಿತರ ಅಚ್ಚ ಹೊಸ ವ್ಯವಹಾರದ ಚಟುವಟಿಕೆಗಳು. ●

ಅಧಿಕ ಠೇವಣಿ ವಿಮಾ ಸೌಲಭ್ಯ

1993ರ ಮೇ 1ರಿಂದ ಜಾರಿಗೆ ಬರುವಂತೆ ಬ್ಯಾಂಕ್ ಠೇವಣಿಗಳ ಮೇಲಿನ ಠೇವಣಿ ವಿಮಾ ಸೌಲ್ಯಕ್ಕೆ ಇದುವರೆಗೂ ಇದ್ದ ರೂ. 30,000 ಠೇವಣಿ ಮಿತಿಯನ್ನು ರೂ. 1,00,000ಕ್ಕೆ ಹೆಚ್ಚಿಸಲಾಗಿದೆ. ಈ ಸಂಬಂಧವಾಗಿ ಬ್ಯಾಂಕುಗಳು ಭರಿಸಬೇಕಾದ ವಿಮಾ ಕಂತನ್ನು ಪ್ರತಿ ನೂರು ರೂ.ಗಳಿಗೆ 5 ಪೈಸೆಯಂತೆ ಏರಿಸಲಾಗಿದೆ.

ನಷ್ಟಾನುಭವಿ ಬ್ಯಾಂಕುಗಳು

ಸಾರ್ವಜನಿಕ ಕ್ಷೇತ್ರದ 20 ಬ್ಯಾಂಕುಗಳಲ್ಲಿ ಕೇವಲ 6 ಬ್ಯಾಂಕುಗಳು ಲಾಭ ಗಳಿಸುತ್ತಿವೆ. ಇನ್ನು 6 ಬ್ಯಾಂಕುಗಳು ಲಾಭ-ನಷ್ಟದ ನಡುವಣ ರೇಖೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಉಳಿದ ಎಲ್ಲ ಬ್ಯಾಂಕುಗಳೂ ನಷ್ಟ ಅನುಭವಿಸಿವೆ.

ರಾಷ್ಟ್ರೀಯ ಸಹಕಾರಿ ಬ್ಯಾಂಕ್

ಭಾರತೀಯ ರಾಷ್ಟ್ರೀಯ ಸಹಕಾರಿ ಬ್ಯಾಂಕಿನ ಸ್ಥಾಪನೆಗೆ ಹಣಕಾಸು ಮಂತ್ರಾಲಯದ ಒಪ್ಪಿಗೆ ದೊರಕಿದೆ. ಈ ಬ್ಯಾಂಕಿನ ಅಧಿಕೃತ ಬಂಡವಾಳ ರೂ. 100 ಕೋಟಿ. ನೀಡಿಕೆಯಾಗುವ ಬಂಡವಾಳ ರೂ. 50 ಕೋಟಿ. ರಾಜ್ಯ ಸಹಕಾರಿ ಬ್ಯಾಂಕುಗಳು, ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು. ನಗರ ಸಹಕಾರಿ ಬ್ಯಾಂಕುಗಳು ಹೊಸ ಭಾರತೀಯ ರಾಷ್ಟ್ರೀಯ ಸಹಕಾರಿ ಬ್ಯಾಂಕಿನ ಸದಸ್ಯತ್ವಕ್ಕೆ ಅರ್ಹತೆ ಪಡೆದಿರುತ್ತವೆ.

ಸ್ಟೇಟ್ ಬ್ಯಾಂಕಿನ ಯೂರೋಪ್ ಅವತಾರ

ಭಾರತೀಯ ಸ್ಟೇಟ್ ಬ್ಯಾಂಕ್ ಯುರೋಪಿಯನ್ ಬ್ಯಾಂಕ್ (ನಿಯಮಿತ) 1993ರ ಮಾರ್ಚ್ 29ರಿಂದ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದೆ. ಈ ಬ್ಯಾಂಕು ಭಾರತೀಯ ಸ್ಟೇಟ್ ಬ್ಯಾಂಕಿನ ಸಹಾಯಕ ಬ್ಯಾಂಕ್ ಆಗಿದೆ. ಪಶ್ಚಿಮದ ಯೂರೋಪಿನ ದೇಶಗಳ ಒಟ್ಟುಗೂಡುವಿಕೆಯ ಪರಿಣಾಮವಾಗಿ ಅಲ್ಲಿಯ ಮಾರುಕಟ್ಟೆಗೆ ಅನುಗುಣವಾಗಿ ವ್ಯವಹಾರ ಸುಗಮಗೊಳಿಸಲು ಈ ಬ್ಯಾಂಕನ್ನು ಆರಂಭಿಸಲಾಗಿದೆ.

ಜಿ. ಎಸ್. ರವೀಂದ್ರ
ಸಿ. ಆರ್. ಸತೀಸ್‌ಚಂದ್ರ
ಭಾರತೀಯ ಸ್ಟೇಟ್ ಬ್ಯಾಂಕ್

ಆದಾಯ ಗುರುತಿಸುವಿಕೆ ಮತ್ತು ಆಸ್ತಿ ವರ್ಗೀಕರಣ

ಟಿ. ಎಸ್. ಶ್ರವಣಕುಮಾರಿ

ಭಾರತೀಯ ಸ್ಟೇಟ್ ಬ್ಯಾಂಕ್, ಜಯನಗರ ೨ನೆಯ ಬ್ಲಾಕ್, ಬೆಂಗಳೂರು ೧೧

ಉತ್ಪಾದಕ ಆಸ್ತಿಯ ನಿರ್ಮಾಣವಾಗಲೆಂಬ ಉದ್ದೇಶದಿಂದ ಬ್ಯಾಂಕುಗಳು ಸಾಮಾನ್ಯವಾಗಿ ಕೊಡಮಾಡುವ ಸಾಲಗಳು ಇಂದು ಹೆಚ್ಚಿನ ಪ್ರಮಾಣದಲ್ಲಿ ನಿರರ್ಥಕವಾಗಿವೆ. ಬಡ್ಡಿಯ ಮಾತಿರಲಿ, ಅಸಲೇ ವಾಪಸು ಬಾರದಂಥ ಅಪಾಯ ಬಂದೊದಗಿದೆ. ಆದರೂ ಇಂಥ ಸಾಲಗಳ ಮೇಲೆ ಬರಬೇಕಾದ ಬಡ್ಡಿಯನ್ನು ಮಾತ್ರ ಕಾಲಕಾಲಕ್ಕೆ ಸರಿಯಾಗಿ ಲಾಭವೆಂದು ಪರಿಗಣಿಸಿ ಸಂತೋಷಿಸುವುದು ಬ್ಯಾಂಕುಗಳ ಪರಿಪಾಟ. ಈ ಭ್ರಮಾವಿಲಾಸವನ್ನು ತೊಡೆಯಲು ಇದೀಗ ರಿಸರ್ವ್ ಬ್ಯಾಂಕ್ ಕಟ್ಟುನಿಟ್ಟಾದ ಕ್ರಮ ರೂಪಿಸುತ್ತಿದೆ.

ಬ್ಯಾಂಕುಗಳ ಮೂಲಭೂತವಾದ ಎರಡು ಕೆಲಸಗಳು ಠೇವಣಿಗಳನ್ನು ಇರಿಸಿಕೊಳ್ಳುವುದು ಹಾಗೂ ಸಾಲಗಳನ್ನು ನೀಡುವುದೇ ಆಗಿದೆ. ಸಾಲಗಳ ಮೇಲೆ ಅದು ವಿಧಿಸುವ ಬಡ್ಡಿ ಹಾಗೂ ಠೇವಣಿಗಳ ಮೇಲೆ ಅದು ನೀಡುವ ಬಡ್ಡಿಯಲ್ಲಿನ ವ್ಯತ್ಯಾಸಗಳ ಮೊತ್ತವೇ ಅದರ ಲಾಭಗಳಿಕೆಯ ಮೂಲತತ್ತ್ವ. ಅಂದಮೇಲೆ ಸಾಲ ನೀಡಿಕೆ ಹಾಗೂ ಅದರ ಮರುಪಾವತಿಯೇ ಬ್ಯಾಂಕಿನ ಲಾಭದ ಮುಖ್ಯ ಅಂಶ. ಸಾಲದ ಮರುಪಾವತಿ ಹಾಗೂ ಅದರ ಮೇಲಿನ ಬಡ್ಡಿಯ ಮೊತ್ತದ ಪಾವತಿ ಎಷ್ಟೆಷ್ಟು ಕಡಿಮೆಯಾಗುತ್ತಾ ಹೋಗುತ್ತದೋ ಬ್ಯಾಂಕಿನ ಲಾಭಗಳಿಕೆಯೂ ಅಷ್ಟಷ್ಟೇ ಕಡಿಮೆಯಾಗುತ್ತಾ ಹೋಗುತ್ತದೆ.

ಬ್ಯಾಂಕುಗಳು ಪ್ರತಿವರ್ಷ ಪ್ರಕಟಿಸುವ ಸ್ಥಿತಿ ವಿವರಣಪಟ್ಟಿಯಲ್ಲಿ ಅದರ ಲಾಭದ ಅಥವಾ ನಷ್ಟದ ಚಿತ್ರಣವಿರುತ್ತದೆ. ಅದು ಸೂಚಿಸುವ ಲಾಭ ನಿಜವಾದುವೇ, ಇಲ್ಲವೇ ಬರೀ ಭ್ರಮೆಯೇ ಎನ್ನುವುದು ವಿಚಾರ ಮಾಡಬೇಕಾದ ವಿಷಯ. ಇಷ್ಟು ವರ್ಷಗಳೂ ಎಲ್ಲಾ ಬ್ಯಾಂಕುಗಳು ತಮ್ಮ ಸಾಲ ಖಾತೆಗಳ ಮೇಲೆ ಕಾಲಕಾಲಕ್ಕನುಗುಣವಾಗಿ ಹಾಗೂ ಸಾಲ ನೀಡಿಕೆಯ ನಿಬಂಧನೆಗಳಿಗನುಗುಣವಾಗಿ ಸರಳ ಬಡ್ಡಿ ಇಲ್ಲವೇ ಚಕ್ರಬಡ್ಡಿಯನ್ನು ವಿಧಿಸುತ್ತಾ ಬಂದಿದ್ದು, ಅದು ನಿಜವಾಗಿ ವಸೂಲಾಗಿದೆಯೇ ಇಲ್ಲವೇ ಎನ್ನುವುದರ ಚಿತ್ರವನ್ನು ಅದರ ಸ್ಥಿತಿ ವಿವರಣ ಪಟ್ಟಿ ನೀಡುತ್ತಿರಲಿಲ್ಲ. ಸಾಲ ಖಾತೆಗೆ ಯಾವುದೇ ಮೊತ್ತ ಜಮೆಯಾಗದಿದ್ದರೂ ಬ್ಯಾಂಕುಗಳ ಪಾಲಿಗೆ ಅವು ವಿಧಿಸಿದ ಬಡ್ಡಿಯೆಲ್ಲವೂ ಲಾಭವೆ! ಅಸಲೇ ವಸೂಲಾಗದಿರುವಾಗ ಲಾಭದ ಪ್ರಶ್ನೆ ಸಾಧ್ಯವೆ? ಇದು ಬ್ಯಾಂಕಿನ ಲಾಭಗಳಿಕೆಯ ಸ್ಪಷ್ಟ ಚಿತ್ರಣವೆ? ಎನ್ನುವುದು ಪ್ರಶ್ನಾರ್ಹ.

ಬ್ಯಾಂಕುಗಳು ಸಾಲ ನೀಡುವುದರ ಉದ್ದೇಶ ಅದರಿಂದ ಒಂದು ಉತ್ಪನ್ನಕಾರಕ ಆಸ್ತಿಯನ್ನು ಸೃಷ್ಟಿಸುವುದು. ವೈಯಕ್ತಿಕ ಸಾಲಗಳ ಹೊರತಾಗಿ ಮಿಕ್ಕೆಲ್ಲಾ ರೀತಿಯ ಸಾಲಗಳೂ ಒಂದು ರೀತಿಯಲ್ಲಿ ಉತ್ಪನ್ನಕಾರಕ ಆಸ್ತಿಗಳನ್ನು ಸೃಷ್ಟಿಸಿ ಅದರಿಂದ ಆದಾಯವನ್ನು ಪಡೆಯುತ್ತವೆ. ಈ ಆದಾಯದಿಂದ ಸಾಲದ ಹಾಗೂ ಬಡ್ಡಿಯ ಮರುಪಾವತಿಯನ್ನು ಮಾಡಬೇಕಾಗಿರುವುದು ನಿಯಮ. ಯಾವುದೇ ಸಾಲಕ್ಕೆ ಬೇರೆ ಆಧಾರಗಳನ್ನು ಪಡೆದುಕೊಳ್ಳುವುದು ಬ್ಯಾಂಕಿನ ಹಿತರಕ್ಷಣೆಯ ದೃಷ್ಟಿಯಿಂದ ಮಾತ್ರ. ಈ ಸಕ್ರಿಯ ಆಸ್ತಿ ನಿಷ್ಪ್ರಯೋಜಕವಾದರೆ ಅದರಿಂದ ಆದಾಯ ಉತ್ಪತ್ತಿಯೂ ಇಲ್ಲ; ಸಾಲದ ಮರುಪಾವತಿ ಹಾಗೂ ಬಡ್ಡಿಯ ವಸೂಲಿಯ ಮಾತಂತೂ ಇಲ್ಲವೇ ಇಲ್ಲ. ಬ್ಯಾಂಕುಗಳು ಮಾತ್ರ ಪ್ರತಿ ಅವಧಿಗೂ ಬಡ್ಡಿಯನ್ನು ಎಣಿಸುತ್ತಾ ಬಂದರೆ ನಿಷ್ಕ್ರಿಯಾತ್ಮಕ ಆಸ್ತಿಗಳು ಜಿಗಟು ಆಸ್ತಿಗಳಾಗಿ ಮಾರ್ಪಾಡುಗೊಂಡು ಅಸಲು ಬಡ್ಡಿಗಳೆರಡೂ ಸೇರಿಕೊಂಡು ಅದಕ್ಕೆ ತಕ್ಕುದಾದ ಉಪಬಂಧದ ವ್ಯವಸ್ಥೆಯೂ ಇಲ್ಲದಿದ್ದರೆ ಒಮ್ಮೆಲೆ ದುಪ್ಪಟ್ಟು ನಷ್ಟವನ್ನು ಎದುರಿಸಬೇಕಾಗುತ್ತದೆ.

ತಿಳಿದುಕೊಳ್ಳುವ ಬಗೆ ಹೇಗೆ?

ಸಾಲ ಖಾತೆಗಳ ಸ್ಥಿತಿಗಳನ್ನು ಮೊದಲೇ ಮುಂಗಾಣಲು ಬ್ಯಾಂಕುಗಳು ಸ್ವಾಸ್ಥ್ಯ ಸಂಕೇತಗಳನ್ನು ಹೊಂದಿವೆ. ಇದರಲ್ಲಿ ಒಟ್ಟು ಎಂಟು ಸಂಕೇತಗಳಿವೆ. (1) ಆರೋಗ್ಯಕರ ಖಾತೆ, (2)

ಅನಿಯಂತ ಖಾತೆ, (3) ರೋಗಗ್ರಸ್ತ ಅರ್ಥಸಾಧ್ಯ ಖಾತೆ, (4) ರೋಗಗ್ರಸ್ತ ಅರ್ಥಸಾಧ್ಯವಲ್ಲದ ಖಾತೆ, (5) ವಾಪಸು ಕರೆದ ಮುಂಗಡಗಳು, (6) ದಾವೆ ಹೂಡಿದ ಖಾತೆಗಳು, (7) ಡಿಕ್ರಿಯಾದ ಖಾತೆಗಳು ಹಾಗೂ (8) ಕರಡು ಋಣ ಮತ್ತು ಸಂಶಯಾಸ್ಪದ ಋಣ ಖಾತೆಗಳು. ಇವುಗಳ ಮೊದಲ ಮೂರು ವಿಭಾಗಗಳಲ್ಲಿರುವ ಖಾತೆಗಳಿಂದ ಬರುವ ಆದಾಯ ಬಹುಮಟ್ಟಿಗೆ ನಿಶ್ಚಿತವಾದುದಾಗಿದ್ದೆ. ನಾಲ್ಕನೆಯದರಿಂದ ಬರುವ ಆದಾಯ ಪರಿಶೀಲನೆಗೊಳಪಟ್ಟು ವಸೂಲಿಸಾಧ್ಯ ಮೊತ್ತದ ಲೆಕ್ಕಾಚಾರವಾಗಬೇಕು. ಹಾಗೂ ಐದರಿಂದ ಎಂಟರವರೆಗಿನ ವಿಭಾಗಗಳಲ್ಲಿರುವ ಖಾತೆಗಳಿಂದ ವಸೂಲಿಯಾಗುವತನಕ ಆದಾಯವನ್ನು ಗಣನೆಗೆ ತೆಗೆದುಕೊಳ್ಳುವಂತೆಯೇ ಇಲ್ಲ.

ಈ ಸ್ವಾಸ್ಥ್ಯ ಸಂಕೇತ ವ್ಯವಸ್ಥೆಯ ಜೊತೆಜೊತೆಗೆ 1ನೆಯ ಏಪ್ರಿಲ್,1992ರಿಂದ ಅನ್ವಯವಾಗುವಂತೆ ಭಾರತೀಯ ರಿಸರ್ವ್ ಬ್ಯಾಂಕು ನರಸಿಂಹಮ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಒಪ್ಪಿಕೊಂಡಿದೆ. ಈ ಸಮಿತಿಯು ಆದಾಯ ಗುರುತಿಸುವಿಕೆ, ಆಸ್ತಿ ವರ್ಗೀಕರಣ, ಉಪಬಂಧೀಕರಣ ಮೊದಲಾದವುಗಳ ಬಗೆಗೆ ಅನೇಕ ಸಲಹೆಗಳನ್ನು ನೀಡಿದೆ. ಆದಾಯ ಗುರುತಿಸುವಿಕೆ ಮತ್ತು ಸಾಲ ವಸೂಲಾತಿಯ ನೇರ ಸಂಬಂಧವನ್ನು ಪ್ರಸ್ತಾಪಿಸಿ ತಮ್ಮ ನೈಜ ಸ್ಥಿತಿಗತಿಗಳ ಚಿತ್ರಣವನ್ನು ನೀಡಲು ಕರೆ ನೀಡಿದೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕು ಎಲ್ಲಾ ಬ್ಯಾಂಕುಗಳಿಗೂ ನಿಯಮಾವಳಿಗಳೊಂದಿಗೆ ತನ್ನ ಆದೇಶಗಳನ್ನು ನೀಡಿದೆ. ''ಆದಾಯ ಗುರುತಿಸುವಿಕೆ ಹಾಗೂ ಆಸ್ತಿ ವರ್ಗೀಕರಣ'' ವ್ಯವಸ್ಥೆಯು ಸ್ವಾಸ್ಥ್ಯ ಸಂಕೇತ ವ್ಯವಸ್ಥೆಯ ಮುಂದುವರಿದ ಭಾಗವಾಗಿದೆ. ಸ್ವಾಸ್ಥ್ಯ ಸಂಕೇತ ವ್ಯವಸ್ಥೆಯಿಂದ ಸಾಲ ಖಾತೆಗಳ ಸ್ಥಿತಿಗತಿಗಳು ತಿಳಿದರೂ ಬ್ಯಾಂಕುಗಳಿಗೆ ಅವುಗಳಿಂದುಂಟಾಗಬಹುದಾದ ಪರಿಣಾಮಗಳ ಬಗ್ಗೆ ಹಾಗೂ ಆ ಪರಿಸ್ಥಿತಿಯನ್ನು ಎದುರಿಸಲು ಬ್ಯಾಂಕುಗಳು ಸನ್ನದ್ಧವಾಗಲು ಬೇಕಿರುವ ಪೂರ್ವಸಿದ್ಧತೆಗಳ ಬಗ್ಗೆ ಅದರಲ್ಲಿ ಹೆಚ್ಚಿನ ಮಾಹಿತಿಗಳಿಲ್ಲ. ಆದರೆ ಈ ಪುನರ್‌ರೂಪಿತವ್ಯವಸ್ಥೆಯಲ್ಲಿ ಬ್ಯಾಂಕುಗಳು ಪರಿಣಾಮಕಾರಿಯಾಗಿ ಅಂತಹ ಪರಿಸ್ಥಿತಿಗಳನ್ನು ಎದುರಿಸಲು ಸನ್ನದ್ಧವಾಗಬೇಕಾಗಿದೆ.

ಖಾತೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ತೀರ್ಮಾನಗಳು

ಹೊಸ ನಿಯಮಾವಳಿಗಳ ಪ್ರಕಾರ ಆಸ್ತಿಗಳು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡವಾಗುತ್ತವೆ: (1) ಸಕ್ರಿಯ ಆಸ್ತಿಗಳು, (2) ನಿಷ್ಕ್ರಿಯ ಆಸ್ತಿಗಳು.

ಯಾವ ಖಾತೆಯಲ್ಲಿ ಋಣಿಸಿದ ನಾಲ್ಕು ಅವಧಿಗಳ (ಮೂರು ತಿಂಗಳಿಗೊಂದು ಅವಧಿ) ಬಡ್ಡಿಯು ವಸೂಲಾಗಿಲ್ಲವೊ ಅಂತಹ ಖಾತೆಗಳನ್ನು ನಿಷ್ಕ್ರಿಯ ಆಸ್ತಿಯನ್ನು ಹೊಂದಿದ ಖಾತೆಗಳೆಂದು ವರ್ಗೀಕರಿಸಬೇಕು. ಕೃಷಿ ಸಾಲ ಖಾತೆಗಳಿಗೆ ಎರಡು ಕೃಷಿಚಕ್ರಗಳ ಕಾಲಮಿತಿಯಲ್ಲಿ ಬಡ್ಡಿ ವಸೂಲಾಗದಿದ್ದಲ್ಲಿ ನಿಷ್ಕ್ರಿಯ ಆಸ್ತಿಯೆಂದು ವರ್ಗೀಕರಿಸಬೇಕು. ಪ್ರಾರಂಭಿಕ ಅವಧಿ ನೀಡಿರುವ ಸಾಲಗಳಿಗೆ ಅವಧಿ ಮುಗಿದ ಅನಂತರವೂ ಬಡ್ಡಿ ವಸೂಲಾಗದಿದ್ದಲ್ಲಿ ಅವನ್ನು ನಿಷ್ಕ್ರಿಯ ಆಸ್ತಿಯೆಂದು ತಿಳಿಯಬೇಕು. ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ನೀಡಿರುವ ಸಾಲ ಸೌಲಭ್ಯಗಳಲ್ಲಿ ಸಾಲ ಮರುಪಾವತಿಯಾದ ಅನಂತರ ಬಡ್ಡಿ ಪಾವತಿಯಾಗಬೇಕಿದ್ದಲ್ಲಿ ಅಂತಹ ಸಾಲಗಳಲ್ಲಿ ಬಡ್ಡಿಯನ್ನು ನೀಡಬೇಕಾದ ಕಾಲದ ವರೆಗೂ ಆಸ್ತಿಯನ್ನು ನಿಷ್ಕ್ರಿಯವೆಂದು ತೀರ್ಮಾನಿಸಲಾಗುವುದಿಲ್ಲ. ಎಲ್ಲಾ ರೀತಿಯ ಸಾಲಗಳಲ್ಲೂ ಬಡ್ಡಿಯ ಪಾವತಿಗೆ ಅವಧಿಯ ಅನಂತರದ ಮೂವತ್ತು ದಿನಗಳ ಅವಕಾಶವನ್ನು ನೀಡಲಾಗಿದೆ. ಮೂವತ್ತು ದಿನಗಳ ಅನಂತರವೂ ಪಾವತಿಯಾಗದಿದ್ದಲ್ಲಿ ಮಾತ್ರ ಅವು ದಿನಾಂಕ ಮೀರಿದ ಪಾವತಿಗಳಾಗುತ್ತವೆ. ಈ ರೀತಿಯಲ್ಲಿ ಸಕ್ರಿಯ ಆಸ್ತಿಗಳನ್ನು ಪರಿಶೀಲಿಸುವಾಗ ಪಾವತಿಯ ಅವಧಿಗಳನ್ನು ಒಂದನೆಯ ಏಪ್ರಿಲ್ 1991ರಿಂದ ಮಾತ್ರ ಗಣನೆಗೆ ತೆಗೆದುಕೊಳ್ಳಬೇಕು. ಪ್ರಸ್ತುತ ವರ್ಷದಲ್ಲಿ ಅಂದರೆ 1992–93ರಲ್ಲಿ ನಿಷ್ಕ್ರಿಯ ಆಸ್ತಿಯನ್ನು ಪರಿಗಣಿಸಲು ನಾಲ್ಕು ಅವಧಿಗಳನ್ನು ನೀಡಿದ್ದರೆ 1993–94ರಲ್ಲಿ ಅದು ಮೂರು ಅವಧಿಗಳಿಗೆ ಹಾಗೂ 1994–95ರಲ್ಲಿ ಕೇವಲ ಎರಡು ಅವಧಿಗಳಿಗೆ ಸೀಮಿತವಾಗಿದೆ. ನಗದು ಉದರಿ ಖಾತೆಗಳಲ್ಲಿ ಆ ಕಾಲಾವಧಿಯ ಜಮಾ ಸಂಕಲನ ಆ ಖಾತೆಗೆ ಋಣಿಸಿದ ಬಡ್ಡಿಯ ಮೊತ್ತಕ್ಕಿಂತಲೂ ಹೆಚ್ಚಾಗಿದ್ದರೆ ಅವು ಸಕ್ರಿಯ ಆಸ್ತಿಗಳೆಂದು ತೀರ್ಮಾನಿಸಲಾಗುವುದು.

ಸರ್ಕಾರ ಜಾಮೀನು ನೀಡಿರುವ ಯಾವುದೇ ಸಾಲಗಳನ್ನು ನಿಷ್ಕ್ರಿಯ ಆಸ್ತಿಯೆಂದು ತಿಳಿಯಲಾಗುವುದಿಲ್ಲ. ಇದರಲ್ಲಿ ರಾಷ್ಟ್ರೀಯ ಉಳಿತಾಯ ಪತ್ರ ಅಥವಾ ಇನ್ನಿತರ ಅಂತಹದ್ದೇ ಬಾಂಡುಗಳನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ಒಬ್ಬ ಸಾಲಗಾರನಿಗೆ ಒಂದಕ್ಕಿಂತ ಹೆಚ್ಚು ಸಾಲ ಖಾತೆಗಳಿದ್ದಲ್ಲಿ ಅವುಗಳಲ್ಲಿ ಒಂದು ಖಾತೆಯು ನಿಷ್ಕ್ರಿಯವಾದರೆ ಮಿಕ್ಕೆಲ್ಲಾ ಖಾತೆಗಳನ್ನು ನಿಷ್ಕ್ರಿಯವೆಂದೇ ಪರಿಗಣಿಸಬೇಕು. ಸಾಲಗಾರನ ಅಥವಾ ಜಾಮೀನುದಾರನ ಮೌಲ್ಯಕ್ಕಿಂತಲೂ ಮರುಪಾವತಿಯ ದಾಖಲೆಯೇ ಸಾಲದ ಮೌಲ್ಯಮಾಪನಕ್ಕೆ ಆಧಾರ. ಸಂಗಮ ಸಾಲ ಖಾತೆಗಳಲ್ಲಿ ನಾಯಕತ್ವ ವಹಿಸಿದ ಬ್ಯಾಂಕ್ ಆ ಖಾತೆಯ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತದೋ ಮಿಕ್ಕ ಬ್ಯಾಂಕುಗಳದೂ ಅದೇ ತೀರ್ಮಾನವಾಗಬೇಕಾಗುತ್ತದೆ.

ವಿಂಗಡಣೆಯ ನೀತಿಗಳು

ಮೇಲ್ಕಂಡ ತಳಹದಿಯ ಮೇಲೆ ಸಾಲಖಾತೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲು ಯೋಜಿಸಲಾಗಿದೆ: (1) ಶಿಷ್ಟ ಆಸ್ತಿಗಳು, (2) ಅರೆಶಿಷ್ಟ ಆಸ್ತಿಗಳು, (3) ಅನುಮಾನ ಆಸ್ತಿಗಳು ಹಾಗೂ (4) ನಷ್ಟ ಆಸ್ತಿಗಳು.

ಶಿಷ್ಟ ಆಸ್ತಿಗಳೆಂದರೆ ಉತ್ತಮ ಖಾತೆಗಳು ಹೊಂದಿರುವ ಆಸ್ತಿಗಳು. ಇವುಗಳ ವಿಷಯದಲ್ಲಿ ಬ್ಯಾಂಕರನಿಗೆ ಯಾವುದೇ ವ್ಯವಹಾರದಲ್ಲಿರಬಹುದಾದ ಸಾಮಾನ್ಯ ಮುನ್ನೆಚ್ಚರಿಕೆಗಿಂತ ಹೆಚ್ಚಿನ ಎಚ್ಚರಿಕೆ ಬೇಕಾಗಿಲ್ಲ.

ವ್ಯವಹಾರವನ್ನು ಮಂದಗೊಳಿಸುವುದು, ಜೊತೆಜೊತೆಗೆ ಬೇರೆ ವ್ಯವಹಾರ ಉದ್ದಿಮೆಗಳಲ್ಲಿ ಸಾಲದ ಹಣವನ್ನು ತೊಡಗಿಸುವುದು, ಪದೇಪದೇ ಡ್ರಾಯಿಂಗ್ ಮಿತಿಯನ್ನು ಮೀರುವುದು, ಮೀರೆಳೆತದ

ಮಿತಿಗಿಂತಲೂ ಹೆಚ್ಚಾಗಿ ಚೆಕ್ಕುಗಳನ್ನು ನೀಡುವುದು, ಪದೇಪದೇ ಆ ಖಾತೆಯಿಂದ ನೀಡಿದ ಚೆಕ್ಕುಗಳು ಹಿಂದಿರುಗುವುದು, ಕಾಲಕ್ಕೆ ಸರಿಯಾಗಿ ದಾಸ್ತಾನು ವಿವರಣ ತಃಖ್ತೆಯನ್ನೂ ಸ್ಥಿತಿ ವಿವರಣ ಪಟ್ಟಿಗಳನ್ನೂ ನೀಡದಿರುವುದು ಮೊದಲಾದ ಕಾರಣಗಳು ಯಾವುದೇ ಸಾಲ ಖಾತೆಯನ್ನು ಕಳಪೆ ಆಸ್ತಿಯೆಂದು ತೀರ್ಮಾನಿಸುತ್ತವೆ. ಯಾವುದೇ ಖಾತೆ ಎರಡು ವರ್ಷಗಳಿಗಿಂತಲೂ ಕಡಮೆ ಅವಧಿಗೆ ನಿಷ್ಕ್ರಿಯವಾಗಿ ಉಳಿದಿದ್ದರೆ ಅದನ್ನು ಅರೆಶಿಷ್ಟ ಆಸ್ತಿಯೆಂದು ವರ್ಗೀಕರಿಸಲಾಗುತ್ತದೆ. ಎರಡು ವರ್ಷಗಳಿಗೂ ಮೀರಿ ಅರೆಶಿಷ್ಟ ಆಸ್ತಿಯಾಗಿಯೇ ಮುಂದುವರಿದರೆ ಅದು ಅನುಮಾನ ಆಸ್ತಿಯಾಗಿ ಪರಿವರ್ತಿತವಾಗುತ್ತದೆ. ಬ್ಯಾಂಕಾಗಲಿ, ಲೆಕ್ಕಪರಿಶೋಧಕರಾಗಲಿ ಯಾವುದೇ ಆಸ್ತಿಯನ್ನು ಸಂಪೂರ್ಣವಾಗಿಯೇ ಆಗಲಿ, ಭಾಗಶಃವೇ ಆಗಲಿ ಅದು ವಸೂಲಿ ಸಾಧ್ಯವಲ್ಲವೆಂದು ತೀರ್ಮಾನಿಸಿದರೆ ಅದು ನಷ್ಟ ಆಸ್ತಿಯೆಂದು ತೀರ್ಮಾನಿಸಲ್ಪಡುತ್ತದೆ. ಯಾವುದೇ ಖಾತೆಯನ್ನು ಅದರ ಕೆಳಗಿನ ಮಟ್ಟದಿಂದ ಮೇಲ್ಮಟ್ಟಕ್ಕೆ ತರಬೇಕಾದರೆ ಅದು ಕನಿಷ್ಠ ಪಕ್ಷ ಎರಡು ವರ್ಷ ಆ ಮೇಲ್ಮಟ್ಟದಲ್ಲಿಯೇ ವ್ಯವಹಾರವನ್ನು ನಡೆಸಬೇಕು.

ಕಾರ್ಯವಿಧಾನ

ಈ ರೀತಿ ಯಾವುದೇ ಖಾತೆ ನಿಷ್ಕ್ರಿಯ ಆಸ್ತಿಯೆಂದು ತೀರ್ಮಾನವಾದಲ್ಲಿ ಅದಕ್ಕೆ ಆ ಅವಧಿಯಲ್ಲಿ ಋಣಿಸಿದ ಎಲ್ಲಾ ಬಡ್ಡಿಯನ್ನು "ವಸೂಲಿಯಾಗದ ಬಡ್ಡಿಯ ಖಾತೆ"ಗೆ ಜಮಾ ಮಾಡಿ ಇದರ ವಿವರಗಳನ್ನು ಒಂದು ಪುಸ್ತಕದಲ್ಲಿ ಖಾತೆಯ ವಿಭಾಗಕ್ಕನುಗುಣವಾಗಿ ಬರೆದಿಡಬೇಕು. ಖಾತೆ ಪುಸ್ತಕದಲ್ಲಿ ಆ ಖಾತೆಯಿರುವ ಹಾಳೆಯಲ್ಲಿ ಇದರ ಬಗ್ಗೆ ಉಲ್ಲೇಖವಿರಬೇಕು. ಅನಂತರ ಆ ಖಾತೆಗೆ ಬರುವ ಎಲ್ಲಾ ಬಡ್ಡಿಯ ಜಮೆಗಳನ್ನು ವಸೂಲಿಯಾಗದೇ ಉಳಿದ ಬಡ್ಡಿಗೆ ಜಮೆ ಮಾಡಿಕೊಂಡು ವಸೂಲಿಯಾಗದ ಬಡ್ಡಿಯ ಖಾತೆಗೆ ಋಣಿಸಬೇಕು. ಒಂದು ಸಲ ನಿಷ್ಕ್ರಿಯ ಆಸ್ತಿಯೆಂದು ತೀರ್ಮಾನವಾದಲ್ಲಿ ಅದಕ್ಕೆ ಅನಂತರ ಯಾವುದೇ ಬಡ್ಡಿಯನ್ನು ಋಣಿಸಬಾರದು. ಪ್ರತಿ ಅವಧಿಯಲ್ಲಿ ಅದಕ್ಕೆ ತಗಲಬಹುದಾದ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಆ ಸಾಲ ಖಾತೆ ಮುಕ್ತಾಯವಾಗಬೇಕಾದ ಸಂದರ್ಭ ಬಂದಾಗ ಮಾತ್ರ ಅದನ್ನು ಖಾತೆಗೆ ಋಣಿಸಿ ವಸೂಲಿ ಮಾಡಿಕೊಳ್ಳಬೇಕು. 30–3–1992ಕ್ಕೂ ಹಿಂದೆ ಇಂತಹ ಖಾತೆಗಳಿಗೆ ಋಣಿಸಿದ ಬಡ್ಡಿಯನ್ನು ವಸೂಲಿಯಾಗದ ಬಡ್ಡಿಯ ಖಾತೆಗೆ ಹಾಕುವಂತಿಲ್ಲ. ಆದರೆ ಉಪಬಂಧ ಮಾಡುವಾಗ ಮಾತ್ರ ಇದನ್ನು ಗಣನೆಗೆ ತಂದುಕೊಳ್ಳಬೇಕು.

ಉಪಬಂಧ

ಹೀಗೆ ನಿಷ್ಕ್ರಿಯ ಖಾತೆಗಳ ಬಡ್ಡಿಯನ್ನು ಹಿಂದಿರುಗಿಸಿದ ಅನಂತರ ಅದಕ್ಕೆ ತಕ್ಕ ಉಪಬಂಧವನ್ನು ಮಾಡಬೇಕು.

ಅರೆಶಿಷ್ಟ ಆಸ್ತಿಗಳ ಒಟ್ಟು ಮೊತ್ತದ ಶೇಕಡ 10ನ್ನು ಉಪಬಂಧವಾಗಿ ತೆಗೆದಿರಿಸಬೇಕು. ಅನುಮಾನ ಆಸ್ತಿಗಳ ಬಗ್ಗೆ ಅವುಗಳ ವಸೂಲಿಸಾಧ್ಯ ಮೊತ್ತವನ್ನು ಕಳೆದ ಮೇಲೆ ಉಳಿದ ಅಷ್ಟು ಮೊತ್ತಕ್ಕೂ ಉಪಬಂಧವಾಗಬೇಕು. ಇದರ ಜೊತೆಗೆ ಕಳೆದ ಒಂದು ವರ್ಷದಿಂದ ಮಾತ್ರ ಅನುಮಾನ ಆಸ್ತಿಯೆಂದು ಪರಿಗಣಿಸಿದ್ದರೆ ಅವುಗಳ ವಸೂಲಿಸಾಧ್ಯ ಮೊತ್ತದ ಶೇಕಡ 10ರಷ್ಟನ್ನು ಉಪಬಂಧಕ್ಕೆ ಸೇರಿಸಬೇಕು. ಒಂದು ವರ್ಷದ ಅನಂತರ ಹಾಗೂ ಮೂರು ವರ್ಷದೊಳಗಿದ್ದರೆ ಶೇಕಡ 30ರಷ್ಟನ್ನು, ಮೂರು ವರ್ಷಕ್ಕೂ ಮೇಲ್ಪಟ್ಟು ಅದು ಅನುಮಾನ ಆಸ್ತಿಯಾಗಿ ಮುಂದುವರಿದಿದ್ದರೆ ವಸೂಲಿಸಾಧ್ಯ ಮೊತ್ತದ ಶೇಕಡ 50ರಷ್ಟನ್ನು ಉಪಬಂಧದ ಜೊತೆಯಲ್ಲಿ ಸೇರಿಸಿಕೊಳ್ಳಬೇಕು. ವಸೂಲಿಸಾಧ್ಯ ಮೊತ್ತವನ್ನು ತೀರ್ಮಾನಿಸುವಾಗ ಠೇವಣಿ ವಿಮೆ ಮತ್ತು ಉದರಿ ಖಾತರಿ ನಿಗಮದಿಂದಾಗಲಿ ಇನ್ನಿತರೆ ಯಾವುದೇ ಸರ್ಕಾರದ ಅಂಗಸಂಸ್ಥೆಗಳಿಂದಾಗಲಿ ಆ ಖಾತೆಗೆ ಬರುವ ಮೊತ್ತವನ್ನು ಪರಿಗಣಿಸಿಕೊಳ್ಳಬೇಕು. ಈ ರೀತಿಯಲ್ಲಿ ಮಾಡಬೇಕಾದ ಉಪಬಂಧ ವ್ಯವಸ್ಥೆಗೆ ಒಂದು ಸರಳ ಉದಾಹರಣೆಯನ್ನು* ನೀಡಬಹುದು.

(ವಿವರಕ್ಕೆ ಮುಂದಿನ ಪುಟ ನೋಡಿ)

ನಷ್ಟ ಆಸ್ತಿಯ ಬಗೆಗೆ ವಸೂಲಿಸಾಧ್ಯ ಮೊತ್ತದ ಯಾವುದೇ ಲೆಕ್ಕಾಚಾರವನ್ನು ಮಾಡದೆ ಪೂರಾ ಮೊತ್ತಕ್ಕೆ ಉಪಬಂಧ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

ಯಾವುದೇ ಬ್ಯಾಂಕ್ ವಸೂಲಿಯಾಗದ ಬಡ್ಡಿಯನ್ನು ತನ್ನ ಲಾಭದ ಮೊತ್ತಕ್ಕೆ ಸೇರಿಸಿಕೊಳ್ಳುವಂತಿಲ್ಲ. ವಸೂಲಿಯಾಗದ ಬಡ್ಡಿಯನ್ನು ತೆಗೆದುಹಾಕಿ ಅನುತ್ಪಾದಕ ಆಸ್ತಿಗಳಿಗೆ ತಕ್ಕ ಉಪಬಂಧವನ್ನು ಮಾಡಿದ ಮೇಲೆ ಉಳಿದ ಮೊತ್ತವೇ ಅದರ ಲಾಭಗಳಿಕೆಯಾಗುತ್ತದೆ. ಈ ರೀತಿಯಾಗಿ ಲೆಕ್ಕಾಚಾರ ಹಾಕಿದ ಅನಂತರ ಉಳಿದ ಲಾಭದ ಮೊತ್ತ ಆ ಬ್ಯಾಂಕಿನ ಸ್ಥಿತಿಗತಿಗಳ ವಿವರಗಳನ್ನು ಸತ್ಯಕ್ಕೆ ಹೆಚ್ಚು ಹತ್ತಿರವಾಗಿ ನೀಡುತ್ತದೆ.

ಈ ರೀತಿಯಾಗಿ ಎಲ್ಲ ಖಾತೆಗಳನ್ನು ವರ್ಷಕ್ಕೆ ಎರಡು ಬಾರಿ ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಈ ಅವಧಿಯಲ್ಲಿ ಅದರಲ್ಲಿ ಕಾಣಿಸುವ ಯಾವುದೇ ಬೆಳವಣಿಗೆಯನ್ನು ಎಚ್ಚರಿಕೆಯಿಂದ ಗಮನಿಸಿ ಅದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ಈ ಹೊಸ ರೀತಿನೀತಿಗಳಿಂದ ಬ್ಯಾಂಕುಗಳು ಇದುವರೆಗೂ ಗಳಿಸುತ್ತಿದ್ದ ಲಾಭದಲ್ಲಿ ಕಡಿತವುಂಟಾಗಿದೆ. ಬ್ಯಾಂಕುಗಳು ಈ ನಷ್ಟದಿಂದ ಪಾರಾಗಲು ವಸೂಲಿಗೆ ಅತ್ಯಂತ ಹೆಚ್ಚಿನ ಗಮನವನ್ನು ನೀಡುತ್ತಿವೆ. ಸಾಲ ವಸೂಲಾತಿ ಹಾಗೂ ಬಡ್ಡಿ ವಸೂಲಾತಿಗೆ ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿವೆ. ಸಾಲಗಾರರಿಗೆ ಹೊಸ ಕ್ರಮದ ಬಗ್ಗೆ ತಿಳಿವಳಿಕೆಯನ್ನು ನೀಡಿ ಅವರ ಸಾಲ ಖಾತೆ 'ಶಿಷ್ಟ ಆಸ್ತಿ ಖಾತೆ'ಯಾಗಬೇಕಾದುದರ ಅವಶ್ಯಕತೆಯನ್ನು ತಿಳಿಸಿಕೊಡುತ್ತಿದೆ. ಮೊದಲಿನ ಹಾಗೆ ಈಗ ಖಾತೆಯ ಮೀರೆಳೆತದ ಅಧಿಕಾರವನ್ನು ಮೀರಲು ಸುಲಭವಾಗಿ ಒಪ್ಪುತ್ತಿಲ್ಲ. ಇರುವ ಸೌಲಭ್ಯಕ್ಕಿಂತ ಹೆಚ್ಚಿಗೆ ಬೇಕಾದಲ್ಲಿ ನಿಜವಾಗಿಯೂ ಅವಶ್ಯಕತೆ ಇರುವ ಖಾತೆಗಳಿಗೆ ಬ್ಯಾಂಕುಗಳು ಸಾಲಗಳನ್ನು ಹೆಚ್ಚಿನ ಮಿತಿಗೆ ನವೀಕರಿಸುತ್ತವೆಯೇ ಹೊರತು ಖಾತೆಯನ್ನು ನಿಷ್ಕ್ರಿಯ ಆಸ್ತಿಯಾಗಿ ಮಾರ್ಪಾಡಾಗಲು ಬಿಡುತ್ತಿಲ್ಲ. ಬ್ಯಾಂಕುಗಳ ಸಾಲ ನೀಡಿಕೆಯ

ಗುಣಮಟ್ಟ ಹಾಗೂ ವಸೂಲಾತಿಯ ಗುಣಮಟ್ಟ ಹೆಚ್ಚುತ್ತಿದೆ. ನಷ್ಟ ಆಸ್ತಿಗಳನ್ನು ಪೂರ್ತಿಯಾಗಿ ತೆಗೆದುಹಾಕಬೇಕಾದಾಗ ತಕ್ಕ ಉಪಬಂಧದ ವ್ಯವಸ್ಥೆ ಇರುವುದರಿಂದ ಒಮ್ಮೆಲೇ ನಷ್ಟವನ್ನು ಅನುಭವಿಸುತ್ತಿಲ್ಲ. ಇದರಿಂದ ಬ್ಯಾಂಕಿಗೂ ಗ್ರಾಹಕರಿಗೂ ಇಬ್ಬರಿಗೂ ಒಂದು ರೀತಿಯಲ್ಲಿ ಒಳ್ಳೆಯದೇ ಆಗಿದೆ.

ದೇಶದ ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆಗಳು

ಇನ್ನು ಮುಂದೆ ಬ್ಯಾಂಕುಗಳ ಲಾಭಗಳಿಕೆ ಕಷ್ಟಸಾಧ್ಯವಾಗಬಹುದು. ಕಳೆದ ವರ್ಷ ಕೇವಲ ಮೂರು ಬ್ಯಾಂಕುಗಳು ನಷ್ಟವನ್ನು ತೋರಿಸಿದ್ದರೆ ಈ ವರ್ಷ ಇದು ಹದಿನಾಲ್ಕಕ್ಕೆ ಏರಿದೆ. ಈ ವರ್ಷದ ಆಯವ್ಯಯ ಪತ್ರದಲ್ಲಿ ಬ್ಯಾಂಕುಗಳು ತಮ್ಮ ಬಂಡವಾಳಕ್ಕಾಗಿ ಸಾರ್ವಜನಿಕ ಮಾರುಕಟ್ಟೆಯಲ್ಲಿ ತಮ್ಮ ಷೇರುಗಳನ್ನು ಮಾರಿಕೊಳ್ಳಲು ಸೂಚಿಸಿದೆ. ಆದರೆ ನಷ್ಟವಾಗುತ್ತಿರುವ ಸಂಸ್ಥೆಯ ಷೇರುಗಳನ್ನು ಕೊಳ್ಳಲು ಜನರು ಮುಂದೆ ಬರುತ್ತಾರೆಯೇ ಎಂಬುದು ಪ್ರಶ್ನೆ. ಬ್ಯಾಂಕುಗಳ ವಸೂಲಾತಿಯು ಅಂಶ ಶೇಕಡ 50ಕ್ಕೂ ಕಡಿಮೆಯಿರುವಾಗ ಇಷ್ಟೆಲ್ಲಾ ಕ್ರಮಗಳ ನಡುವೆ ಲಾಭಗಳಿಸುತ್ತವೆಯೇ ? ಇತರ ಹಣಕಾಸು ಸಂಸ್ಥೆಗಳಿಗೆ ಇರುವ ವಸೂಲಾತಿಯ ಅಧಿಕಾರವನ್ನು ಬ್ಯಾಂಕುಗಳಿಗೂ ನೀಡಿದರೆ ಅವುಗಳ ವಸೂಲಾತಿ ಮಟ್ಟ ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದು. ಈ ವರ್ಷ ಲಾಭದಾಯಕ ಸ್ಥಿತಿಯಲ್ಲಿರುವ ಬ್ಯಾಂಕುಗಳ ಜೊತೆ ನಷ್ಟವಾಗಿರುವ ಬ್ಯಾಂಕುಗಳು ವಿಲೀನವಾಗುವ ಪ್ರಯತ್ನಗಳು ನಡೆಯುತ್ತಾ ಇವೆ. ಬ್ಯಾಂಕಿಂಗ್ ವಲಯ ಈ ಕ್ರಮಗಳಿಂದ ತಲ್ಲಣಗೊಂಡಿದೆ.

ಈ ಹೊಸ ಕ್ರಮಗಳಿಂದ ಬ್ಯಾಂಕುಗಳು ಈವರೆಗೆ ನೀಡುತ್ತಿದ್ದಷ್ಟು ಸುಲಭವಾಗಿ ಇನ್ನು ಮುಂದೆ ಸಾಲಗಳನ್ನು ನೀಡಲು ಸಾಧ್ಯವಾಗದೆ ಹೋಗಬಹುದು. ಸಂಪೂರ್ಣ ಖಾತರಿ ಇದ್ದರೆ ಮಾತ್ರ ಸಾಲ ಸಿಗಬಹುದು. ಆದ್ಯತಾ ವಲಯಗಳಿಗೆ ಸಾಲ ನೀಡುವ ಮಾತಂತೂ ದೂರವೇ ಉಳಿಯಬಹುದು. ಇನ್ನೂ ಮುಂದುವರಿದು ಯೋಚಿಸಿದರೆ ಈ ರೀತಿಯಾಗಿ ಬ್ಯಾಂಕುಗಳು ನಷ್ಟವನ್ನು ತೋರಿಸುತ್ತಿದ್ದರೆ ಸಾರ್ವಜನಿಕರಲ್ಲಿ ಬ್ಯಾಂಕುಗಳ ಬಗೆಗಿನ ನಂಬಿಕೆ ಸಡಿಲವಾಗಿ ಅವುಗಳ ಠೇವಣಿಯ ಬೆಳವಣಿಗೆ ಕುಂಠಿತವಾಗಬಹುದು. ಇದರಿಂದ ಬ್ಯಾಂಕುಗಳ ಸಾಲ ನೀಡಿಕೆ ಸಾಮರ್ಥ್ಯ ಕುಗ್ಗಬಹುದು.

ಇಷ್ಟೆಲ್ಲಾ ಆಗಬಹುದೆಂದು ಭಾವಿಸಿದರೂ ಸಾಲ ನೀಡಿಕೆಯ ಗುಣಮಟ್ಟ ಹೆಚ್ಚುತ್ತಾ ಹೋಗುವುದರಿಂದ ನಿಷ್ಕ್ರಿಯ ಆಸ್ತಿಗಳ ಪ್ರಮಾಣ ಕುಗ್ಗುತ್ತಾ ಹೋಗುವುದು. ಶಿಷ್ಟ ಆಸ್ತಿಗಳು ಮಾತ್ರ ಹೆಚ್ಚುತ್ತಾ ಹೋಗುವುದರಿಂದ ಅವುಗಳ ವಸೂಲಾತಿಯ ಮಟ್ಟವೂ ಹೆಚ್ಚುತ್ತಾ ಬ್ಯಾಂಕುಗಳು ಹೆಚ್ಚು ಲಾಭವನ್ನು ಗಳಿಸಬಹುದು. ಇದರಿಂದ ಮತ್ತೆ ಬ್ಯಾಂಕುಗಳ ಸಾಲ ನೀಡಿಕೆಯ ಸಾಮರ್ಥ್ಯ ಹೆಚ್ಚುವ ಸಾಧ್ಯತೆಯೂ ಇಲ್ಲದೆ ಇಲ್ಲ. ಗುಣಮಟ್ಟವನ್ನು ಕಾದುಕೊಂಡು ಹೋದರೆ ಬ್ಯಾಂಕುಗಳ ಪ್ರಗತಿ ದೇಶದ ಆರ್ಥಿಕ ಪ್ರಗತಿಗೆ ಅಡಿಪಾಯವಾಗಬಲ್ಲದು. ಈ ಹೊಸ ರೀತಿನೀತಿಗಳು ಎಷ್ಟರಮಟ್ಟಿಗೆ ಸಫಲವಾಗಬಹುದೆಂದು ಮುಂಬರುವ ವರ್ಷಗಳಲ್ಲಿ ಕಾದುನೋಡಬೇಕು. ●

* **ಉದಾಹರಣೆ** (ಹಿಂದಿನ ಪುಟದಲ್ಲಿ ಪ್ರಸ್ತಾಪಿಸಲಾಗಿದೆ)

ಬ್ಯಾಂಕಿನ ಸಾಲದ ಮೊತ್ತ : 1 ಲಕ್ಷ ರೂಪಾಯಿಗಳು
ವಸೂಲಿ ಸಾಧ್ಯ ಮೊತ್ತ : 80,000-00 ರೂಪಾಯಿ

ಸಂಶಯಾಸ್ಪದ ಅವಧಿ	ಅನುಪಯುಕ್ತ ಅವಧಿ	ಉಪಬಂಧ ಆಧಾರರಹಿತ ಭಾಗ ಶೇ.	ಉಪಬಂಧ ಆಧಾರರಹಿತ ಭಾಗ ಮೊತ್ತ	ಉಪಬಂಧ ಆಧಾರಸಹಿತ ಭಾಗ ಶೇ.	ಉಪಬಂಧ ಆಧಾರಸಹಿತ ಭಾಗ ಮೊತ್ತ	ಮೊತ್ತ
1 ವರ್ಷದವರೆಗೆ	3 ವರ್ಷದವರೆಗೆ	100	0.20	20	0.16	0.36
1-3 ವರ್ಷದವರೆಗೆ	3-5 ವರ್ಷದವರೆಗೆ	100	0.20	30	0.24	0.44
3 ವರ್ಷಕ್ಕೆ ಮೇಲ್ಪಟ್ಟು	5 ವರ್ಷಕ್ಕೆ ಮೇಲ್ಪಟ್ಟು	100	0.20	50	0.40	0.60

R. N. 36702/83

With best compliments from

Grams: VEECEEYEE
Mark : V. C. E.

Phones: Off : 2864 &
Resi: 4222 &

VIJAYALAKSHMI COTTON ENTERPRISES

Administrative Office

R. M. C. Yard, P. B. No. 61

CHITRADURGA-577 501 [Karnataka]

PRINTED BY G. H. KRISHNAMURTHY, MYSORE PRINTING AND PUBLISHING HOUSE, CLOCK TOWER SQUARE, MYSORE-1